# ಹೊಸ ಮನುಷ್ಯ

**ಸಮಾಜವಾದಿ ಮಾಸಿಕ**

**ಅಕ್ಟೋಬರ್, ೨೦೨೦** **ಸಂಪಾದಕ : ಡಿ.ಎಸ್. ನಾಗಭೂಷಣ** **ಸಂಪುಟ: ೯ ಸಂಚಿಕೆ: ೯**

**ಚಂದಾ ರೂ. ೨೦೦/- (ಅಕ್ಟೋಬರ್‌ನಿಂದ ಸೆಪ್ಟಂಬರ್‌ವರೆಗೆ) ಸಂಸ್ಥೆಗಳಿಗೆ** ರೂ. ೩೦೦/- ಪುಟ: ೨೦ ಬೆಲೆ: ರೂ. ೨೫/-

**ವಿಳಾಸ:** ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ ***ಈ ಮೇಲ್:*** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಒಂದು ಕಾಲದಲ್ಲಿ ರಾಜಕೀಯವಾಗಿ ಒಂದು ಆದರ್ಶವಾಗಿದ್ದ ಪ್ರಜಾಪ್ರಭುತ್ವ ಪದ್ಧತಿ ಎಂಬುದು ಈಗ ಜಗತ್ತಿನಾದ್ಯಂತ ತನ್ನ ಅಧೋಗತಿಯನ್ನು ಕಾಣುತ್ತಿರುವಂತಿದೆ. ನಮ್ಮ ದೇಶವೂ ಇದಕ್ಕೆ ಹೊರತಲ್ಲ. ಬಹುಶಃ ನಾಗರೀಕತೆ ಮತ್ತು ಸಂಸ್ಕೃತಿಗಳ ಹೆಸರಿನಲ್ಲಿ ಮನುಷ್ಯ ನಿರ್ಮಿಸಿಕೊಂಡ ಎಲ್ಲ ವ್ಯವಸ್ಥೆಗಳ ಪಾಡೂ ಇದೇ ಆಗಿರಬಹುದು. ಕಾಲದ ಹೊಡೆತಗಳು ಉಂಟು ಮಾಡುವ ಬದಲಾವಣೆಗಳು ಎಲ್ಲ ವ್ಯವಸ್ಥೆಗಳನ್ನು ಕ್ರಮೇಣ ಅವುಗಳ ನಾಮ ಮಾತ್ರ ರೂಪಕ್ಕೆ ಇಳಿಸಿ ಅವು ಅಳಿಯಲು ಅಥವಾ ಪರಿವರ್ತನೆ ಹೊಂದಲು ವೇದಿಕೆಯನ್ನು ಸಿದ್ಧಪಡಿಸುತ್ತವೆ. ನಮ್ಮ ದೇಶದ ಪ್ರಜಾಪ್ರಭುತ್ವ ಇದಕ್ಕೊಂದು ಪ್ರತ್ಯಕ್ಷ ಸಾಕ್ಷಿ.

ಮನುಷ್ಯ ಸಮಾಜದ ಸುವ್ಯವಸ್ಥೆಗಾಗಿ, ವ್ಯಕ್ತಿ ಸಾಮರ್ಥ್ಯದ ಪೂರ್ಣ ಅನಾವರಣಕ್ಕಾಗಿ ತನ್ನ ವಿವೇಕದಿಂದ ಒಂದು ವ್ಯವಸ್ಥೆಯನ್ನು ರೂಪಿಸಿದಾಗ ಅದರ ತಿರುಳನ್ನು ಕಾಪಾಡುಲೋಸುಗ ಅದಕ್ಕೆ ಒಂದು ತಕ್ಕ ರೂಪದ ರಚನೆ ಮಾಡಿರುತ್ತಾನೆ. ಆದರೆ ಕಾಲ ಕಳೆದಂತೆ ಯಾವ ಸಮಾಜಕ್ಕಾಗಿ ಅದನ್ನು ರೂಪಿಸಲಾಗಿತ್ತೋ ಆ ಸಮಾಜವೇ ಬದಲಾಗಿ ಅದು ತನ್ನ ಹೊಸ ಉದ್ದೇಶಗಳಿಗೆ ತಕ್ಕಂತೆ ಅದನ್ನು ಪುನರ್‌ರೂಪಿಸಿಕೊಳ್ಳುವ ಪ್ರಯತ್ನ ಮಾಡುವುದು ಸಹಜ. ಆದರೆ ತಿರುಳಿಗೆ, ತನ್ನದೇ ಆದ ಐತಿಹಾಸಿಕ ಪಾವಿತ್ರ್ಯವಿರುವುದರಿಂದ ಅವನು ಅದಕ್ಕೆ ಕೈ ಹಾಕಲು ಹಿಂಜರಿಯುತ್ತ ಅದರ ರೂಪವನ್ನು ಅಂದರೆ ಅದಕ್ಕೆ ಕಾರಣವಾಗಿರುವ ರಚನೆಗಳನ್ನು ಬದಲಿಸಲು ಯತ್ನಿಸುತ್ತಾನೆ. ನಮ್ಮ ಪ್ರಜಾಪ್ರಭುತ್ವದ ವಿಷಯದಲ್ಲೂ ನಡೆಯುತ್ತಿರುವುದು ಇದೇ. ಮುಖ್ಯವಾಗಿ ನಮ್ಮ ಸಂಸದೀಯ ಪ್ರಜಾಪ್ರಭುತ್ವದ ಆಧಾರಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳನ್ನು ತನ್ನ ಕಾಲದ ಸಾಮಾಜಿಕ ಉದ್ದೇಶಗಳು ಈಡೇರುವಂತೆ ಬದಲಿಸಿಕೊಳ್ಳಲು ಹಾತೊರೆಯುತ್ತಿದ್ದಾನೆ. ಈ ನೆಲೆಯಲ್ಲಿ ಇಂದು ಕಾಣುತ್ತಿರುವ ಬದಲಾವಣೆಯ ಹಾತೊರಿಕೆಯನ್ನು ಹೀಗೆ ವಿವರಿಸಬಹುದು: ಪ್ರಜಾಪ್ರಭುತ್ವ ಆಧುನಿಕ ನಾಗರೀಕತೆಯ ಒಂದು ಕೊಡುಗೆಯಾಗಿ ಬಂದಿದ್ದು, ಈ ನಾಗರೀಕತೆ ತನ್ನೆಲ್ಲ ಸದುದ್ದೇಶಗಳನ್ನು ಖಾಲಿ ಮಾಡಿಕೊಂಡು, ಒಂದು ಮಿತಿ ಕಳೆದುಕೊಂಡ ಗ್ರಾಹಕ ಸಮಾಜವಾಗಿ ಮಾರ್ಪಾಡಾಗಿರುವಾಗ ಅದು ಪ್ರಜಾಪ್ರಭುತ್ವದ ಗರ್ಭಗುಡಿ ಎನಿಸಿದ ಶಾಸಕಾಂಗದ ಸ್ವರೂಪದ ಬದಲಾವಣೆಯಲ್ಲಿ ಪ್ರತಿಬಿಂಬಿತವಾಗಿ ಈ ಬದಲಾವಣೆಗಳನ್ನು ಒತ್ತಾಯಿಸುತ್ತದೆ. ಇಂದು ಸಂಸತ್ತೂ ಸೇರಿದಂತೆ ನಮ್ಮ ಶಾಸನಸಭೆಗಳ ತುಂಬ ಒಂದಲ್ಲ ಒಂದು ವ್ಯಾಪಾರಿ ಉದ್ದೇಶದ ಪಟ್ಟಭದ್ರ ಹಿತಾಸಕ್ತಿಗಳ ಏಜೆಂಟರುಗಳೇ ತುಂಬಿದ್ದು ಅವು ತಮ್ಮ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳುವಲ್ಲಿ ತೊಡಗಿವೆಯಷ್ಟೆ.

ಯಾವುದೇ ಒಂದು ವ್ಯವಸ್ಥೆ ತನ್ನ ಸದುದ್ದೇಶಗಳನ್ನು ಖಾಲಿ ಮಾಡಿಕೊಳ್ಳುವುದು ಎಂದರೆ ಏನು? ಅದನ್ನು ರೂಪಿಸಿದ ವಿವೇಕ ಖಾಲಿಯಾಗುವುದು ಎಂದೇ ಅರ್ಥ. ವಿವೇಕ ಎಂದರೇನು? ಮನುಷ್ಯ ತನ್ನ ಅನುಭವಗಳ ಆಧಾರದ ಮೇಲೆ ತನ್ನ ವರ್ತನೆಗಳ ಮೇಲೆ ಹಾಕಿಕೊಂಡ ಕೆಲ ಎಲ್ಲೆಗಳು, ಮಿತಿಗಳು. ಪ್ರಜಾಪ್ರಭುತ್ವ ಪದ್ಧತಿಯ ನೆಲೆಯಲ್ಲಿ ಇದನ್ನು ಪ್ರಜಾಧರ್ಮವೆನ್ನಬಹುದು. ಇದನ್ನು ಹೀಗೂ ವಿವರಿಸಬಹುದು: ರಾಜಪ್ರಭುತ್ವ, ಪಾಳೇಗಾರಿಕೆ ಇತ್ಯಾದಿ ಮಧ್ಯಕಾಲೀನ ವ್ಯವಸ್ಥೆಗಳಿಂದ ನಡೆದಿದ್ದ ಮನುಷ್ಯ ಚೇತನದ ದಮನಗಳಿಗೆ ಪರಿಹಾರವಾಗಿ ಹಲವು ಹೋರಾಟಗಳ ಮೂಲಕ ರೂಪಿಸಿಕೊಂಡ ಪ್ರಜಾಪ್ರಭುತ್ವ ಎಂಬುದರಲ್ಲಿ ಇರುವ ಪ್ರಜಾ ಎಂದರೆ ಅದು ಕೇವಲ ಜನ ಎಂದಲ್ಲ. ಅದೊಂದು ಧರ್ಮ: ಹಕ್ಕುಗಳ ಜೊತೆ ಕರ್ತವ್ಯಗಳೂ ಇರುವ ಒಂದು ನೀತಿ ಸಂಹಿತೆ. ಇಲ್ಲಿ ಹಕ್ಕು ಮತ್ತು ಕರ್ತವ್ಯಗಳನ್ನು ಜೋಡಿಸುವ, ತತ್ವವೆಂದರೆ ಎಲ್ಲರ ಹಿತದಲ್ಲಿಯೇ ವ್ಯಕ್ತಿಯ ಹಿತವೂ ಅಡಗಿದೆ ಎಂಬ ಅರಿವು. ಇದನ್ನು ಸಾಧಿಸಲು ಒಂದು ತಾಂತ್ರಿಕ ಮಾರ್ಗವಾಗಿ ನಾವು ಬಹುಮತದ ಅಧಿಕಾರ ತತ್ವವನ್ನು ಒಪ್ಪಿಕೊಂಡೆವು.

ಆದರೆ ಇಂದು ಮೇಲೆ ವಿವರಿಸಿದಂತಹ ಕಾಲದ ಒತ್ತಡಗಳಿಗೆ ಸಿಕ್ಕಿ ಪ್ರಜಾಧರ್ಮ ಅಲುಗಾಡಿ ಹೋಗಿ ಹೇಗಾದರೂ ನೂರರಲ್ಲಿ ಐವತ್ತನ್ನು ದಾಟುವುದೇ ಪ್ರಜಾಪ್ರಭುತ್ವದ ತಿರುಳೆನ್ನಿಸಿ ಅದನ್ನು ಹೇಘೋ, ಪ್ರಜಾ-ಅಧರ್ಮ ಎಂದು ಕರೆಯಬಹುದಾದ ಮಾರ್ಗಗಳ ಮೂಲಕ ಯಶಸ್ವಿಯಾಗಿ ಸಾಧಿಸಿದವರದ್ದೇ ಪ್ರಜಾಪ್ರಭುತ್ವದ ಆಟ ಎನ್ನುವಂತಾಗಿದೆ. ಮೊನ್ನೆ ಮೊನ್ನೆ ನಮ್ಮ ಸಂಸತ್ತಿನಲ್ಲಿ, ನಿರ್ದಿಷ್ಟವಾಗಿ ರಾಜ್ಯಸಭೆಯಲ್ಲಿ ನಡೆದದ್ದು ಇದೇ ಆಟ. ಸಾರ್ವಜನಿಕ ಜೀವನದ ಬಹು ಮುಖ್ಯ ಸಂಗತಿಗಳಿಗೆ-ಕೃಷಿ, ಕಾರ್ಮಿಕ ಇತ್ಯಾದಿ- ಸಂಬಂಧಿಸಿದ ಮಸೂದೆಗಳನ್ನು ವಿರೋಧ ಪಕ್ಷಗಳ ಮತ್ತು ಸಂಬಂಧಪಟ್ಟ ಸಮುದಾಯಗಳ ಪ್ರತಿಭಟನೆಗಳನ್ನೂ ಲೆಕ್ಕಿಸದೆ, ಪ್ರಜಾ-ಅಧರ್ಮದ ಮಹಾ ಅಲೆಯೊಧನ್ನೆಬ್ಬಿಸ್ಕಿರಿಸಿ ಶಾಸನ ಸಭೆಗಳಲ್ಲಿ ಸಾಧಿಸಿಕೊಂಡಿರುವ ಬಹುಮತದ ಮೂಲಕ ಶಾಸನಗಳನ್ನಾಗಿ ಮಾಡುವ ಪ್ರಯತ್ನ ಪ್ರಜಾಪ್ರಭುತ್ವದ ಅಣಕ ಮಾತ್ರವೆನಿಸುತ್ತದೆ. ಈ ಧಾವಂತದ ಹಿಂದೆ ಇರುವುದು ಏನು ಎಂಬುದನ್ನು ಸಂಸತ್ತಿನ ಸ್ವರೂಪವೇ ಹೇಳುತ್ತದೆ.

ಆದರೆ ಇದೆಲ್ಲದಕ್ಕಾಗಿ ಸದ್ಯದ ಸರ್ಕಾರವೊಂದನ್ನೇ ದೂಷಿಸುವುದು ಆತ್ಮವಂಚನೆಯಾದೀತು. ಹಾಗೆ ನೋಡಿದರೆ ಅಭಿವೃದ್ಧಿಗಾಗಿ 'ಸುಧಾರಣೆ' (ಎಂತಹ ವಿಪರ್ಯಾಸದ ಹೆಸರು!)ಗಳ ಹೆಸರಿನಲ್ಲಿ ಇಂತಹ ಅನುನಾನಾಸಪದ ಶಾಸನಗಳ ಮೂಲಕ ದೇಶೀಯ ಮತ್ತು ಜಾಗತಿಕ ಪಟ್ಟಭದ್ರ ಹಿತಾಸಕ್ತಿಗಳನ್ನು ಪೋಷಿಸುವ ಪ್ರವೃತ್ತಿ ಈ ಸರ್ಕಾರದಿಂದ ಆರಂಭವಾದದ್ದೇನಲ್ಲ. ಇಂದಿನ ವಿರೋಧ ಪಕ್ಷಗಳು ಪಾಲ್ಗೊಂಡಿದ್ದ ಸರ್ಕಾರಗಳೇ ಆರಂಭಿಸಿದ ಈ ಪ್ರವೃತ್ತಿಯನ್ನು ಸದ್ಯದ ಸರ್ಕಾರ ತನ್ನ ಮಹಾ ಬಹುಮತದ ಬಲದಿಂದ ಇನ್ನಷ್ಟು ಬಿರುಸಾಗಿ ಮುಂದುವರೆಸುತ್ತಿದೆಯಷ್ಟೆ. ಯಾವ ಸರ್ಕಾರ ಬಂದರೂ ಇದೇ ರಾಜಕಾರಣವಾಗಿರುವುದಾದರೆ ಅದರಲ್ಲಿ ಪ್ರಜೆಗಳ ಕನಿಷ್ಠ ಮೌನ ಸಮ್ಮತಿಯ ಪಾಲೂ ಇರಬೇಕಲ್ಲವೆ? ಸ್ಥಳೀಯತೆಯಲ್ಲಿ ಅಂತರ್ಗತವಾಗಿದ್ದ, ನಮ್ಮ ಬದುಕಿಗೆ ಒಂದು ಸರಳ ನೆಮ್ಮದಿ ಮತ್ತು ಸೌಂದರ್ಯಗಳನ್ನು ನೀಡಿದ್ದ ಮತ್ತು ವ್ಯಕ್ತಿಯ ಹಿತ ಎಲ್ಲರ ಹಿತದಲ್ಲಿ ಅಡಗಿದೆ ಎಂಬ ವಿವೇಕ ಹಾಕಿದ ಮಿತಿ ಎಂಬ ನೀತಿ ಸಂಹಿತೆಯನ್ನು- ಪ್ರಜಾಧರ್ಮವನ್ನು-ವ್ಯಾಪಾರಿ ಹಿತಾಸಕ್ತಿಗಳು ಒಡ್ಡಿದ ಹೆಚ್ಚಿನ ಸುಖದ ಆಸೆಯಲ್ಲಿ ತಿರಸ್ಕರಿಸುತ್ತಾ ಬಂದ ಪಾಪದಲ್ಲಿ ನಾವು-ರೈತರೂ, ಕಾರ್ಮಿಕರೂ ಸೇರಿದಂತೆ- ಪ್ರತಿಯೊಬ್ಬರೂ ಪಾಲುದಾರರಾಗಿದ್ದೇವಲ್ಲವೆ? ಈಗ ಅದಕ್ಕಾಗಿ ಬಾಯಿ ಬಡಿದುಕೊಂಡರೆ ಏನು ಪ್ರಯೋಜನ? ಇಂದು ಸರ್ಕಾರದ ಪ್ರವೃತ್ತಿಯ ವಿರುದ್ಧ ಪ್ರತಿಭಟಿಸುತ್ತಿರುವವರು ಇದನ್ನು ಗಮನಿಸಿ ಮುಂದುವರೆಯಬೇಕಿದೆ.

ಅದೇನೇ ಇರಲಿ, ಇದಕ್ಕೆ ಪರಿಹಾರವೇ ಇಲ್ಲವೆ? ಇದನ್ನು ತಿಳಿಯಲು ಈ ಪ್ರಜಾಪ್ರಭುತ್ವವನ್ನು ನಮಗೆ ದಯಪಾಲಿಸಿದ ಆಧುನಿಕ ನಾಗರೀಕತೆಯನ್ನು ನಾವು ಒಪ್ಪಿಕೊಂಡ ಪರಿಯನ್ನೊಮ್ಮೆ ಪರಿಶೀಲಿಸಿ ನೋಡಬೇಕು. ಅದನ್ನು ತಿರುಳಲ್ಲಿ ಮಾತ್ರವಲ್ಲದೆ ರೂಪದಲ್ಲಿಯೂ ಒಪ್ಪಿಕೊಂಡದ್ದೇ ಎಲ್ಲ ಅನಾಹುತಕ್ಕೆ ಕಾರಣವಿರಬಹುದೆಂದು ಕಾಣುತ್ತದೆ. ನಮ್ಮಲ್ಲಿ ಆ ಪ್ರಜಾಪ್ರಭುತ್ವದಲ್ಲಿನ ಪ್ರಜಾ ಎಂಬುದು ಹಿನ್ನೆಲೆಗೆ ಸರಿಯಲು ಅದರ ಜೋಡಿಯಾದ ಪ್ರಭುತ್ವದ ಸ್ವರೂಪವೇ ಕಾರಣವಿರಬೇಕೆನ್ನಿಸುತ್ತದೆ. ನಾವು ಒಪ್ಪಿಕೊಂಡ ಪ್ರಭುತ್ವ ರಾಷ್ಟ್ರ ಪ್ರಭುತ್ವದ ರೂಪದ್ದಾಗಿದ್ದು ಅದು ಎಷ್ಟು ಬೃಹತ್ ಮತ್ತು ಜಟಿಲ ರಚನೆ ಎಂದರೆ ಅದರಲ್ಲಿ ಪ್ರಜೆ ಕಳೆದೇ ಹೋಗುವುದು ಅಥವಾ ಪಂಜರದಲ್ಲಿ ಸಿಕ್ಕಿಕೊಂಡ ಪ್ರಾಣಿಯಂತಾಗುವುದು ಈ ಎರಡೇ ಆಯ್ಕೆಗಳಿದ್ದುದು. ಅಂದರೆ ತಿರಸ್ಕಾರ ಅಥವಾ ದಮನ ಎರಡೇ ಆಯ್ಕೆಗಳು. ಇದು ಅಂದು ಆಧುನಿಕ ನಾಗರೀಕತೆ ಹುಟ್ಟಿಸಿದ್ದ ಎಲ್ಲ ಮಿತಿಗಳನ್ನು ಮೀರುವುದರಲ್ಲಿನ ರೋಚಕತೆಯ ರುಚಿಗೆ ಬಿದ್ದುದರ ಫಲ!

ಇದನ್ನು ಅರಿತೇ ಗಾಂಧಿ ಪ್ರಜಾಪ್ರಭುತ್ವದಲ್ಲಿ ಪ್ರಭುತ್ವವನ್ನು ಪ್ರಜೆಗಳ ನೇರ ಅಧೀನಕ್ಕೊಳಪಡಿಸುವ ಸ್ವರಾಜ್ಯದ-ಸಂಪೂರ್ಣ ವಿಕೇಂದ್ರೀಕೃತ ಪ್ರಭುತ್ವದ-ಪರಿಕಲ್ಪನೆಯನ್ನು ನೀಡಿದ್ದು. ಬಹುಶಃ ಇಂದು ನಮ್ಮ ಪ್ರಜಾಪ್ರಭುತ್ವ ಅಡ್ಡದಾರಿ ಹಿಡಿದಿರುವುದನ್ನು ತಪ್ಪಿಸಲು ಇದೊಂದೇ ದಾರಿ ಎಂದು ಕಾಣುತ್ತದೆ. ಆಗ ಯಾರೂ ನಮ್ಮ ಅರ್ಥ ಮಂತ್ರಿಯಂತೆ ಮನುಷ್ಯ ಮಾಡಿದ ಪಾಪಗಳನ್ನೆಲ್ಲ ದೇವರ ಮೇಲೆ ಹಾಕಿ, ಸರ್ಕಾರದ ಎಲ್ಲ ತಪ್ಪು ಹೆಜ್ಜೆಗಳನ್ನೂ ಮರೆಮಾಚುವ 'ದೇವರ ಆಟ'ದಂತಹ ಧಾರ್ಷ್ಟ್ಯದ ಮಾತು ಆಡಲು ಅವಕಾಶವಿರುವುದಿಲ್ಲ.

**-ಸಂಪಾದಕ**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಸೆಪ್ಟಂಬರ್ ಹೊಸ ಮನುಷ್ಯ: ಸಂಚಿಕೆಯಲ್ಲಿ ಭೂಸುಧಾರಣೆ ಕುರಿತ ನಿಮ್ಮ ಬರಹ ಮತ್ತು ಆಶೀಶ್ ನಂದಿಯವರೊಡನೆಯ ಸಂದರ್ಶನ ವಿಚಾರಾರ್ಹ ಸಂಗತಿಗಳಿಂದ ಕೂಡಿ ಗಮನ ಸೆಳೆಯುವಂತಿದ್ದವು.

**–ಹೆಚ್.ಎಸ್. ರಾಘವೇಂದ್ರ ರಾವ್,** ಬೆಂಗಳೂರು

ಕಳೆದ ಸಂಚಿಕೆಯಲ್ಲಿನ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತ ಪ್ರಚಲಿತ–೨ರಲ್ಲಿ ಮಹಾಬಲೇಶ್ವರ ರಾವ್ ಅವರು ೯ ಸುಧಾರಣೆಗಳನ್ನು ವಿರೋಧಿಸಿದ್ದು ಮತ್ತು ಮಾತೃಭಾಷಾ ಶಿಕ್ಷಣದ ಮಾತೆತ್ತಿ ಪ್ರಾದೇಶಿಕ ಭಾಷೆಗಳನ್ನು ನಯ ವಂಚನೆಯಿಂದ ತುಳಿಯುವ ಹಿಡನ್ ಅಜಾಂಡಾದ ಬಗ್ಗೆ ತಿಳಿಸಿರುವುದು ಅರ್ಥಪೂರ್ಣ. ಇನ್ನು ಮಾಧ್ಯಮ ಸ್ವಾತಂತ್ರ್ಯ ಕುರಿತ ಪ್ರಚಲಿತ–೩ರಲ್ಲಿ ೨೦೧೪ರಿಂದ ಈಚೆಗೆ ನಡೆದ ಹತ್ಯೆಗಳ ಲೆಕ್ಕಾಚಾರ ನೀಡುತ್ತಾ, ಚೈನಾದಂತೆ ಸರ್ವಾಧಿಕಾರಿ ಧೋರಣೆಯತ್ತ ವಾಲುತ್ತಿರುವ ಚಿತ್ರಣಕ್ಕಾಗಿ ಗಮನಾರ್ಹವೆನಿಸಿತ್ತದೆ.

ಇನ್ನು ಸಂಪಾದಕರ ಟಿಪ್ಪಣಿಗಳಲ್ಲಿ, ನಮ್ಮ ನಾಯಕನ ನಾನೇ ಮಾಡಿದ್ದು, ನನ್ನಿಂದಲೆ ಎಲ್ಲಾ ಎನ್ನುವ ಅಹಂಕಾರಿ ಮನಸಿನಿಂದ ಅಕ್ಕಪಕ್ಕದ ದೇಶಗಳ ವೈರತ್ವ ಹಣಕಾಸಿನ ಮುಗ್ಗಟ್ಟು ನಿರುದ್ಯೋಗ ಸಮಸ್ಯೆಗಳ ತೀವ್ರತೆಯನ್ನು ಸೃಷ್ಟಿಸಿಕೊಂಡಿರುವ ಬಗ್ಗೆ ನಯವಾಗಿ ತಿವಿಯಲಾಗಿದೆ.

**–ಸಿ.ಬಿ. ಚಿಲ್ಕರಾಗಿ,** ಕೊಪ್ಪಳ

ಸೆಪ್ಟೆಂಬರ್ ಸಂಚಿಕೆಯಲ್ಲಿನ ಭೂ ಸುಧಾರಣಾ ತಿದ್ದುಪಡಿ ಕಾಯಿದೆಯ ಬಗೆಗಿನ ನಿಮ್ಮ ಲೇಖನ ಹೊಸ ನೆಲೆಯ ವಿಮರ್ಶೆ ಮತ್ತು ವಿಶ್ಲೇಷಣೆಯಿಂದ ಕೂಡಿತ್ತು. ಭೂಮಿ ಇವತ್ತು ಕೃಷಿ ಕೇಂದ್ರಿತ ಆರ್ಥಿಕತೆಗೆ ಮೀಸಲಾಗದೆ ಅದು ಹೆಚ್ಚು ಹೆಚ್ಚು ಲಾಭಗಳಿಸುವ ಆಸೆಯಿಂದ ಕಾರ್ಪೋರೇಟೀಕೃತ ಆರ್ಥಿಕ ಸರಕಾಗಿ ಮಾರ್ಪಾಡುಗೊಳ್ಳುತ್ತಿರುವುದು ವಿಷಾದಕರ ಸಂಗತಿ. ಹೊಸ ಕಾನೂನು ತಿದ್ದುಪಡಿಗಳನ್ನು ತಂದು ರೈತ ಮತ್ತು ಭೂಮಿಯ ನಡುವೆ ಇರುವ ಅವಿನಾಭಾವ ಸಂಬಂಧವನ್ನು ಮುರಿದು ಆತನ ಅಸ್ಮಿತೆಯನ್ನೇ ನಾಶ ಮಾಡಲು ಹೊರಟಿದೆ ನಮ್ಮ ಸರ್ಕಾರ. ಇದಕ್ಕೆ ಜನ ಸಂಘಟಿತರಾಗಿ ಪ್ರತಿರೋಧ ವ್ಯಕ್ತಪಡಿಸದಿದ್ದರೆ. ನಾವೆಲ್ಲಾ ಉದ್ಯಮಿಗಳ ಗುಲಾಮರಾಗುವುದು ಮತ್ತು ಈ ಭೂಮಿಯೇ ನಾಶವಾಗುವುದು ಅಕ್ಷರಶಃ ಸತ್ಯ. ಹಾಗೇ ಸಂಚಿಕೆಯಲ್ಲಿನ ಆಶೀಶ್ ನಂದಿಯವರ ಸಂದರ್ಶನ, ಸಂಪಾದಕರ ಟಿಪ್ಪಣಿ ಎರಡೂ ಚಿಂತನೆಗೆ ಹಚ್ಚುವಂತೆ ಮಾಡುತ್ತವೆ. ಇವತ್ತು ನಾವು ಪರ್ಯಾಯಕ್ಕಾಗಿ ತಡಕಾಡುವಂತಾಗಿದೆ. ಮತ್ತೆ ಜನಾಂದೋಲನಗಳು ಶುರುವಾಗಬೇಕು, ಸಾಮಾನ್ಯನು ಬೀದಿಗಿಳಿದು ಹೋರಾಟಮಾಡಬೇಕು.

**–ಸಂಜಯಕುಮಾರ್,** ಬೊಕ್ಕೆಪುರ

ಕಳೆದ ಸಂಚಿಕೆಯಲ್ಲಿನ ಆರ್. ಸಮತಾ ಅವರ 'ಪರಿಮಳಗಳ ಮಾಯೆ!' ಸದಭಿರುಚಿಯ ಸ್ವಚ್ಛಂಧ ಅಭಿವ್ಯಕ್ತಿಯ ಲಲಿತ ಪ್ರಬಂಧವಾಗಿ ನಿಜವಾಗಿಯೂ ಪರಿಮಳಿಸಿ ನಮ್ಮನ್ನು ಸೆಳೆಯುತ್ತದೆ. ಇನ್ನು ಮಾಜಿ ಸಚಿವ ಎಚ್. ವಿಶ್ವನಾಥ್ ಮತ್ತು ಕ್ರಿಕೆಟಿಗ ಧೋನಿಯಯನ್ನು ಕುರಿತ ನಿಮ್ಮ ಟಿಪ್ಪಣಿಗಳೂ ಕುತೂಹಲಕರವಾಗಿವೆ.

**–ಟಿ.ಎನ್. ಲಕ್ಷ್ಮೀದೇವಿ,** ಹೊಸಪೇಟೆ

ಪತ್ರಿಕೆ ಅತ್ಯುತ್ತಮವಾಗಿ ಬರುತ್ತಿದೆ. ಇದರ ಚಂದಾ ನವೀಕರಿಸದೇ ಇರುವುದಕ್ಕೆ ಸಾಧ್ಯವೇ ಇಲ್ಲ. ಏಕೆಂಬುದಕ್ಕೆ ಒಂದು ಅತ್ಯುತ್ತಮ ಉದಾಹರಣೆ ಕೊಡುವುದಾದರೆ, ಕಳೆದ ವಿಶೇಷ ಸಂಚಿಕೆಯಲ್ಲಿ ಹನೂರು ಕೃಷ್ಣಮೂರ್ತಿಯವರ 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಕಾದಂಬರಿ ಕುರಿತ ನಿಮ್ಮ ಅವಲೋಕನ ತಲಸ್ಪರ್ಶಿಇಯಾಗಿದ್ದು ಅದರಲ್ಲಿ ನೀವು ಮಾಡಿರುವ ಟೀಕೆಯೂ ಪ್ರೀತಿಯಿಂದಲೇ ಕೂಡಿದೆ. ಪ್ರೀತಿಯನ್ನೂ ನಂಜನ್ನಾಗಿ ಪರಿವರ್ತಿಸುವ ಬರಹಗಾರಿಕೆ ಮುಂಚೂಣಿಗೆ ಬರುತ್ತಿರುವ ಈ ಕಲಿಗಾಲದಲ್ಲಿ ಇಂತಹ ವಿಮರ್ಶೆ ಅಪರೂಪವೇ ಸರಿ

**–ಎಚ್. ಪಟ್ಟಾಭಿರಾಮ ಸೋಮಯಾಜಿ,** ಮಂಗಳೂರು

ಸೆಪ್ಟಂಬರ್ ಸಂಚಿಕೆಯಲ್ಲಿ ಡಿಎಸ್ಸೆನ್ ಮಾಡಿರುವ ಪುರುಷೋತ್ತಮ ಬಿಳಿಮಲೆಯವರ 'ಕಾಗೆ ಮುಟ್ಟಿದ ನೀರು' ಪುಸ್ತಕದ ಅವಲೋಕನ ನನಗೆ ಗಮನಾರ್ಹವೆನಿಸಿತು. ವಿಶೇಷವಾಗಿ, ಅವರು ಹೇಳುವ 'ಕಥನದ ಸಮಗ್ರತೆ'ಯ ಭಂಗವನ್ನು ಕುರಿತು: ಎಂದೋ ಜರುಗಿದ ಘಟನೆಯನ್ನು ಹಲವು ವರ್ಷಗಳ ನಂತರ ಈವತ್ತಿನ ದೃಷ್ಟಿಕೋನದ ಮೂಲಕ ಚಿತ್ರಿಸುವುದು ಇಲ್ಲಿನ ತೊಡಕು. **ಆ ಘಟನೆಯನ್ನು ಅಂದು ಎದುರುಗೊಂಡ ವ್ಯಕ್ತಿಯ ಭಾವನೆ, ವಿಚಾರಗಳೇ ಬೇರೆ, ಇಂದು ಅದೇ ಘಟನೆಯನ್ನು ನಿರೂಪಿಸುತ್ತಿರುವ ವ್ಯಕ್ತಿಯೇ ಬೇರೆ. ಅಂದಿನ ಅನುಭವಕ್ಕೆ ಇಂದಿನ ಕಣ್ಣು ನೀಡುವ ವ್ಯಾಖ್ಯಾನದಿಂದಲೇ ಕಥನದ ಸಮಗ್ರತೆಯು ಮುಕ್ಕಾಗುತ್ತದೆ. ಈ ಬಿರುಕು ಸ್ಪಷ್ಟವಾಗಿ ಕಾಣುವ** 'ಕುಟ್ಟಿ ಬ್ಯಾರಿಯ ಪುಟ್ಟ ಕತೆ' ಅಥವಾ 'ಹಂಪಿಯ ಬಂಡೆಗಳು' ಭಾಗವನ್ನು, ಅದು ಇಲ್ಲದಿರುವ 'ಚೌರಿಗ ಕೃಷ್ಣಪ್ಪನ ಕೀಚಕ ವೇಷ' ಭಾಗದ ಜೊತೆ ಇಟ್ಟು ನೋಡುವುದು ಕುತೂಹಲಕರ. ಹಾಗೆ ಮಾಡಿದಾಗ ಅನ್ನಿಸಿದ್ದು: ಆತ್ಮಕತೆ, ಕವಿತೆ, ಕತೆ ಇತ್ಯಾದಿ ಯಾವುದೇ ಆದರೂ ಅಂತಿಮವಾಗಿ ಅದು ನನ್ನನ್ನು ನಾನು ಹುಡುಕಿಕೊಳ್ಳುವ ಪ್ರಯತ್ನ. ಇಂತಹ ಹುಡುಕಾಟದಲ್ಲಿ ನಿರೂಪಿತವಾಗುವ ವಿವರಗಳು ಕೇವಲ ವಿವರಗಳಷ್ಟೇ ಆಗಿ ಅವುಗಳಿಗೆ ಸಾಹಿತ್ಯಕ ಅಥವಾ ಸಾಂಸ್ಕೃತಿಕ ಮಹತ್ವ ('ಸಿಗ್ನಿಫಿಕೆನ್ಸ್') ದಕ್ಕದೆ ಹೋದರೆ ಅಂತಹ ಬರಹಕ್ಕೆ ಅನನ್ಯವಾದ ಅಸ್ತಿತ್ವ ಇರುವುದಿಲ್ಲ. ಜೊತೆಗೆ, ಅರ್ಧಸತ್ಯ ಮತ್ತು ಆತ್ಮಸಮರ್ಥನೆಗಳು ಕೃತಿಯ ವಿಶ್ವಸನೀಯತೆಯನ್ನು ಕಡಿಮೆ ಮಾಡುತ್ತವೆ.

**– ಜ.ನಾ ತೇಜಶ್ರೀ,** ಹಾಸನ

ಬಿಳಿಮಲೆಯವರ ಪುಸ್ತಕದ ಬಗೆಗಿನ ಪ್ರಶಂಸನೀಯ ಬರಹಗಳನ್ನು ಮತ್ತು ವಿಡಿಯೋಗಳನ್ನು ಮಾತ್ರ ಫೇಸ್ ಬುಕ್ ನಲ್ಲಿ ನೋಡಿದ್ದ ನನಗೆ ನಿಮ್ಮ ವಿಮರ್ಶೆ ವಸ್ತುನಿಷ್ಠ ಮತ್ತು ರಚನಾತ್ಮಕ ಎನಿಸಿತು. ಯಾವುದೇ ಕೃತಿಯ ವಿಮರ್ಶೆ ಅತಿಯಾದ ಪ್ರಶಂಸೆ ಅಥವಾ ಖಂಡನೆ ಮೀರಿದ ಅವಲೋಕನವಾಗಿರಬೇಕು ಎಂಬುದು ನನ್ನ ಅನ್ನಿಸಿಕೆ ಆತ್ಮಕಥೆಯಲ್ಲಿರುವ ಗಮನಾರ್ಹ ಅಂಶಗಳನ್ನು, ನಿರೂಪಣಾ ರಚನೆಯಲ್ಲಿರುವ ಬಿರುಕುಗಳನ್ನು ತೋರಿಸಿದ್ದೀರಿ. ಇದು ಓದುಗರಿಗೂ, ಲೇಖಕರಿಗೂ ಅಗತ್ಯ ಎನಿಸಿತು. ಆ ಕಾರಣಕ್ಕೆ ನಿಮ್ಮ ವಿಮರ್ಶೆ ಇಷ್ಟವಾಯಿತು.

**–ಡಿ.ಎಸ್. ಪೂರ್ಣಾನಂದ,** ಶಂಕರಘಟ್ಟ

'ಪ್ರಗತಿಪರ'ರು ಎನಿಸಿಕೊಂಡವರು ಬುದ್ಧಿವಂತರೂ, ಪರಿಶ್ರಮಿಗಳೂ ಆಗಿದ್ದರೂ, ಅವರೇಕೆ ಜನರ ನಂಬಿಕೆ ಕಳೆದುಕೊಳ್ಳುತ್ತಿದ್ದಾರೆ ಎಂಬುದು 'ಕಾಗೆ ಮುಟ್ಟಿದ ನೀರು' ಕೃತಿಯ ಅವಲೋಕನ ಪರೋಕ್ಷವಾಗಿಯಾದರೂ ಸೂಚಿಸಿದೆ.

**–ಎಂ. ಕವಿತಾ,** ಮೈಸೂರು

ಸೆಕ್ಯುಲರಿಸಂ ಎಂಬ ತತ್ವ ನಮಗೆ ಅನುವಾದದಲ್ಲಿ ಸ್ಪಷ್ಟವಾಗಿ ದಕ್ಕದೆ, ಅನುಷ್ಠಾನದಲ್ಲಿ ಕೆಟ್ಟು ಕೆರ ಹಿಡಿದು, ಅಮಾವಾಸ್ಯೆ ಕತ್ತಲಲ್ಲಿ ಮಾಯಾವಿ ಕರಿಬೆಕ್ಕೊಂದು ಕಾಡಿದಂತೆ ಪೀಡಿಸಿದ ಸ್ವತಂತ್ರ ಭಾರತದ ದುಃಸ್ವಪ್ನ ದ ಬಗೆಗಿನ ನಿಮ್ಮ ಚಿಂತನೆ ನನ್ನ ಮನದ ಗೊಂದಲ ಜಿಗುಪ್ಸೆಯನ್ನು ಸಮರ್ಥವಾಗಿ ಅಳಿಸಿ ಒರೆಸಿ ಬಿಸಾಕಿದೆ. ಖಚಿತ ವೈಚಾರಿಕ ಚೌಕಟ್ಟಿನಲ್ಲಿ ಪರಮ ಸತ್ಯದ ವಿವೇಕವನ್ನು ನೋವಿನಿಂದಲೇ ಹಂಚಿಕೊಳ್ಳುವ ಅರಿವು ಲೋಹಿಯಾ ಗರಡಿಯಲ್ಲಿ ಪಳಗಿದ ನಿಮ್ಮಂತಹವರಿಗೆ ಸುಲಭ ಸಹಜ. ಓದಿ ಗೊಂದಲಗಳಿಲ್ಲದೆ ಸ್ವೀಕರಿಸಿ ಸೆಕ್ಯುಲರಿಸಂ ಮಾಯಾ ಕೋಲಾಹಲದಿಂದ ಬಿಡುಗಡೆ ಪಡೆಯುವುದು ಓದುಗರಿಗೆ ಸರಳ. ಇನ್ನು ಆಶೀಶ್ ನಂದಿ ಲೇಖನ ಮನನ ಯೋಗ್ಯ. ಆದರೂ ಕೌಟುಂಬಿಕ ಜೀವನದ ಮೌಲ್ಯಗಳೇ ಪಲ್ಲಟಗೊಂಡಿರುವ ಈ ಹಂತದಲ್ಲಿ... ಆಶೀಶ್ ನಂದಿಯವರ ಚಿಂತನೆಯಲ್ಲಿನ ತಂದೆ, ಮಲತಂದೆ.. ನಿಷ್ಪ್ರಯೋಜಕ ಕಸರತ್ತು.

**–ಬಿ.ಎಸ್. ದಿವಾಕರ,** ಬೆಂಗಳೂರು

ಡಿಎಸ್ಸೆನ್ ಅವರ ಸೆಕ್ಯುಲರಿಸಂ ಎಂಬ ಅಧರ್ಮ ಲೇಖನವನ್ನು ಓದಿದೆ. ಸೆಕ್ಯುಲರಿಸಮ್ ಶಬ್ದವೊಂದಕ್ಕೆ ಪರ್ಯಾಯ ಸಿಗಬಹುದೇ ಎಂಬ ಪ್ರಶ್ನೆಗಿಂತ, ಅಂತಹ ನಂಬುಗೆಯ ಸಮಾಜ ಕಟ್ಟುವ ಸವಾಲು ನಮ್ಮೆದುರುಗಿದೆ. ಈಗಾಗಲೇ ಬಹಳ ದೂರ ಬಂದಾಗಿದೆ. ಅಯೋಧ್ಯ ಜನರ ಅಭಿಪ್ರಾಯ ಕೇಳುವ, ಮಾತನಾಡಿಸುವ ಪ್ರಮೆಯವೇ ಮುಗಿದು ಹೋಗಿದ್ದು, ತಾವು ಹೇಳಿದಂತೆ ಮಸೀದೆ ಉದ್ಘಾಟನೆಯ ಸಂದರ್ಭದಲ್ಲಿ ಪ್ರಭುತ್ವ ಅಲ್ಲಾಹುವಿಗೂ ಪ್ರಾರ್ಥನೆ ಸಲ್ಲಿಸಿದರೆ ಸಾಕು ಪ್ರಾಯಶ್ಚಿತ್ತದ ಒಂದಾಂಶ ಸೇರಿದಂತೆ.

**–ಸತೀಶ ಕುಲಕರ್ಣಿ, ಹಾವೇರಿ**

ಇರುವುದು ಮತ್ತು ಆಗಿರುವುದರ ನಡುವಣ ಭಿನ್ನತೆಯನ್ನು ಸೆಕ್ಯುಲರಿಸಂ ಎಂಬ 'ಅಧರ್ಮ' ಎಂಬ ಬರಹ ಬಯಲು ಮಾಡುತ್ತದೆ. ರಾಜಕೀಯ ಮಹತ್ವಾಕಾಂಕ್ಷಿಗಳ ಈಡೇರಿಕೆಗಾಗಿ ಕಟ್ಟಿಕೊಂಡ ವಿದ್ರೋಹದ ಮಾದರಿಗಳನ್ನು ನುಚ್ಚು ನೂರು ಮಾಡಬೇಕಾಗಿದೆ. ಸಾಮಾನ್ಯ ಜನರ ನೆಲೆಯಲ್ಲಿ ಇನ್ನೂ ಜೀವಂತವಾಗಿರುವ ಧರ್ಮದ ಬಹುಧಾರೆಗಳನ್ನು ಮತ್ತೆ ಮುಖ್ಯ ನೆಲೆಗೆ ತರಬೇಕು. ಈ ಹಾದಿಗೆ ಗಾಂಧಿ ಕೈಮರ. ಯುವಜನರ ಪುಟ್ಟ ಗುಂಪುಗಳಲ್ಲಿ ಈ ವಿಚಾರಗಳ ಬೀಜಾಂಕುರವನ್ನು ಮಾಡಬೇಕು.

**–ಕೆ.ವೆಂಕಟೇಶ,** ದೊಡ್ಡಬಳ್ಳಾಪುರ

'ಸೆಕ್ಯುಲರಿಸಮ್ ಎಂಬ ಅಧರ್ಮ' ಲೇಖನವು ಧರ್ಮ ಹಾಗೂ ರಾಜಕಾರಣದ ಸಿಕ್ಕುಗಳನ್ನು ಬಿಡಿಸಿಟ್ಟ ಬಗೆ ಮಾರ್ಮಿಕವಾಗಿತ್ತು. ಪ್ರಭುತ್ವವನ್ನು ಧರ್ಮದಿಂದ ಪ್ರತ್ಯೇಕಿಸಬೇಕೆಂಬ ಸೆಕ್ಯುಲರಿಸಮ್ ನ ಉದ್ದೇಶವೇ ಭಗ್ನಗೊಳ್ಳುವಂತೆ ಸರ್ಕಾರವೇ ರಾಮ ಮಂದಿರದ ಭೂಮಿಪೂಜೆ ನಡೆಸಿ ಜೈಕಾರ ಕೂಗಿಸಿದ ಘಟನೆಯ ರಾಜಕೀಯ ಸ್ವರೂಪವನ್ನು ವಿಶ್ಲೇಷಿಸುವ ಡಿಎಸ್ಸೆನ್ ಈ ದ್ವಂದ್ವದ ಚಾರಿತ್ರಿಕ ಬೇರುಗಳನ್ನೂ ತೋರಿಸುತ್ತಾರೆ. ಸಹಜವಾಗಿಯೇ ಸೆಕ್ಯುಲರ್ ಆಗಿದ್ದ ಜನರ ಮನಸ್ಸನ್ನು ರಾಜಕೀಯ ಮಹತ್ವಾಕಾಂಕ್ಷೆಯಿಂದ ರೂಪಿಸಲಾದ ರಾಷ್ಟ್ರವ್ಯವಸ್ಥೆಯು ಹೇಗೆ ಭ್ರಷ್ಟಗೊಳಿಸುತ್ತದೆಯೆಂಬುದನ್ನು ಅವರು ಸೂಚಿಸುತ್ತಾರೆ. ಇದು ಧರ್ಮವನ್ನೂ ರಾಜಕೀಯಗೊಳಿಸಿ ಅದರ ಆಧ್ಯಾತ್ಮವನ್ನು ನಾಶಮಾಡಿದ್ದರ ಪರಿಣಾಮ. ಎನ್ನುವ ಲೇಖಕರು ಆಮದಾದ ಈ ಸೆಕ್ಯುಲರಿಸಮ್ಮನ್ನು ಅಧರ್ಮ ಎಂದು ಕರೆದಿರುವದು ಸಹಜವಾಗಿಯೇ ಇದೆ

**–ಗೀತಾ ವಸಂತ,** ತುಮಕೂರು

**(೧೪ನೇ ಪುಟಕ್ಕೆ**

# ದೆಹಲಿ ದಂಗೆಯಲ್ಲಿ ಪೊಲೀಸರ ಗಂಭೀರ ಕರ್ತವ್ಯ ಲೋಪ: ಅಮ್ನೆಸ್ಟಿ ಇಂಟರ್‌ನ್ಯಾಷನಲ್ ವರದಿ

**ಕಳೆದ ಫೆಬ್ರುವರಿಯಲ್ಲಿ ರಾಷ್ಟ್ರೀಯ ಪೌರತ್ವ ಕಾಯಿದೆ ವಿರುದ್ಧ ಜನರ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ನಡೆದ ದಂಗೆಯ ಸಂಬಂಧವಾಗಿ ದೆಹಲಿ ಪೋಲೀಸರು ದಾಖಲಿಸಿರುವ ಆರೋಪ ಪಟ್ಟಿಗಳ ತುಂಬ ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದ ಜನಸಾಮಾನ್ಯ ಮತ್ತು ವಿದ್ಯಾರ್ಥಿಗಳ ಹೆಸರುಗಳೇ ತುಂಬಿವೆ. ಅಷ್ಟೇ ಅಲ್ಲ, ಹರ್ಷ ಮಂದರ್, ಯೋಗೇಂದ್ರ ಯಾದವ್ ಮುಂತಾದ ಸಾಮಾಜಿಕ ಕಾರ್ಯಕರ್ತರನ್ನೂ ಮೊಕದ್ದಮೆಗಳಿಗೆ ಗುರಿ ಮಾಡಲಾಗಿದೆ. ಆದರೆ ಪ್ರಚೋದನಾತ್ಮಕ ಕೋಮುವಾದಿ ಭಾಷಣ ಮಾಡಿದ, ಕೇಂದ್ರ ಗೃಹಮಂತ್ರಿಗಳ ಸಮ್ಮುಖದಲ್ಲೇ ಹಿಂಸೆಗೆ ಕರೆಕೊಟ್ಟ ಮತ್ತು ಇದಕ್ಕೆಲ್ಲ ನೇರ ವಿಡಿಯೋ ಸಾಕ್ಷ್ಯವೂ ಲಭ್ಯವಿರುವ ಪರ್ವೇಶ್ ವರ್ಮ, ಕಪಿಲ್ ಮಿಶ್ರ ಮತ್ತು ಅನುರಾಗ್ ಠಾಕೂರ್ ಮುಂತಾದ ಬಿಜೆಪಿ ಜನಪ್ರತಿನಿಧಿ ಮತ್ತು ಸಚಿವರ ಸುದ್ದಿ ಇಲ್ಲ!**

**ಅಂತರಾಷ್ಟ್ರೀಯ ಮಾನವ ಹಕ್ಕುಗಳ ಸಂಘಟನೆ 'ಅಮ್ನೆಸ್ಟಿ ಇಂಟರ್‌ನ್ಯಾಷನಲ್', ದೆಹಲಿಯ ಪೊಲೀಸರು ದಂಗೆಗಳಲ್ಲಿ ಮಾನವ ಹಕ್ಕುಗಳ ಗಂಭೀರ ಉಲ್ಲಂಘನೆ ಮಾಡಿದ್ದೂ ಅಲ್ಲದೆ, 'ದಂಗೆಕೋರರೊಡನೆ ಸೇರಿ ಹಿಂಸಾಚಾರಗೈದರು' ಎಂದು ಆರೋಪಿಸಿದೆ. ಹಾಗೂ ಕೇಂದ್ರ ಗೃಹ ಖಾತೆಯು, ಕಾನೂನು ಜಾರಿಗೊಳಿಸುವ ಅಧಿಕಾರಗಳ ದುರುಪಯೋಗದ ಬಗ್ಗೆ ಪ್ರಾಮಾಣಿಕ, ಸಂಪೂರ್ಣ ಮತ್ತು ಸಮಗ್ರ ತನಿಖೆ ಮಾಡಲೇಬೇಕೆಂದು ಆಗ್ರಹಿಸಿದೆ.**



**ಈಶಾನ್ಯ ದೆಹಲಿಯಲ್ಲಿ ಫೆಬ್ರುವರಿ ೨೩ರಿಂದ ೨೯ರವರೆಗಿನ ದಂಗೆಗಳಲ್ಲಿ ೫೩ ಜನ ಬಲಿಯಾದರು. ಹಿಂಸೆಗೆ ತತ್ತರಿಸಿ ಹೋದ ಪ್ರತ್ಯಕ್ಷದರ್ಶಿಗಳ ಹೇಳಿಕೆಗಳನ್ನು ದಾಖಲಿಸಿ'ಅಮ್ನೆಸ್ಟು ಇಂಟರ್‌ನ್ಯಾಷನಲ್' ಆಗಸ್ಟ್ ೨೮ರಂದು ಬಿಡುಗಡೆ ಮಾಡಿದ ೨೦ ಪುಟಗಳ ವರದಿ, ಗೃಹ ಖಾತೆ ಇಲ್ಲಿಯತನಕ ದೆಹಲಿ ಪೊಲೀಸರನ್ನು ಹೊಣೆ ಮಾಡುವ ಯಾವುದೇ ಪ್ರಯತ್ನ ಮಾಡದೇ ಇರುವ ಬಗೆ, 'ದಿಗ್ಭ್ರಮೆ' ವ್ಯಕ್ತಪಡಿಸಿದೆ.:**

"ಸಾಮಾಜಿಕ ಜಾಲತಾಣಗಳಲ್ಲಿ ಪೊಲೀಸರ ಹಲವು ಉಲ್ಲಂಘನೆಗಳನ್ನು ಲೈವ್ ಸ್ಟ್ರೀಮ್ ಮಾಡಿದ್ದಾಗಿಯೂ ಕೂಡ' ಎನ್ನುತ್ತಿದೆ ವರದಿ. ಕೇಂದ್ರ ಗೃಹ ಖಾತೆಯ ಅಧೀನದಲ್ಲಿರುವ ರಾಷ್ಟ್ರ ರಾಜಧಾನಿಯ ಪೊಲೀಸ್ ಪಡೆ, ಬಂಧಿತರಿಗೆ ಚಿತ್ರ ಹಿಂಸೆಯನ್ನು ನೀಡಿದ್ದೂ ಅಲ್ಲದೆ, ರಾಷ್ಟ್ರೀಐ ಪೌರತ್ವ ಕಾಯಿದೆ(ಸಿಎಎ) ವಿರೋಧಿ ಹೋರಾಟಗಾರರ ವಿರುದ್ಧ ಮಿತಿ ಮೀರಿ ಬಲಪ್ರಯೋಗಿಸಿದೆ. ಶಾಂತಿಯಿಂದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದವರ ಪ್ರತಿಭಟನಾ ಸ್ಥಳಗಳ ಮೇಲೆ ದಾಳಿ ಮಾಡಿದ ಗಲಭೆಕೋರರು ವ್ಯಾಪಕವಾಗಿ ಹಿಂಸಾಚಾರಕ್ಕೆ ಇಳಿದರೂ ಮೂಕ ಪ್ರೇಕ್ಷಕರಾಗಿ ನಿಷ್ಕ್ರಿಯರಾಗಿದ್ದರು ಎಂದು ಆಪಾದಿಸಿದೆ. ಹಾಗೂ ಸಂಕಷ್ಟಕ್ಕೆ ಸಿಲುಕಿದ ಸಮುದಾಯದ ಜನ ಹೆಸರಿಸಿದ ಎಲ್ಲ ಪೊಲೀಸ್ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟು ತನಿಖೆ ನಡೆಸಲು ಆಗ್ರಹಿಸಿದೆ. ಭಾರತದ ಸಂಸತ್ತು ಈ ಕೂಡಲೇ ಕೋಮು ಹಿಂಸಾಚಾಂಗಳ ಬಗ್ಗೆ ತನಿಖೆ ಮಾಡುವ ಹಾಗೂ ಬಂಧನಕ್ಕೆ ಒಳಪಡಿಸುವ ರಾಜ್ಯ ಹಾಗೂ ಕೇಂದ್ರದ ಪೊಲೀಸರ ಅಧಿಕಾರಗಳಿಗೆ ಸಂಬಂಧಪಟ್ಟ ಕಾನೂನುಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ, ಜನಾಂಗೀಯ, ಧರ್ಮ, ಲಿಂಗ ಹಾಗೂ ರಾಜಕೀಯ ಅಭಿಪ್ರಾಯಗಳ ಆಧಾರದ ಮೇಲೆ ತಾರತಮ್ಯ ಮಾಡುವುದನ್ನು ಸ್ಪಷ್ಟವಾಗಿ ನಿಷೇಧಿಸಬೇಕು ಎಂದು ಈ ಅಂತಾರಾಷ್ಟ್ರೀಯ ಹಕ್ಕುಗಳ ಸಂಘಟನೆಯು ಕರೆ ನೀಡಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಯಾವುದೇ ಮುಲಾಜಿಲ್ಲದೆ ಹಿಂಸಾಚಾರ ವಿರುದ್ಧದ ವಿಶ್ವಸಂಸ್ಥೆಯ ಸಮಾವೇಶದ ನಿರ್ಣಯಗಳನ್ನು ಜಾರಿಗೊಳಿಸಿ, ಈ ಕೂಡಲೇ ಚಿತ್ರಹಿಂಸೆಗೆ ಒಳಪಡಿಸುವುದನ್ನು ಅಪರಾಧೀಕರಣಗೊಳಿಸಿ, ಸೂಕ್ತ ಕಾನೂನು ಜಾರಿಗೊಳಿಸಬೇಕೆಂದು ಒತ್ತಾಯಿಸಿದೆ.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮಧ್ಯ ಪ್ರವೇಶಿಸಿ, ಅದರ ಈ ಹಿಂದಿನ ಶಿಫಾರಸ್ಸುಗಳಂತೆ ಮಾನವ ಹಕ್ಕು ವಿಭಾಗಗಳನ್ನು ರಾಜ್ಯ ಹಾಗೂ ನಗರ ಪೊಲೀಸ್ ಮಟ್ಟದಲ್ಲಿ ಸ್ಥಾಪಿಸಿ, ಪೊಲೀಸ್ ಅಧಿಕಾರಿಗಳು ಯಾವುದೇ ಹಕ್ಕುಗಳನ್ನು ಉಲ್ಲಂಘಿಸಲಾರದಂತೆ ನಿಗಾವಹಿಸಿ, ಖಚಿತಪಡಿಸಿಕೊಳ್ಳಬೇಕೆಂದು ಅಮ್ನೆಸ್ಟಿ ಕರೆ ನೀಡಿದೆ.

ಸಫೂರ್ ಝರ್ಗರಾ ಎಂಬ ಗರ್ಭಿಣಿ ವಿದ್ಯಾರ್ಥಿನಿಯನ್ನು ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆಯಡಿಯಡಿ ಬಂಧಿಸಿ, ದಂಗೆಯಲ್ಲಿ ಆಕೆಯ ಆರೋಪಿತ ಕೃತ್ಯಗಳಿಗಾಗಿ ಕೋವಿಡ್ ೧೯ರ ಸಾಂಕ್ರಾಮಿಕ ರೋಗದ ಸಮಯದಲ್ಲೂ ಸೆರೆಮನೆಗೆ ಕಳಿಸಿದ್ದನ್ನು ವರದಿ ಪ್ರಸ್ತಾಪಿಸಿದೆ ಮತ್ತು ಇದುವರೆಗೂ ಯಾವುದೇ ರಾಜಕೀಯ ನಾಯಕನನ್ನು ದ್ವೇಷದ ಭಾಷಣಗಳ ಮೂಲಕ ದಂಗೆಗೆ ಪ್ರಚೋದನೆ ನೀಡಿದ್ದಕ್ಕಾಗಿ ಬಂಧಿಸಿಲ್ಲ, ಶಿಕ್ಷಿಸಿಲ್ಲ. ಸಂಘಟನೆಯ ಕಾರ್ಯನಿರ್ವಾಹಕ ನಿರ್ದೇಶಕ ಅವಿನಾಶ್ ಕುಮಾರ್ ವರದಿಯಲ್ಲಿ ಹೇಳಿರುವಂತೆ, "ದೆಹಲಿ ಅಲ್ಪಸಂಖ್ಯಾತರ ಆಯೋಗ ನೀಡಿದ ವರದಿಯೂ ಸೇರಿದಂತೆ ಹಲವು ಸುದ್ದಿಮೂಲ ಸಂಸ್ಥೆಗಳುಗಳು, ಸತ್ಯಶೋಧನಾ ಸಮಿತಿಗಳು ಕಳೆದ ೬ ತಿಂಗಳಲ್ಲಿ ಆದ ಉಲ್ಲಂಘನೆಗಳನ್ನು ದಾಖಲಿಸಿ, ವರದಿಗಳನ್ನು ಪ್ರಟಸಿವೆಯಾದರೂ ಕೇಂದ್ರ ಗೃಹ ಮಂತ್ರಾಲಯ ಪೊಲೀಸರ ವಿರುದ್ಧ ಯಾವುದೇ ಕ್ರಮ ಜರುಗಿಸಿಲ್ಲ." "ಈ ಮೂಲಕ ಹಿಂಸಾಚಾರ ಪ್ರತಿಪಾದಿಸುವ, ಪೊಲೀಸರು ಮತ್ತು ರಾಜಕಾರಣಗಳಿಗೆ ಭವಿಷ್ಯದಲ್ಲಿ ತಾವೇನೇ ಮಾನವ ಹಕ್ಕುಗಳ ಉಲ್ಲಂಘನೆ ಮಾಡಿದರೂ ನುಣುಚಿಕೊಳ್ಳಬಹುದು ಎಂಬ ಸಂದೇಶ ರವಾನಿಸಲಾಗುತ್ತದೆ" ಎಂದೆನ್ನುವ ಕುಮಾಋ ಅವರ ಹೇಳಿಕೆ, "ಹಿಂಸಾಚಾರಕ್ಕೆ ಪ್ರಭುತ್ವ ಪ್ರಾಯೋಜಿಸುವ ಇಂತಹ ರಕ್ಷಣೆ ಕೂಡಲೇ ಕೊನೆಗೊಳ್ಳಬೇಕು" ಎಂದು ಆಗ್ರಹಿಸುತ್ತದೆ,

ವರದಿಯಲ್ಲಿ ಕೇಂದ್ರ ಗೃಹಮಂತ್ರಿ ಅಮಿತ್ ಶಾ, ದೆಹಲಿಯ ಗಲಭೆಗಳಾದ ಕೆಲವೇ ದಿನಗಳಲ್ಲಿ, ಮಾರ್ಚ್ ೧೧ರಂದು, ಸಂಸತ್ತಿನಲ್ಲಿ ದೆಹಲಿ ಪೊಲೀಸರು ಯಾವುದೇ ತಪ್ಪುಗಳಾಗಿಲ್ಲ. ಕೇವಲ ೩೬ ಗಂಟೆಗಳಲ್ಲಿ ಗಲಭೆಗಳನ್ನು ಹತೋಟಿಗೆ ತಂದು, ಸಂಪೂರ್ಣವಾಗಿ ನಿಲ್ಲಿಸಿ, ಪ್ರಶಂಸನೀಯ ಕರ್ತವ್ಯ ನಿಭಾಯಿಸಿದ್ದಾರೆ ಎಂದು ಹೇಳಿಕೆ ನೀಡಿದ್ದನ್ನು ಪ್ರಧಾನವಾಗಿ ಉಲ್ಲೇಖಿಸಿದೆ. ಆದರೆ ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಇಂಡಿಯಾ ಸಂಗ್ರಹಿಸಿದ ಮಾಹಿತಿಯಂತೆ ಪೋಲೀಸರೇನೂ ಇಂತಹ್ಹ ಸ್ತು ತ್ಯರ್ಹ ಕೆಲಸ ಮಾಡಿಲ್ಲ ಎನ್ನುತ್ತದೆ. ಬದಲಿಗೆ ಅದೊಂದು ಬಗೆಯ ವ್ಯವಸ್ಥಿತ ಮಾನವ ಹಕ್ಕುಗಳ ಉಲ್ಲಂಘನೆಯನ್ನು ಮತ್ತು ಜನ ನಿರ್ಭೀತಿಯಿಂದ ಹಿಂಸೆಗಿಳಿಯುವುದನ್ನು ಸಾಧ್ಯವಾಗಿಒಸಿದೆ. ಹಲವಾರು ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆಗಳನ್ನು ವರದಿ ಒಳಗೊಂಡಿದೆ. ಜನತೆ ಸಹಾಯಕ್ಕಾಗಿ ಮಾಡಿದ ಕರೆಗಳು ಮತ್ತು ತುರ್ತು ಆರೋಗ್ಯ ಸಮಸ್ಯೆಗಳ ಸಂದರ್ಭಗಳಲ್ಲೂ ಕೂಡ ಸ್ಪಂದಿಸದ ಪೊಲೀಸರ ವೈಫಲ್ಯದ ನಿರ್ದಿಷ್ಟ ಉದಾಹರಣೆಗಳನ್ನು ಉಲ್ಲೇಖಿಸಿದೆ. ತನ್ನ ಪತಿಯನ್ನು ಕಳೆದುಕೊಂಡ ಶಬನಂ ಎಂಬ ಸಂತ್ರಸ್ತೆಯ ಪ್ರಕರಣವನ್ನು ನಿರೂಸುತ್ತಾ, ಅವಳ ಗಂಡ ಹಾಗೂ ತಂದೆ ನಿರಂತರವಾಗಿ ಪೊಲೀಸರಿಗೆ ಕರೆ ಮಾಡಿದರು ಪ್ರಯೋಜನವಾಗಲಿಲ್ಲ ಎನ್ನುವ ವರದಿ ಆಕೆಯ ಈ ಮಾತುಗಳನ್ನು ಉಲ್ಲೇಖಿಸುತ್ತದೆ: "ಪೋಲಿಸರು ಕೇಳಿದಂತೆ ನಮ್ಮ ವಾಸಸ್ಥಾನಗಳ ವಿವರರಗಳನ್ನೂ ನೀಡಿದರೂ ಯಾರೂ ಸಹಾಯಕ್ಕೆ ಬರಲಿಲ್ಲ. ನಮ್ಮ ಮನೆಯನ್ನು ಸುಟ್ಟು ಹಾಕಿದ ಮೇಲೂ ಮಧ್ಯ ರಾತ್ರಿ ೧ಗಂಟೆಗೆ ಪೊಲೀಸರಿಗೆ ಕರೆ ಮಾಡಿದಾಗ ಅವರು ಅಂದದ್ದು, 'ಅದೆಷ್ಟು ತೊಂದರೆ ಕೊಡುತ್ತೀರಿ ನಮಗೆ? ಪೊಲೀಸ್ ವ್ಯಾನ್‌ಗಳನ್ನು ಕಳಿಸುತ್ತೇವೆ". ಇನ್ನೊಬ್ಬ ಗಲಭೆಯ ಸಂತ್ರಸ್ತ ಕಮಲೇಶ್ ಉಪಲ್, ಪೊಲೀಸರಿಗೆ ಕರೆ ಮಾಡಿದ ತನ್ನ ಅನುಭವವನ್ನು ಹಂಚಿಕೊಳ್ಳುತ್ತಾ, "ಮಧ್ಯಾಹ್ನ ಬೀಗ ಒಡೆದು ಬಂದು ನನ್ನ ಮನೆ ಸುಟ್ಟರು. ೨೨ ವರ್ಷಗಳಿಂದ ನಾವಿಲ್ಲಿ ವಾಸಿಸುತ್ತಿದ್ದೇವೆ. ಏನನ್ನೂ ಬಿಡಲಿಲ್ಲ. ನಾವೆಷ್ಟು ಕಷ್ಟಪಟ್ಟು ನಮ್ಮ ಮನೆ ಕಟ್ಟಿಕೊಂಡಿದ್ದೆವು. ಆದರೆ ಕೆಲವರು ಅದನ್ನು ಸುಟ್ಟು ಬೂದಿ ಮಾಡಿದರು. ಪೊಲೀಸರಿಗೆ ಕರೆ ಮಾಡಲು ಪ್ರಯತ್ನಿಸಿದೆವು, ಅವರು ಬರುವರು, ಕಾನೂನು ಸುವ್ಯವಸ್ಥೆಯನ್ನು ನಿಯಂತ್ರಿಸಿ, ಪರಿಸ್ಥಿತಿಯನ್ನು ಹತೋಟಿಗೆ ತರುವವರು ಎಂದು. ಆದರೆ ನಮ್ಮ ಜಾಗಕ್ಕೆ ಬರಲು ಮೂರು ದಿನ ಬೇಕಾಯಿತು. ಗಲಭೆಯಲ್ಲಿ ಬಚಾವಾದ ರೂಪ್‌ಸಿಂಗ್, ಶಿವವಿಹಾರದ ಶಾಲೆಯ ಪರಿಚಾರಕ. ಫೆಬ್ರವರಿ ೨೫–೨೫ರಂದು ವಿಧ್ವಂಸಕ ಕೃತ್ಯ ನಡೆಯುತ್ತಿದ್ದಾಗ, ತನ್ನ ಕರೆಗೆ ಪೊಲೀಸರ ಇಂಥದ್ದೇ ವರ್ತನೆಯನ್ನು ತಿಳಿಸಿದ. ಬೇರೆಯವರಂತಲ್ಲದೆ, ಸಿಂಗ್, ಪೊಲೀಸರ ಬಗ್ಗೆ ಹೀಗೆ ಸಹಾನುಭೂತಿ ವ್ಯಕ್ತಪಡಿಸಿದ : "ಪೊಲೀಸರು ಬರುತ್ತಿದ್ದರು. ಆದರೆ ಒಳಗೆ ಬರಲು ಅವರನ್ನು ಬಿಡಲಿಲ್ಲ. ಗಲಭೆಕೋರರು ಅವರನ್ನು ಬರಗೊಡಲಿಲ್ಲ".

ಗಮನಾರ್ಹವಾಗಿ, ವರದಿಯು ಉತ್ತರ ಪ್ರದೇಶದ ನಿವೃತ್ತ ಡಿಜಿಪಿ ವಿಭೂತಿನಾರಾಯಣ

**(೫ನೇ ಪುಟಕ್ಕೆ**

ಪ್ರಚಲಿತ–೧

# ಭಾರತವು ಚುನಾಯಿತ ನಿರಂಕುಶ ಪ್ರಭುತ್ವದ ಕಡೆಗೆ ಚಲಿಸುತ್ತಿದೆ

## ನಾವೀಗ ಗಟ್ಟಿಯಾಗಿ ಮಾತನಾಡಬೇಕು.

–ನ್ಯಾ. ಎ.ಪಿ. ಶಾ



ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ಅದರ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಒಳಗಿಂದಲೇ ದುರ್ಬಲಗೊಳಿಸಿ ಪ್ರಜೆಗಳ ನಾಗರಿಕ ಹಕ್ಕುಗಳನ್ನು ಮೊಟಕುಗೊಳಿಸುವ ಮೂಲಕ ಫ್ಯಾಸಿಸ್ಟ್ ಎನ್ನಬಹುದಾದ ಪ್ರಭುತ್ವವನ್ನು ಸ್ಥಾಪಿಸುವ ಯೋಜನೆಯೊಂದು ಹಂತಾನುಹಂತವಾಗಿ ಕಾರ್ಯಗತಗೊಳ್ಳುತ್ತಿದೆ ಎಂಬ ಆತಂಕ ಹಲವು ಕಡೆಗಳಿಂದ ಕೇಳಿಬರುತ್ತಿದೆ. ಇಂತಹ ಆತಂಕ ಆಡಳಿತ ವಿರೋಧಿ ರಾಜಕೀಯ ಶಕ್ತಿಗಳಿಂದಷ್ಟೇ ವ್ಯಕ್ತವಾಗದೆ, ರಾಜಕೀಯದ ಸೋಂಕಿಲ್ಲದ ಮತ್ತು ದೇಶಕ್ಕೆ ತಮ್ಮದೇ ಪರಿಣತಿಯ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದ ಸ್ವತಂತ್ರ ಮನೋಭಾವದ ಮಹನೀಯರುಗಳಿಂದಲೂ ಸ್ಪಷ್ಟ ಮತ್ತು ಖಚಿತ ಶಬ್ದಗಳಲ್ಲಿ ಕೇಳಿಬರುತ್ತಿವೆ. ಅಂತಹ ಓರ್ವ ದೆಹಲಿ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ತಮ್ಮ ಹಲವು ತೀರ್ಪುಗಳ ಮೂಲಕ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ದಿಟ್ಟವಾಗಿ ಎತ್ತಿಹಿಡಿದ ನಮ್ಮ ನಡುವಣ ಗೌರವಾನ್ವಿತ ಹಿರಿಯ ನ್ಯಾಯವೇತ್ತರೆನಿಸಿದ ನ್ಯಾಯಮೂರ್ತಿ ಎ.ಪಿ. ಶಾ ಅವರು. ಕಳೆದ ಆಗಸ್ಟ್ ೧೭ರಂದು ನಾಗರಿಕ ಹಕ್ಕುಗಳ ಸಂಘಟನಾ ಸಮೂಹ ದೆಹಲಿಯಲ್ಲಿ ಆಯೋಜಿಸಿದ್ದ ಜನತಾ ಸಂಸತ್ತಿನ ಉದ್ಘಾಟನಾ ಅಧಿವೇಶನದಲ್ಲಿ ಮಾಡಿದ ಭಾಷಣದ ಕನ್ನಡಾನುವಾದವನ್ನು ಇಲ್ಲಿ ನೀಡುತ್ತಿದ್ದೇವೆ.–ಸಂ.

**ಸಂ**ಸತ್ತಿನ ಈ ವರ್ಷದ ಮುಂಗಡಪತ್ರ ಅಧಿವೇಶನವು ೨೦೨೦ರ ಜನವರಿ ೩೧ರಂದು ಪ್ರಾರಂಭವಾಯಿತು. ಕಾಕತಾಳೀಯವಾಗಿ ಆ ಹೊತ್ತಿಗೆ ವಿಶ್ವ ಆರೋಗ್ಯ ಸಂಸ್ಥೆಯು ಕೋವಿಡ್–೧೯ ಎಂಬ ಸಾಂಕ್ರಾಮಿಕ ರೋಗವು ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ಒಂದು ಅಂತರ ರಾಷ್ಟ್ರೀಯ ತುರ್ತು ಎಂದು ಘೋಷಿಸಿ ಒಂದು ದಿನ ಕಳೆದಿತ್ತು. ವಾಸ್ತವದಲ್ಲಿ ಏಪ್ರಿಲ್ ೨ರವರೆಗೆ ನಡೆಯಬೇಕೇಂದು ನಿಗದಿಯಾಗಿದ್ದ ಅಧಿವೇಶನವನ್ನು ೨೩ ದಿನಗಳಷ್ಟು ಕಡಿಮೆ ಅವಧಿಯ ನಂತರ ಅನಿರ್ದಿಷ್ಟ ಕಾಲ ಮುಂದೂಡಬೇಕೆಂದು ಮಾರ್ಚ್ ೨೩ರಂದು ನಿರ್ಧರಿಸಲಾಯಿತು.

ಈ ಸಂಕಷ್ಟ ಕಾಲದಲ್ಲಿ ಇತರೆ ದೇಶದ ಸಂಸತ್ತುಗಳು ಹೇಗೆ ಕೆಲಸ ಮಾಡುತ್ತಿವೆ ಎಂಬುದನ್ನು ಇದರ ಎದುರಿಗಿಟ್ಟು ನೋಡಿ. ಯುನೈಟೆಡ್ ಕಿಂಗ್ಡಮ್, ಕೆನಡಾ, ಯೂರೋಪಿಯನ್ ಸಂಸತ್ತುಗಳಲ್ಲಿ, ಕೆಲವು ಸದಸ್ಯರು ಸದನದಲ್ಲಿ ಹಾಜರಿದ್ದು, ಇತರರು ವಿಡಿಯೋ ಕಾನ್ಫರೆನ್ಸ್ ಮೂಲಕ ಭಾಗವಹಿಸಿ ಅಧಿವೇಶನ ನಡೆಸಲು ಅನುವಾಗುವಂತೆ ಹೈಬ್ರಿಡ್ ಅಥವಾ ಸಂಪೂರ್ಣ ಪರೋಕ್ಷ(ವರ್ಚುವಲ್) ರೂಪದಲ್ಲಿ ಬದಲಾವಣೆ ಮಾಡಿಕೊಂಡವು. ಈ ಸಂಸತ್ತುಗಳು ಸಾಧ್ಯವಿರುವ ಮಟ್ಟಿಗೂ ಸದನದ ಕಲಾಪಗಳು ತಡೆಯಿಲ್ಲದಂತೆ ನಡೆಯಲು ಸಾಧ್ಯವಾಗುವಂತೆ ದೂರ ಮತದಾನದ ಅವಕಾಶವನ್ನೂ ಸೃಷ್ಟಿಸಿಕೊಂಡವು.

ಫ್ರಾನ್ಸ್, ಇಟಲಿ, ಅರ್ಜೆಂಟಿನಾ, ಬ್ರೆಜಿಲ್, ಚಿಲಿ, ನ್ಯೂಜಿಲೆಂಡ್, ಆಸ್ಟ್ರೇಲಿಯಾ, ಮತ್ತು ಇತರೆ ಎಷ್ಟೋ ದೇಶಗಳು ಇದೇ ರೀತಿ ಕಾರ್ಯ ನಿರ್ವಹಿಸುತ್ತಿವೆ. ಸಾಂಕ್ರಾಮಿಕ ರೋಗದಿಂದ ಅತಿ ಹೆಚ್ಚು ಹಾನಿಗೊಳಗಾದ ಸ್ಪೈನ್ ಕೂಡ ಶಾಸನದ ಕೆಲಸ ಸುಗಮವಾಗಿ ನಡೆಯುವಂತೆ ನೋಡಿಕೊಂಡಿತು. ಮಾಲ್ಡಿವ್ಸ್ ದೇಶದ ಸಂಸತ್ತಾದ ಜನತಾ ಮಜ್ಲಿಸ್ (ಪೀಪಲ್ಸ್ ಮಜ್ಲಿಸ್)ಪರೋಕ್ಷ ರೂಪದಲ್ಲಿ ಸಂಸತ್ ಅಧಿವೇಶನ ನಡೆಸಲು ಮೈಕ್ರೋಸಾಫ್ಟ್ ಟೀಮ್ಸ್ ವಿಡಿಯೋ ಕಾನ್ಫರೆನ್ಸಿಂಗ್ ತಂತ್ರಜ್ಞಾನವನ್ನು ಬಳಸಿಕೊಂಡಿತ್ತು.

ಮಾಲ್ಡಿವ್ಸ್ ಪಾರ್ಲಿಮೆಂಟಿನ ಸ್ಪೀಕರ್ ಮಹಮದ್ ನಶೀದ್, "ಜಗತ್ತಿನಾದ್ಯಂತ ಪಾರ್ಲಿಮೆಂಟುಗಳು ಈ ಸಂಕಷ್ಟದ ಸಮಯದಲ್ಲಿ ತಮ್ಮ ಜನರನ್ನು ಪ್ರತಿನಿಧಿಸುವುದನ್ನು ನಿಲ್ಲಿಸಲಾಗದು, ಪ್ರಜಾತಂತ್ರದ ಸಂಸ್ಥೆಗಳು ಕಾರ್ಯ ನಿರ್ವಹಿಸುವುದನ್ನು ಮುಂದುವರಿಸಬೇಕು" ಎನ್ನುತ್ತಾರೆ.

ದು:ಖ ತರುವ ವಿಚಾರವೆಂದರೆ ಈ ಭಾವನೆಗಳು, ಮಾರ್ಚ್ ೨೦೨೦ರಿಂದ ಸಂಸತ್ತು ಒಂದು ಹಾಳುಬಿದ್ದ ಊರಿನಂತೆ ಕಾಣುತ್ತಿರುವ ಭಾರತದ ಸಮುದಾಯದಲ್ಲಿ ಪ್ರತಿಧ್ವನಿಸಿದಂತೆ ಕಾಣುವುದಿಲ್ಲ. ಸಂಸತ್ತನ್ನು ಬಂದ್ ಮಾಡುವ ನಿರ್ಧಾರ ೧೯೬೨, ೧೯೭೧ರ ಯುದ್ಧ ಮತ್ತು ಭಯೋತ್ಪಾದಕರ ದಾಳಿಗಳ ಸಂದರ್ಭಗಳಲ್ಲೂ ಕೂಡ ಸಂಸತ್ತಿನ ಅಧಿವೇಶನಗಳನ್ನು ನಡೆಸಿದ ಸಂಪ್ರದಾಯಕ್ಕೆ ಕೂಡ ವಿರುದ್ಧವೇ. ಭಾರತದ ಸೇನೆಯು ನಮ್ಮ ನೆರೆಯ ದೇಶದ ಸೈನಿಕರ ಜೊತೆ ಯುದ್ಧದಲ್ಲಿ ತೊಡಗಿದ್ದಾಗ ಸಂಸತ್ತಿನ ಅಧಿವೇಶನಗಳು ನಡೆಯುತ್ತಿದ್ದವು. ೨೦೦೧ರಲ್ಲಿ ಪಾರ್ಲಿಮೆಂಟ್ ಕಟ್ಟಡದ ಮೇಲೆ ಭಯಂಕರ ಧಾಳಿ ನಡೆದ ಮರು ದಿನವೇ ಭಾರತದ ಸಂಸತ್ತು ಕಲಾಪ ನಡೆಸಿತ್ತು.

ಭಾರತದಲ್ಲಿ ಸಂಸತ್ತು ಪರೋಕ್ಷವಾಗಿ (ವರ್ಚುವಲ್) ನಡೆಯಬಾರದು ಎನ್ನುವಂತಿಲ್ಲ, ವೇತನ ಮತ್ತು ಭತ್ಯೆಗಳ ಜಂಟಿ ಸಮಿತಿಯು ಏಪ್ರಿಲ್ ೬ ರಂದು ಸಭೆ ನಡೆಸಿ ಸಂಸದರ ಕ್ಷೇತ್ರ ಮತ್ತು ಕಛೇರಿ ಭತ್ಯೆಯಲ್ಲಿ ೩೦% ಕಡಿತ ಮಾಡುವ ಶಿಫಾರಸು ಮಾಡಿತು. ಇಂತಹ ವಿಚಾರಗಳನ್ನು ಚರ್ಚಿಸಲು ಆನ್‌ಲೈನ್‌ನಲ್ಲಿ ಇವರುಗಳು ಸಭೆ ನಡೆಸುವುದು ಸಾಧ್ಯವಾದರೆ ಇವರು ಖಂಡಿತಾ ಆನ್‌ಲೈನ್ ವ್ಯವಸ್ಥೆಯ ಮೂಲಕ ಸಭೆ ನಡೆಸಿ ಚುನಾಯಿತ ಪ್ರತಿನಿಧಿಗಳಾಗಿ ತಮ್ಮ ಶಾಸಕ ಕರ್ತವ್ಯಗಳನ್ನು ನಿರ್ವಹಿಸಬಹುದು.

### ಸಂಸತ್ತಿನ ಪಾತ್ರ

ಪ್ರಭುತ್ವದ ವಿವಿಧ ಅಂಗಗಳು ಯಾವ ಪಾತ್ರಗಳನ್ನು ನಿರ್ವಹಿಸಬೇಕೆಂದು ನಿರೀಕ್ಷಿಸಲಾಗಿತ್ತು ಎಂಬುದನ್ನು ಅರ್ಥಮಾಡಿಕೊಳ್ಳುವುದು ಈ ಹಂತದಲ್ಲಿ ಮುಖ್ಯವಾಗುವುದು. ಸಂವಿಧಾನ ಸಭೆಯು ಅಂಕೆಯನ್ನು ಮೀರಿ ನಡೆಯಬಹುದಾದ ಸಾಧ್ಯತೆ ಇದೆ ಎಂಬ ಸಂಶಯವನ್ನು ವಸಾಹತುಶಾಹಿಯ ತನ್ನ ಅನುಭವದ ಹಿನ್ನೆಲೆಯಲ್ಲಿ ಹೊಂದಿತ್ತು, ಜನರ ಹಕ್ಕುಗಳ ರಕ್ಷಕನಾದ ಶಾಸನ ಸಭೆಯ ಪಾವಿತ್ರ್ಯದಲ್ಲಿ ಅದು ಹೆಚ್ಚಿನ ನಂಬಿಕೆ ಇರಿಸಿತ್ತು.

ಪಾರ್ಲಿಮೆಂಟರಿ ವ್ಯವಸ್ಥೆಗಳಲ್ಲಿ, ಕಾರ್ಯಾಂಗದ ಕಾರ್ಯಗಳು ದಿನನಿತ್ಯ, ಮತ್ತು ಕಾಲಕಾಲಕ್ಕೆ ಶಾಸಕಾಂಗದ ಪರಿಶೀಲನೆಗೆ ಒಳಗಾಗುವಂತಿದ್ದು, ಕಾರ್ಯಾಂಗವು ಶಾಸಕಾಂಗಕ್ಕೆ ಜವಾಬ್ದಾರನಾಗಿರಬೇಕಾಗುತ್ತದೆ. ಈ ಉದ್ದೇಶಕ್ಕಾಗಿ ಪ್ರಶ್ನೋತ್ತರ, ಮಸೂದೆಗಳು, ಅವಿಶ್ವಾಸ ನಿರ್ಣಯ, ಮತ್ತು ಚರ್ಚೆಗಳಂತಹ ಹಲವಾರು ವಿಧಾನಗಳನ್ನು ಬಳಸಲಾಗುತ್ತದೆ. ಕಾನೂನಿನ ಕಣ್ಗಾವಲು, ಮತ್ತು ವಿವಿಧ ಸಂಸದೀಯ ಸಮಿತಿಗಳ ಕಾರ್ಯಕಾರೀ ಚಟುವಟಿಕೆಗಳ ಜೊತೆ ಹೆಚ್ಚುವರಿಯಾಗಿ ಇವೆಲ್ಲವೂ ಇರುತ್ತವೆ.

ಈ ಎಲ್ಲ ಚಟುವಟಿಕೆಗಳ ಮೌಲ್ಯಮಾಪನ ಮತ್ತು ಹೊಣೆಗಾರಿಕೆಗಳ ದ್ವಿತೀಯ ಹಂತದಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ ನಿಯತಕಾಲಿಕವಾಗಿ ನಡೆಯುವ ಚುನಾವಣೆ ಇರುತ್ತದೆ. ೧೯೭೭ರಲ್ಲಿ ಇಂದಿರಾ ಗಾಂಧಿಯಂತಹವರನ್ನು ಪ್ರಧಾನಿಯ ಕಛೇರಿಯಿಂದ ಹೊರಗೆ ಕಳುಹಿಸಿದ್ದು, ಮತ್ತು ೧೯೮೦ರಲ್ಲಿ ಅವರನ್ನು ಮತ್ತೆ ಚುನಾಯಿಸಿದ್ದು ಈ ಚುನಾವಣಾ ಪ್ರಕ್ರಿಯೆಯೇ.

ಸಂಸತ್ತಿನ ಒಳಗೆ, ಲೋಕಸಭೆಯು ಅವಸರದಲ್ಲಿ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆಯನ್ನು ನಿವಾರಿಸುವ ಮತ್ತು ಲೋಕಸಭೆಯು ಪರಿಗಣಿಸದೆ ಬಿಟ್ಟುಬಿಡಬಹುದಾದ ಹಿತಾಸಕ್ತಿಗಳಿಗೂ ಒಂದು ಪ್ರಾತಿನಿಧ್ಯ ದೊರಕಿಸುವ, ಸ್ಪಷ್ಟವಾಗಿ ವ್ಯಾಖ್ಯಾನಿಸಲಾದ ಪಾತ್ರವನ್ನು ಮೇಲ್ಮನೆ ಅಥವಾ ರಾಜ್ಯಸಭೆಯು ಹೊಂದಿದೆ.

ಈ ರೀತಿಯಲ್ಲಿ ಕಾರ್ಯಾಂಗವನ್ನು ನಿಯಂತ್ರಣದಲ್ಲಿಡುವ ಒಂದು ಸಂಸ್ಥೆಯಾಗಿ ಸಂಸತ್ತು ಇರಬೇಕೆಂದು ಉದ್ದೇಶಿಸಲಾಗಿದೆ. ತಾನು ಪ್ರತಿನಿಧಿಸುವ ಜನರ ಪರವಾಗಿ ಸಂಸತ್ತು ಈ ಬಗೆಯ ಹೊಣೆಗಾರಿಕೆಯನ್ನು ನಿರ್ವಹಿಸುತ್ತದೆ. ಪ್ರಶ್ನೋತ್ತರ ಮತ್ತು ಚರ್ಚೆಗಳಂತಹ ವಿಧಾನಗಳನ್ನು ಈ ಉದ್ದೇಶಕ್ಕಾಗಿ ಬಳಸಲಾಗುತ್ತದೆ.

ಆದರೆ ಸಂಸತ್ತೇ ಕೆಲಸ ಮಾಡುವುದನ್ನು ನಿಲ್ಲಿಸಿದಾಗ ಏನಾಗುತ್ತದೆ? ಸಾಂಕ್ರಾಮಿಕ ರೋಗದಂತಹ ಒಂದು ಸಂಕಷ್ಟದ ಸಮಯದಲ್ಲಿ ಜನರಿಗೆ ನಾಯಕತ್ವವನ್ನು ನೀಡುವಲ್ಲಿ ಸೋಲುವುದು ಮಾತ್ರವಲ್ಲದೆ, ಕಾರ್ಯಾಂಗವು ತನಗೆ ಇಚ್ಛೆ ಬಂದ ಹಾಗೆ ನಡೆದುಕೊಳ್ಳಲು ಅನುವು ಮಾಡುವ ಮೂಲಕ ಪ್ರಾತಿನಿಧ್ಯ ಮತ್ತು ಹೊಣೆಗಾರಿಕೆಯ ಸಮಸ್ಯೆಗಳನ್ನು ಅದು ಜಟಿಲಗೊಳಿಸುತ್ತದೆ. ಪ್ರಶ್ನೆ ಮಾಡುವವರೇ ಇಲ್ಲದೆ ಇರುವ ಈ ಸ್ಥಿತಿಯಲ್ಲಿ ಕಾರ್ಯಾಂಗದ ಹೊಣೆಗಾರಿಕೆ ಎಂಬುದು ಕೇವಲ ನೆನಪಾಗಿ ಉಳಿಯುತ್ತದೆ.

### ಕಾರ್ಯಾಂಗದ ಹೊಣೆಗಾರಿಕೆಯ ಸಾವು?

ಭಾರತೀಯ ಸಂವಿಧಾನವು ಕಾಗದದ ಮೇಲೆ ಒಂದು ಉದಾರವಾದಿ, ಪ್ರಜಾಸತ್ತಾತ್ಮಕ ಜಾತ್ಯತೀತ ಮತ್ತು ಸಮಾನತಾವಾದಿಯಾದ ಸಂವಿಧಾನವು ಹೇಗೆ ಕಾಣಬೇಕು ಎಂಬ ಬಗ್ಗೆ ಹಲವಾರು ರಚನೆಗಳನ್ನು ನಿರೂಪಿಸಿದೆ. ಹೊರಗಿನ ಹಸ್ತಕ್ಷೇಪದ ವಿರುದ್ಧ ಮೂಲಭೂತ ಹಕ್ಕುಗಳ ಉಗ್ರ ರಕ್ಷಣೆಗಾಗಿ ನಿಜವಾಗಿ ಸ್ವತಂತ್ರವಾಗಿರುವ ನ್ಯಾಯಾಂಗ ಒಂದು ಸಂಸದೀಯ ವ್ಯವಸ್ಥೆಯುಳ್ಳ ಸರ್ಕಾರ ಮತ್ತು ಕೇಂದ್ರ ಹಾಗೂ ರಾಜ್ಯಗಳ

ನಡುವಣ ಒಕ್ಕೂಟ ತತ್ವಕ್ಕೆ ಅನುಸಾರವಾದ ಹೊಣೆಗಾರಿಕೆಗಳಿಂದ ಕೂಡಿದ ನಮ್ಮ ಸಂವಿಧಾನ ಹಲವರ ಈರ್ಷೆಗೆ ಕಾರಣವಾಗುವಷ್ಟು ಪರಿಣಾಮಕಾರಿಯಾಗಿದೆ.

ಜಗತ್ತಿನ ಇತರೆಡೆಯ ಉದಾರ ಪ್ರಜಾತಾಂತ್ರಿಕ ವ್ಯವಸ್ಥೆಗಳಂತೆಯೇ ಭಾರತ ಕೂಡ ಕಾರ್ಯಾಂಗದ ಹೊಣೆಗಾರಿಕೆಯ ವಿಚಾರದಲ್ಲಿ ಒಂದು ಪಠ್ಯಪುಸ್ತಕದ ಶಿಸ್ತಿನ ಚೌಕಟ್ಟಿಗೆ ಹೊಂದಿಕೆಯಾಗುತ್ತದೆ. ಶಾಸಕಾಂಗದ ಮೂಲಕ, ಜನರ ಬಗೆಗೆ ಉತ್ತರದಾಯಿಯಾಗಿರುತ್ತದೆ, ನ್ಯಾಯಾಂಗದ ಮೂಲಕ ಸಂವಿಧಾನಕ್ಕೆ, ಮತ್ತು ಕಾನೂನಿಗೆ ಒಳಪಡುವ ವಿಚಾರದಲ್ಲಿ, ಹಾಗೆಯೇ ಮಹಾಲೆಕ್ಕಪರಿಶೋಧಕ, ಚುನಾವಣಾ ಆಯೋಗ, ಮಾನವ ಹಕ್ಕುಗಳ ಕಾವಲು ಸಂಸ್ಥೆ, ಭ್ರಷ್ಟಾಚಾರ ವಿರೋಧಿ ಸಂಸ್ಥೆಗಳು, ಇನ್ನು ಮುಂತಾದವುಗಳಿಗೆ ಉತ್ತರದಾಯಿಯಾಗಿರುತ್ತದೆ, ಮತ್ತು ಪತ್ರಿಕಾ ಅಕಾಡೆಮಿಯ ಮತ್ತು ನಾಗರಿಕ ಹಕ್ಕುಗಳ ಸಂಘಟನೆಗಳ ಮೂಲಕ ಹೆಚ್ಚುವರಿಯಾದ ಉತ್ತರದಾಯಿತ್ವ ಇರುತ್ತದೆ. ಇದು ಸರ್ಕಾರೇತರ ಸಂಸ್ಥೆಗಳನ್ನು, ಕಾರ್ಮಿಕ ಸಂಘಟನೆಗಳನ್ನು, ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳನ್ನೂ ಒಳಗೊಂಡಿರುತ್ತದೆ.

ದುರದೃಷ್ಟವಶಾತ್ ಇಂದು ಭಾರತದಲ್ಲಿ ನಾವು ನೋಡುತ್ತಿರುವುದು, ಪ್ರತಿಯೊಂದು ಸಾಂವಿಧಾನಿಕ ಸಂಸ್ಥೆಯನ್ನೂ, ಕಾರ್ಯಾಂಗವನ್ನು ಹೊಣೆ ಮಾಡುವ ವ್ಯವಸ್ಥೆಯನ್ನು ಒಳಗೊಳಗಿನಿಂದಲೇ ನೆಲಸಮಗೊಳಿಸುವ ಕೆಲಸ. ೨೦೧೪ರಿಂದಲೂ ಈ ಸಂಸ್ಥೆಗಳನ್ನು ವ್ಯವಸ್ಥಿತವಾಗಿ ನಾಶಮಾಡುವುದಕ್ಕೆ ಪ್ರತಿಯೊಂದು ಪ್ರಯತ್ನವನ್ನೂ ಮಾಡಲಾಗುತ್ತಿದೆ. ಹಿಂದೆ ಇಂದಿರಾ ಗಾಂಧಿಯವರ ಸರ್ಕಾರ ಮಾಡಿದ ಹಾಗೆ ನಿರ್ಲಜ್ಜ ವಿನಾಶಕಾರಿ ರೀತಿಯಲ್ಲಲ್ಲ, ಆದರೆ ಕಾರ್ಯಾಂಗಕ್ಕೆ ಬಹಳಷ್ಟು ವಿಷಯಗಳಲ್ಲಿ ಮೇಲುಗೈ ಒದಗಿಸುವ ರೀತಿಯಲ್ಲಿ ಬಾರತದ ಪ್ರಜಾಪ್ರಭುತ್ವವನ್ನು ವಸ್ತುತಃ ನಿಶ್ಚೇಷ್ಟಿತಗೊಳಿಸುವ ಮೂಲಕ.

ಈ ಬಗ್ಗೆ ಹಲವಾರು ಉದಾಹರಣೆಗಳನ್ನು ನೀಡಬಹುದು, ವಿರೋಧ ಪಕ್ಷದ ನಾಯಕನನ್ನು ಮಾನ್ಯ ಮಾಡದೇ ಇರುವುದು, ಹಲವಾರು ಮಸೂದೆಗಳನ್ನು ಹಣಕಾಸು ಮಸೂದೆಗಳನ್ನಾಗಿ ಪರಿವರ್ತಿಸಿ ಮುಖ್ಯ ವಿಚಾರಗಳಲ್ಲಿ ರಾಜ್ಯ ಸಭೆಯನ್ನು ನಿರ್ಲಕ್ಷಿಸುವುದು. ಅಂದರೆ ಒಂದು ಮಸೂದೆಯನ್ನು ಲೋಕಸಭೆಯ ನಿರ್ಣಯ ಮಾತ್ರದಿಂದಲೇ ಅಂಗೀಕಾರ ಮಾಡುವುದು. ಹಲವು ಸಲ ಯಾವುದೇ ಚರ್ಚೆಗೆ ಅವಕಾಶ ನೀಡದೆ ಮಸೂದೆಯೊಂದನ್ನು ಮತಕ್ಕೆ ಹಾಕುವುದು. ಇವುಗಳ ಮೂಲಕ ಬೇರೊಂದು ಸಂದರ್ಭದಲ್ಲಿ ಪ್ರಶ್ನಿಸಲ್ಪಡದೇ ಹೋಗಲು ಸಾಧ್ಯವಿಲ್ಲದಂತಹ ಎಷ್ಟೋ ಕಾರ್ಯಗಳು ಪ್ರಶ್ನೆಗೆ ಸಿಲುಕದೆ ತಪ್ಪಿಸಿಕೊಳ್ಳಲು ಅನುವು ಮಾಡಿಕೊಡಲಾಗುತ್ತಿದೆ.

ಸಂಸತ್ತು ಅಪ್ರಸ್ತುತವಾಗುವಷ್ಟರ ಮಟ್ಟಿಗೆ ಕಾರ್ಯಾಂಗವು ಅದನ್ನು ದುರ್ಬಲಗೊಳಿಸಿದರೂ ಕೂಡ ಇತರೆ ಸಂಸ್ಥೆಗಳು ಮೇಲಕ್ಕೆ ಬಂದು ಕಾರ್ಯಾಂಗವನ್ನು ಉತ್ತರದಾಯಿಯನ್ನಾಗಿ ಮಾಡುವ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತವೆ ಎಂದು ಯಾರಾದರೂ ಆಶಿಸಬಹುದು. ಇವುಗಳ ಪೈಕಿ ಬಹಳ ಪ್ರಮುಖವಾದುದು ನ್ಯಾಯಾಂಗ. ನಾವು ಯಾವಾಗಲೂ ಭಾರತದ ಸ್ವತಂತ್ರ ನ್ಯಾಯಾಂಗದ ಬಗ್ಗೆ ಹೆಮ್ಮೆ ಪಟ್ಟಿದ್ದೇವೆ, ಪ್ರತಿಷ್ಠೆ ಮೆರೆದಿದ್ದೇವೆ. ಹಿಂದೆ ತುರ್ತು ಪರಿಸ್ಥಿತಿಯಂತಹ ಗಂಭೀರವಾದ ಏರಿಳಿತಗಳಿದ್ದಾಗ್ಯೂ, ನ್ಯಾಯಾಂಗವು, ಬಾರತದ ಪ್ರಜಾತಂತ್ರದ ಅಸ್ತವ್ಯಸ್ತವಾದ ಜೀವನದಲ್ಲಿ ವಿವೇಕವನ್ನು ಉಳಿಸುವ ಸಂಸ್ಥೆ ಎಂದು ಜನರು ತನ್ನಲ್ಲಿ ಇರಿಸಿದ ನಂಬಿಕೆಯನ್ನು ಹೇಗೋ ಉಳಿಸಿಕೊಂಡಿದೆ, ಅದರೆ ಇಂದು ನ್ಯಾಯಾಂಗವೂ ನಮ್ಮನ್ನು ನಿರಾಶೆಗೊಳಿಸಿದಂತೆ ಕಾಣುತ್ತದೆ.

ಇಂದು ಚರ್ಚಿಸಬೇಕಾದ ಹಲವು ಮುಖ್ಯ ವಿಚಾರಗಳಿವೆ. ಸಂಸತ್ತು ಈಗಾಗಲೇ ದುರ್ಬಲಗೊಂಡಿದ್ದು ಕಾಶ್ಮೀರವನ್ನು ಮೂರುಭಾಗವನ್ನಾಗಿ ವಿಂಗಡಿಸಿದ ವಿಚಾರವನ್ನು, ಪೌರತ್ವ ತಿದ್ದುಪಡಿ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ, ಈ ಕಾಯ್ದೆಯ ವಿರುದ್ಧ ನಡೆದ ಪ್ರತಿಭಟನೆಗಳನ್ನು ಅಪರಾಧೀಕರಣಗೊಳಿಸುವುದು, ದಮನ ಮಾಡುವುದು, ದೇಶದ್ರೋಹ, ಕಾನೂನುವಿರೋಧೀ ಚಟುವಟಿಕೆ ತಡೆ, ಮುಂತಾದ ಕಠೋರವಾದ ಕಾನೂನುಗಳ ದುರ್ಬಳಕೆಯನ್ನು, ಚುನಾವಣಾ ಬಾಂಡ್ ನೀಡಿಕೆ ಮುಂತಾದ ವಿಚಾರಗಳನ್ನು ಚರ್ಚಿಸಲು ಇದ್ದ ಎರಡನೆಯ ಪ್ರಮುಖ ಅವಕಾಶ ಸರ್ವೋಚ್ಚ ನ್ಯಾಯಾಲಯವಾಗಿತ್ತು. ವಿಷಾದಕರ ರೀತಿಯಲ್ಲಿ ಇವುಗಳಲ್ಲಿ ಬಹಳಷ್ಟನ್ನು ಸರ್ವೋಚ್ಚ ನ್ಯಾಯಾಲಯವು ನಿರ್ಲಕ್ಷಿಸಿದೆ, ಅಥವಾ ಪಕ್ಕಕ್ಕೆ ಸರಿಸಿದೆ, ಅಥವಾ ನಿಗೂಢವಾಗಿ ಬಹು ದೀರ್ಘ ಕಾಲ ಇತ್ಯರ್ಥ ಮಾಡದೆ ಉಳಿಸಿದೆ.

ಕಾಶ್ಮೀರದಲ್ಲಿ ಅಂತರ್ಜಾಲದ ಲಭ್ಯತೆಯ ವಿಷಯಕ್ಕೆ ಸಂಬಂಧಿಸಿದ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ತೀರ್ಪುಗಾರನಾಗಿ ತನ್ನ ಜವಾಬ್ದಾರಿಯನ್ನು ನಿರ್ವಹಿಸದೆ, ವಿಚಾರವನ್ನು ಕಾರ್ಯಾಂಗದಿಂದ ನಡೆಸಲ್ಪಡುವ ಒಂದು ಸಮಿತಿಗೆ ಬಿಟ್ಟುಕೊಟ್ಟಿತು. ಇಂತಹ ಸಮಿತಿಯು ಕಾರ್ಯಾಂಗದ ನಡೆಯ ಬಗ್ಗೆಯೇ ಪೂರ್ವಾಗ್ರಹವಿಲ್ಲದ ಅಭಿಪ್ರಾಯವನ್ನು ಹೇಗೆ ತಳೆಯಬಲ್ಲದು? ವಾಸ್ತವದಲ್ಲಿ ಇಂತಹ ವಿಚಾರಗಳು ಯಾವುದೇ ಸಂವಿಧಾನ ಪ್ರಸ್ತುತತೆಯುಳ್ಳ ವೇದಿಕೆಗಳಲ್ಲಿ ಚರ್ಚಿಸಲ್ಪಡುತ್ತಿಲ್ಲ.

ಈ ಸಮಯದಲ್ಲಿ ಮುಖ್ಯ ಪಾತ್ರ ವಹಿಸಬಹುದಾಗಿದ್ದ ಇತರೆ ಪ್ರಾಧಿಕಾರ ಮತ್ತು ಸಂಸ್ಥೆಗಳು ಕೂಡ ಮೌನವಾಗಿವೆ. ಲೋಕಪಾಲ ಬಗ್ಗೆ ನಾವು ಏನನ್ನೂ ಕೇಳುತ್ತಿಲ್ಲ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಸುಪ್ತವಾಗಿದ್ದು ಕೇವಲ ಕಾಗದದ ಮೇಲೆ ಮಾತ್ರವೇ ಅದು ಅಸ್ತಿತ್ವ ಹೊಂದಿದೆ. ಸಣ್ಣ ಅವಕಾಶ ಸಿಕ್ಕರೂ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ, ಭಾರತೀಯ ರಿಸರ್ವ್ ಬ್ಯಾಂಕ್, ಮತ್ತು ಚುನಾವಣಾ ಆಯೋಗಗಳು ಅನುಮಾನಾಸ್ಪದ ರೀತಿಯಲ್ಲಿ ರಾಜಿಯಾದಂತಿವೆ. ಮಾಹಿತಿ ಆಯೋಗವು ಬಹುತೇಕ ನಿಷ್ಕ್ರಿಯವಾಗಿದೆ. ಪಟ್ಟಿ ಉದ್ದವಾಗಿ ಬಹಳ ದುಗುಡ ಉಂಟುಮಾಡುವಂತಿದೆ.

ಇಂತಹ ಪರಿಸ್ಥಿತಿಯಲ್ಲಿ ನಾವು ಕಾರ್ಯಾಂಗವನ್ನು ಉತ್ತರದಾಯಿಯನ್ನಾಗಿ ಮಾಡಲು ಇರುವ ಮೂರನೆಯ ವಲಯವನ್ನು ಅವಲಂಬಿಸಬೇಕಿದೆ. ಆ ವಲಯವೆಂದರೆ ಶೈಕ್ಷಣಿಕ ವಲಯ, ಪತ್ರಿಕಾಮಾಧ್ಯಮ, ನಾಗರಿಕ ಹಕ್ಕುಗಳ ಸಂಘಟನೆಗಳು. ಇವುಗಳ ಪೈಕಿ ಎರಡನ್ನು ವ್ಯವಸ್ಥಿತವಾಗಿ ನಾಶ ಮಾಡಲಾಗುತ್ತಿದೆ ಅಥವಾ ಸುಮ್ಮನಿರಿಸಲಾಗುತ್ತಿದೆ. ವಿಶ್ವವಿದ್ಯಾಲಯಗಳು ನಿತ್ಯವೂ ದಾಳಿಗೊಳಗಾಗುತ್ತಿವೆ, ವಿದ್ಯಾರ್ಥಿಗಳು ದೊಂಬಿ ನಡೆಸಿದರೆಂದೋ ಅಥವಾ, ಅಧ್ಯಾಪಕರೇ ಪ್ರಚೋಸಿದರೆಂದೋ ಆರೋಪ ಮಾಡಲಾಗುತ್ತಿದೆ. ಭಾರತದಲ್ಲಿ ಪೂರ್ವಾಗ್ರಹವಿಲ್ಲದ ಮುಖ್ಯ ವಾಹಿನಿ ಪತ್ರಿಕಾಮಾಧ್ಯಮ ಬಹಳ ಹಿಂದೆಯೇ ಸಾವನ್ನಪ್ಪಿದೆ. ಕಾಶ್ಮೀರದಲ್ಲಿ ಜಾರಿಗೆ ತಂದಿರುವ ಮಾಧ್ಯಮ ನೀತಿಯಂತಹ ಕ್ರಮಗಳಿಂದಾಗಿ, ಸ್ವತಂತ್ರ ಮುಕ್ತ ಮಾಧ್ಯಮದ ಪರಿಕಲ್ಪನೆ ಕೂಡ ಘಾಸಿಗೊಂಡಿದೆ. ಹಲವಾರು ವಿಧಾನಗಳಿಂದ ನಾಗರಿಕ ಹಕ್ಕುಗಳ ಸಂಘಟನೆಗಳನ್ನೂ ಕೂಡ ಉಸಿರುಗಟ್ಟಿಸಲಾಗುತ್ತಿದೆ,

ಈ ಎಲ್ಲ ದಾಳಿಗಳು ನಿಸ್ಸಂಶಯವಾಗಿ ಕಾರ್ಯಾಂಗದಿಂದಲೇ ಪ್ರೇರಿತವಾದವು. ಈ ಸಂಸ್ಥೆಗಳ ಮೇಲಿನ ಧಾಳಿಯ ಹಿಂದಿನ ಉದ್ದೇಶ ತಮಗೆ ಯಾವುದೇ ರೀತಿಯ ವಿರೋಧವೂ ಬರಬಾರದೆಂಬುದು. ಆಳುವ ಪಕ್ಷದ ದೃಷ್ಟಿಗೆ ವಿರುದ್ಧವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಾಧಾರಣ ಪ್ರಭಾವವುಳ್ಳವರನ್ನೂ ಬಹಳ ಕೆಟ್ಟವಿಚಾರಣೆಗೆ ಒಳಪಡಿಸಲಾಗುತ್ತಿದೆ ಅಥವಾ ಶಿಕ್ಷಿಸಲಾಗುತ್ತಿದೆ. ಎಲ್ಲ ರೀತಿಯ ಭಿನ್ನಾಭಿಪ್ರಾಯಗಳನ್ನೂ ಸದ್ದಡಗಿಸಬೇಕೆಂಬುದೇ ತತ್ವ ಎಂಬಂತೆ ಕಾಣುತ್ತಿದೆ.

ಇಂದು ಕಾರ್ಯಾಂಗ ಮಾತ್ರ ಕ್ರಿಯಾಶೀಲವಾಗಿದ್ದು ಇತರ ಎಲ್ಲ ಸಂಸ್ಥೆಗಳನ್ನೂ ಮೌನವಾಗಿಸಿರುವುದರಿಂದ, ನಾವು ಒಂದು ರೀತಿಯ ಚುನಾಯಿತ ನಿರಂಕುಶಾಧಿಕಾರದ ಕಡೆಗೆ ಚಲಿಸುತ್ತಿದ್ದೇವೆ. ಬಹಳಷ್ಟು ಸಲ ಪ್ರಜಾಪ್ರಭುತ್ವಗಳು ನಾಶವಾಗುವುದು ಹೀಗೆಯೇ ಎಂದು ಹಲವಾರು ವಿದ್ವಾಂಸರು ನಮಗೆ ಜ್ಞಾಪಿಸಿದ್ದಾರೆ.

ಇದು ಭಾರತದಲ್ಲಿ ಮಾತ್ರವೇ ನಡೆಯುತ್ತಿಲ್ಲ. ಜಗತ್ತಿನ ಇತರ ಹಲವು ಭಾಗಗಳಲ್ಲೂ ಇದು ಹೀಗೆಯೇ ಇದೆ. ಸಾಂಕ್ರಾಮಿಕ ರೋಗವು ಪ್ರಾರಂಭವಾದಾಗ ಅದು ಭಿನ್ನಾಭಿಪ್ರಾಯಗಳನ್ನು ದಮನ ಮಾಡಿ ಅಧಿಕಾರ ಕ್ರೋಡೀಕರಣಕ್ಕೆ ಬಳಕೆಯಾಗಬಹುದೆಂದು ಹಲವರು ಭಯಪಟ್ಟಿದ್ದರು. ಈಗ ಭಾರತದಲ್ಲಿ ಆಗುತ್ತಿರುವುದು ಅದೇನೇ. ಕೇಂದ್ರ ಕಾರ್ಯಾಂಗವು ಬಲಶಾಲಿಯಾಗಿ ಎಲ್ಲ ಉತ್ತರದಾಯಿತ್ವ ಸಂಸ್ಥೆಗಳೂ ದುರ್ಬಲಗೊಂಡಿವೆ.

ಇಂತಹ ಪರಿಸ್ಥಿತಿಯಲ್ಲಿ ಈ ದೇಶದ ಜನರಿಗೆ ತಮ್ಮ ಧ್ವನಿಯನ್ನು ಎತ್ತದೇ ಬೇರೆ ಯಾವ ಆಯ್ಕೆಗಳೂ ಉಳಿದಿಲ್ಲ. ನಾವು ಮಾತನಾಡಬೇಕು. ಗಟ್ಟಿಯಾಗಿ ಮಾತನಾಡಬೇಕು. ನಾವೆಲ್ಲ ಹೆಮ್ಮೆ ಪಡುವ ಭಾರತದ ಉದಾರ ಪ್ರಜಾತಾಂತ್ರಿಕ ಸ್ಥಿತಿಯನ್ನು ಪುನರುಜ್ಜೀವನಗೊಳಿಸುವುದು ನಮ್ಮ ಗುರಿಯಾಗಬೇಕು. ಇದಾಗದಿದ್ದರೆ ಅತಿ ಉತ್ಸಾಹಿಯಾದ ನಿಯಂತ್ರಣವೇ ಇಲ್ಲದ ಕಾರ್ಯಾಂಗವು ನಮ್ಮನ್ನು ಧ್ವಂಸ ಮಾಡುವುದು. ಇದರಿಂದ ಕಲ್ಪನಾತೀತ ಪರಿಣಾಮಗಳೂ ಉಂಟಾಗುತ್ತವೆ. ಸ್ವಾತಂತ್ರ್ಯ ದೊರೆತು ಎಪ್ಪತ್ತನಾಲ್ಕು ವರ್ಷಗಳ ನಂತರ ನಾವು ನಮಗಾಗಿ, ನಮ್ಮ ಮುಂದಿನ ಸಂತತಿಗಾಗಿ ಮಾಡಬಹುದಾದ ಕನಿಷ್ಠ ಕೆಲಸ ಇದು.

**(ಕೃಪೆ: Scroll.in ಕನ್ನಡಕ್ಕೆ: ಎಂ. ರಾಜು)**

---

**೩ನೇ ಪುಟದಿಂದ)**

ರೇ ಹೇಳಿಕೆಯನ್ನು ಉಲ್ಲೇಖಿಸಿದೆ–" ಪ್ರಭುತ್ವದ ಅನುಮತಿಯಿಲ್ಲದೆ ಕೋಮುಗಲಭೆಗಳು ೨೪ ಗಂಟೆಗೂ ಮೀರಿ ಸಾಧ್ಯವಾಗದು. ೨೪ ಗಂಟೆಗಳನ್ನು ಮೀರಿತು ಎಂದರೆ ಪ್ರಭುತ್ವದ ಉದ್ದೇಶಗಳನ್ನು ನೀವು ಪ್ರಶ್ನಿಸಲೇಬೇಕು. ೧೯೮೭ರಲ್ಲಿ ಹಶೀಂಪುರದ ಮಾರಣಹೋಮ ನಡೆದಾಗ ಘಾಜಿಯಾಬಾದ್ ಜಿಲ್ಲೆಯ ಎಸ್‌ಪಿ ಆಗಿದ್ದವರು ರೇ. ಪೊಲೀಸರು ೪೨ ಮುಸ್ಲಿಮರನ್ನು ಕೊಂದಿದ್ದಕ್ಕಾಗಿ ಪಿಎಸಿ (ಪ್ರೊವಿನ್ಷಿಯಲ್ ಆರ್ಮ್ಡ್ ಕಾನ್‌ಸ್ಟಿಬ್ಯುಲರಿ), ಪೊಲೀಸ್ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು. ೨೦೧೮ರಲ್ಲಿ ದೆಹಲಿ ಹೈಕೋರ್ಟ್ ಈ ಪಿಎಸಿಯ ೧೬ ಜನರನ್ನು ಜೀವಾವಧಿ ಶಿಕ್ಷೆಗೆ ಗುರಿಮಾಡಿತ್ತು.

ಇಲ್ಲಿಯವರೆಗೆ ಪೊಲೀಸರು ಹಿಂಸೆಗೆ ಸಂಬಂಧಿಸಿದಂತೆ ೭೫೦ ಎಫ್‌ಐಆರ್‌ಗಳನ್ನು, ೨೫೦ ಆರೋಪ ಪಟ್ಟಿಗಳನ್ನು ದಾಖಲಿಸಿದ್ದಾರೆ. ಹಲವು ವಿದ್ಯಾರ್ಥಿಗಳು ಬಂಧಿಸಲ್ಪಟ್ಟಿದ್ದಾರೆ. ಹಲವಾರು ಶಿಕ್ಷಣ ತಜ್ಞರು ಹಾಗೂ ನಾಗರಿಕ ಹಕ್ಕುಗಳ ಕಾರ್ಯಕರ್ತರನ್ನು ಪ್ರಶ್ನಿಸಿ, ಆರೋಪ ಪಟ್ಟಿಯಲ್ಲಿ ಹೆಸರಿಸಲಾಗಿದೆ. ಆದರೇ ಈಔಊಗಳ್ಲಿ ದಂಗೆಗೆ ಬಹಿರಂಗ ಪ್ರಚೋದನೆ ನೀಡಿದವರಾರ ಹೆಸರುಗಳೂ ಇಲ್ಲ! ಕೇಂದ್ರ ಸರ್ಕಾರವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅವಮಾನಿಸಲು ಫೆಬ್ರವರಿಯ ಹಿಂಸಾಚಾರವನ್ನು ಕಾರ್ಯಗತಗೊಳಿಸಲಾಗಿದೆ ಎಂದು ಪೊಲೀಸರು ಹೇಳುತ್ತಿದ್ದಾರೆ!!

**(ಕೃಪೆ: ಜನತಾ, ಆಗಸ್ಟ್ ೨೩, ೨೦೨೦**
**ಕನ್ನಡಕ್ಕೆ: ಬಿ.ಎಸ್. ದಿವಾಕರ)**

# 'ಗಾಂಧಿ ಕಥನ' : ಕತೆ ಹೇಳಿದ ಅನುಭವ

-ವಾಣಿ ಪೆರಿಯೋಡಿ




'ಗಾಂಧಿ ಕಥನ' ಪುಸ್ತಕ ಗಾಂಧಿ ಜೀವನ ಕುರಿತ ಒಂದು ಸಮಗ್ರ ಚಿತ್ರ ನೀಡುವ ಪ್ರಯತ್ನ ಮಾಡುತ್ತಾ ಕರ್ನಾಟಕದ ಎಲ್ಲ ತಲೆಮಾರುಗಳ ಜನರ ಮನಸ್ಸಿನಲ್ಲಿ ಅವರ ಬಗ್ಗೆ ಹೊಸ ಕುತೂಹಲ, ಆಸಕ್ತಿಗಳನ್ನು ಹುಟ್ಟಿಸಿರುವಂತೆ ತೋರುತ್ತದೆ. ಈ ಮಾತಿಗೆ ಸಾಕ್ಷಿಯಂತಿದೆ ಈ ಪುಸ್ತಕವನ್ನು ಓದಿದ, ನಂತರ ಉಂಟಾದ ಉತ್ಸಾಹದಿಂದ ಆ ಪುಸ್ತಕದ ಅಧ್ಯಾಯಗಳನ್ನು ಕಂತುಕಂತಾಗಿ ಸಾರಾಂಶೀಕರಿಸಿ ಯುವ ಮತ್ತು ಎಳೆಯ ತಲೆಮಾರುಗಳಿಗೆ ಹೇಳಲು ಮಾಡಿದ ಒಂದು ಪ್ರಯತ್ನ. ಇಂಥ ಒಂದು ಪ್ರಯತ್ನ ಮಾಡಿದ್ದಲ್ಲದೆ ಅದನ್ನು ರಾಜ್ಯಾದ್ಯಂತ ಆಸಕ್ತರೊಂದಿಗೆ ಹಂಚಿಕೊಂಡ ಓರ್ವ ಸಾಮಾಜಿಕ ಕಾರ್ಯಕರ್ತೆಯೂ ಆಗಿರುವ ಗೃಹಿಣಿಯೊಬ್ಬರ ಅನುಭವದ ನಿರೂಪಣೆ ಇಲ್ಲಿದೆ. ಇದು ನಮ್ಮ ಜನಮನದಲ್ಲಿ ಗಾಂಧಿ ನೆನಪು ಬಹಳ ಜನ ಭಾವಿಸಿದಂತೆ ಇನ್ನೂ ಆರಿ ಹೋಗಿಲ್ಲ ಮಾತ್ರವಲ್ಲ, ಭಾರತದ ಆಧುನಿಕ ಚರಿತ್ರೆಯಲ್ಲಿ ಅವರನ್ನು ಸಂದೇಹಾಸ್ಪದರನ್ನಾಗಿ ಮಾಡುವ ವ್ಯವಸ್ಥಿತ ಕಾರ್ಯಕ್ರಮದ ಉದ್ದೇಶಗಳನ್ನೂ ಮೀರಿ ಅವರನ್ನು ಸಮಗ್ರವಾಗಿ ಅರಿತು ಹಲವು ಸಂಕಟಗಳ ವರ್ತಮಾನದ ಬದುಕಿಗೆ ಹೊಸ ಉಸಿರು ತುಂಬುವ ಆಶಯಗಳ ಚಿಗುರುಗಳೂ ಇಂದು ಕಾಣತೊಡಗಿವೆ ಎಂಬುದನ್ನು ಸೂಚಿಸುತ್ತಿರುವಂತಿದೆ -ಸಂ.

ಡಿ.ಎಸ್.ನಾಗಭೂಷಣ ಅವರು ಬರೆದ 'ಗಾಂಧಿ ಕಥನ', ಪುಸ್ತಕವನ್ನು ಗೆಳತಿ ರೇಖಾಂಬ ಮನೆಯಲ್ಲಿ ಎತ್ತಿಕೊಂಡಾಗ ಅಷ್ಟು ದಪ್ಪ ಪುಸ್ತಕ, ಎಂದು ಓದುವೆನೋ ಅಂದುಕೊಂಡಿದ್ದೆ. ಗಾಂಧೀಜಿ ಬಹಳ ಎಳವೆಯಿಂದಲೇ ನನ್ನ ಮೇಲೆ ಪ್ರಭಾವ ಬೀರಿದವರು, ನಿರಂತರ ಪ್ರೇರಣೆಯೂ ಆದವರು. ಹಾಗಂತ ಅವರ ಬಗ್ಗೆ ಯಾವುದೇ ಪಾಂಡಿತ್ಯ ಇಲ್ಲ, ಇದೇ ಹೆಚ್ಚಿನ ಅರಿವಿಗೆ ಅವಕಾಶ ಎಂದುಕೊಂಡು ಓದುತ್ತಾ ಹೋಗುವಾಗ ಲೇಖಕರು ಗಾಂಧಿ ಬದುಕಿನ ಒಂದು ಸಮಗ್ರ ಚಿತ್ರಣವನ್ನು ಯಾವುದೇ ವೈಭವೀಕರಣ ಇಲ್ಲದೆ ಎದುರಿಗೆ ಇಟ್ಟ ರೀತಿ ಬಹಳ ಇಷ್ಟವಾಯಿತು. ಕನ್ನಡದಲ್ಲಿ ಇಂತಹ ಒಂದು ಪುಸ್ತಕದ ಅಗತ್ಯವೂ ಇತ್ತು ಅನಿಸುತ್ತದೆ. ಖುಶಿಯ ವಿಚಾರ ಎಂದರೆ ನಾನು ಓದಿದ್ದು ಮಾತ್ರವಲ್ಲ, ಮತ್ತೆ ಒಂದಷ್ಟು ಮಂದಿಗೆ ಗಾಂಧಿ ಕತೆ ಹೇಳಿದೆ. ಇಷ್ಟನ್ನೂ ಸಾಧ್ಯ ಮಾಡಿಸಿದ ಈ ಪುಸ್ತಕದ ಲೇಖಕರಿಗೆ ಮನಸಾರೆ ಶರಣು ಹೇಳುತ್ತಾ ಕತೆ ಹೇಳಿದ ಅನುಭವ ಹಂಚಿಕೊಳ್ಳುತ್ತೇನೆ. ಸ್ವಲ್ಪ ಭಾವಾವೇಶ ಹೆಚ್ಚಾದ ಹಾಗೆ ಕಾಣಲೂಬಹುದು, ಆದರೆ ಇದು ನಡೆದಿದ್ದು ಹೀಗೇನೇ.. ಅದಕ್ಕಾಗಿ ಹೀಗೇನೇ ಹೇಳಿಕೊಳ್ಳಲು ಇಷ್ಟ ಪಡುತ್ತೇನೆ.

ಕೊರೋನಾ ಲಾಕ್ ಡೌನ್ ಶುರುವಾಗಿತ್ತು... ಸಿಕ್ಕ ಸಿಕ್ಕ ಸಮಯದಲ್ಲಿ ಓದಿದ್ದೇ ಓದಿದ್ದು. ಮಾರ್ಚ್ ಕೊನೆಯಲ್ಲಿ ಓದಿ ಮುಗಿಸುತ್ತಿದ್ದಂತೆಯೇ ಮಗಳು ಇಂದು, 'ನೀನು ನಮಗೆ ದಿನಾ ಗಾಂಧಿ ಕಥನದ ಕತೆ ಹೇಳು', ಎಂದಳು. 'ನೀನು ಹೇಳುವಾಗ ರೆಕಾರ್ಡ್ ಮಾಡಿಕೊಳ್ಳೋಣ, ನಮ್ಮ ಹತ್ತಿರದವರಿಗೂ ಕಳುಹಿಸಬಹುದು', ಎಂದು ಸೇರಿಸಿದಳು. ಕತೆ ಹೇಳುವುದು ನನಗೆ ಬಹಳ ಖುಶಿ ಕೊಡುವ ಸಂಗತಿಯೇ ಹೌದು; ಆದರೆ ರೆಕಾರ್ಡ್ ಮಾಡುವುದು ಸ್ವಲ್ಪ ಹಿಂಜರಿಕೆ ಅನಿಸಿತು. ಹಾಗೆಯೇ ಒಂದೆರಡು ದಿನ ತಳ್ಳಿದೆ. ಹೋದರೆ ಹೋಗಲಿ ಅಂತ ಕೂಡಾ ಅಂದುಕೊಂಡೆ... ಆದರೆ ಇಂದು ಬೆನ್ನು ಬಿಡಲಿಲ್ಲ.

ಅಂತೂ ಎಪ್ರಿಲ್ ೩, ೨೦೨೦ರಂದು ಶುರುವಾದ ಗಾಂಧಿ ಕಥನ, ನಿರಂತರವಾಗಿ, ದಿನ ಬಿಡದೆ, ಮೇ ೩೧ರವರೆಗೆ ಸಾಗಿತು. ೫೮ ಕಂತುಗಳಲ್ಲಿ ಕತೆ ಹೇಳಿದೆ. ನನ್ನ ನೇರ ಕೇಳುಗರು – ಇಂದು, ತೃಪ್ತಿ, ಸವಿತಾ, ಚೈತ್ರಾ, ದೀಪ್ತಿ – ಯುವ ಬಳಗ. ನಮ್ಮ ದಿನಚರಿ ಹೀಗಿತ್ತು.. ಬೆಳಗಿನ ಅಗತ್ಯದ ಕೆಲಸಗಳನ್ನು ಪೂರೈಸಿ ಸುಮಾರು ೯ ಗಂಟೆಯ ಹೊತ್ತಿಗೆ, ಜೊತೆ ಸೇರುವುದು, ನಾನು ೧೫ ರಿಂದ ೨೦ ನಿಮಿಷಗಳ ಕಾಲ, ರೆಕಾರ್ಡ್ ಮಾಡಲು ಸೂಕ್ತವಾಗುವಂತೆ ಕಥೆ ಹೇಳುವುದು, ಕತೆ ಹೇಳಿದ ಬಳಿಕ ಕಥನವನ್ನು ಸವಿಯುವುದು, ಭಾವನೆಗಳನ್ನು ಅನುಭವಿಸುವುದು, ಅರ್ಥವಾಗಿಲ್ಲದೇ ಹೋಗಿದ್ದರೆ ಸ್ವಲ್ಪ ಮಾತಾಡಿಕೊಳ್ಳುವುದು, ವಿಚಾರಗಳನ್ನು ಒಳಗಿಳಿಸಿಕೊಳ್ಳುವುದು.. ಹೀಗೆ ನಡೆದಿತ್ತು. ಈ ಕಥನದ ನಂತರದ ಮಾತುಕತೆ ನಮ್ಮೆಲ್ಲರಿಗೂ ಬಹಳ ಪ್ರಿಯವಾದದ್ದು. ಗಾಂಧೀಜಿಯವರ ಬಗ್ಗೆ ಒಮ್ಮೊಮ್ಮೆ ಅಚ್ಚರಿ ಪಟ್ಟರೆ, ಒಮ್ಮೊಮ್ಮೆ ಅಯ್ಯೋ ಅತಿರೇಕವೇ ಅಂತ ಸಿಟ್ಟು ಬಂದದ್ದೂ ಇದೆ, ಮತ್ತೊಮ್ಮೆ ಬದುಕನ್ನು ತೆರೆದಿಟ್ಟ ಪರಿಗೆ ಮುದ್ದು ಹಾಗೂ ಗೌರವ ಜೊತೆಜೊತೆಗೇ ಉಕ್ಕಿ ಬಂದದ್ದೂ ಇದೆ. ಏನೇ ಇರಲಿ ಒಟ್ಟಾರೆಯಾಗಿ ಅವರ ಮೇಲೆ ಅಗಾಧ ಪ್ರೀತಿ, ಗೌರವ, ಆಪ್ತತೆ ನಮ್ಮೊಳಗೆ ಆವರಿಸಿಕೊಂಡಿದ್ದು ನಿಜ.

ದಿನಚರಿಯ ಎರಡನೆಯ ಭಾಗ, ಮರುದಿನದ ಕತೆ ಹೇಳಲು ತಯಾರಿ ನಡೆಸುವುದು. ತಯಾರಿ ಮಾತ್ರ ಅದೆಷ್ಟು ಶ್ರದ್ಧೆಯಿಂದ ಮಾಡುತ್ತಿದ್ದೆ ಅಂದರೆ, ಒಂದು ತರಹ ತಪಸ್ಸಿನ ಹಾಗೆ ಆಗಿ ಹೋಗಿತ್ತು. ಪುಸ್ತಕದಿಂದ ನೇರವಾಗಿ ಕತೆ ಹೇಳದೆ, ನನ್ನದೆ ಒಂದು ಟಿಪ್ಪಣಿ ಮಾಡಿಕೊಳ್ಳುತ್ತಿದ್ದೆ. ಕತೆ ಹೇಳುವಾಗ ಪುಸ್ತಕದ ಭಾಷೆಯನ್ನೇ ಹೆಚ್ಚಾಗಿ ಬಳಸಿದ್ದೇನೆ. ನಡುನಡುವೆ ಒಂದಿಷ್ಟು ವಿವರಣೆ, ಭಾವನೆ ತುಂಬುತ್ತಿದ್ದೆ. ಒಂದಷ್ಟು ಬಾರಿ, ಪುಸ್ತಕದಿಂದ ನೇರ ಓದಿ ಹೇಳಿರುವುದೂ ಇದೆ. ತಯಾರಿಗೆ ಒಂದೆರಡು ತಾಸು ತೆಗೆದುಕೊಳ್ಳುತ್ತಿದ್ದೆ.

ದಿನಚರಿಯ ಮತ್ತೊಂದು ಭಾಗ, ರೆಕಾರ್ಡ್ ಮಾಡಿರುವುದನ್ನು ಇಂದು ಮತ್ತು ನಾನು ಇತರರಿಗೆ ಕಳುಹಿಸುವುದು. ಅವಳು ಒಂದಷ್ಟು ಜನರಿಗೆ, ನಾನು ನನ್ನ ಆಪ್ತರಿಗೆ ಒಂದಷ್ಟು ಜನರಿಗೆ ಕಳುಹಿಸುವುದು. ಆಮೇಲೆ ರೆಕಾರ್ಡ್ ಕೇಳಿಸಿಕೊಂಡ ಆಪ್ತರ



ಪ್ರತಿಕ್ರಿಯೆಗಳನ್ನು ಆನಂದಿಸುವುದು. ಈ ನಡುವೆ ಎಪ್ರಿಲ್ ತಿಂಗಳಲ್ಲಿ ನನ್ನ ಹುಟ್ಟು ಹಬ್ಬದ ಭಾಗವಾಗಿಯೂ ಒಂದು ಅಚ್ಚರಿ ಕಾದಿತ್ತು. ಮಧ್ಯೆ ರಾತ್ರಿಯಲ್ಲಿ ತೃಪ್ತಿ ಗಾಂಧಿ ಉಡುಗೆ ತೊಟ್ಟು ನನ್ನ ಎದುರು ಪ್ರತ್ಯಕ್ಷಳಾಗಿ, 'ನನ್ನ ಕಥನವನ್ನು ಹೇಳುತ್ತಿರುವುದು ಸಂತೋಷ, ಚಿಕ್ಕವಳಾಗಿದ್ದಾಗಲೇ ನನ್ನ ಪಾಠ ಓದಿ ಸರಳತೆಯನ್ನು ಪಾಲಿಸಲು ಹೊರಟವಳು ನೀನು, ನನ್ನ ಚಿಂತನೆಗಳನ್ನು ಪಾಲಿಸುವ ಪ್ರಯತ್ನ ಮಾಡುತ್ತೀಯ, ಕೆಲವೊಂದು ಮಾಡಲಾಗುತ್ತಿಲ್ಲ ಅನ್ನುವುದೂ ಗೊತ್ತು' ಎಂದು ಪುಟ್ಟ ಭಾಷಣ ಮಾಡಿ ಹರಸಿದಳು. ಒಂದು ರೀತಿಯಲ್ಲಿ ಮಜವೂ ಆಗಿತ್ತು. ಗಾಂಧೀಜಿ ನಮ್ಮನ್ನು ಆವರಿಸಿಕೊಂಡ ರೀತಿಗೆ ಸಾಕ್ಷಿಯೂ ಆಗಿತ್ತು.

ಗಾಂಧಿ ಬದುಕಿನ ಆಗುಹೋಗುಗಳನ್ನು ಹತ್ತಿರದಿಂದ ನೋಡುತ್ತಾ ಅನುಭವಿಸುವ ಹಾಗೆ ಆಗಿತ್ತು. ದಕ್ಷಿಣ ಆಫ್ರಿಕಾದ ಸತ್ಯಾಗ್ರಹ ಯಶಸ್ವಿ ಆದಾಗ ಸಂಭ್ರಮದಿಂದ ಚಪ್ಪಾಳೆ ತಟ್ಟಿದೆವು. 'ನಾಳೆ ಗಾಂಧೀಜಿ ಭಾರತಕ್ಕೆ ಬರುತ್ತಾರೆ' ಮರುದಿನದ ಕಥನದ ಬಗ್ಗೆ ಹೇಳಿಕೊಳ್ಳುತ್ತಾ, ಭಾರತಕ್ಕೆ ಅಲ್ಲ ನಮ್ಮ ಮನೆಗೇ ಬರುತ್ತಾರೇನೋ ಎನ್ನುವ ಹಾಗೆ ಸಂಭ್ರಮ ಇರುತ್ತಿತ್ತು. ಗಾಂಧಿಯವರ ಪ್ರೇಮ ಪ್ರಕರಣ ಬಗ್ಗೆ ಮತ್ತೆ ಅಷ್ಟೇ ಕುತೂಹಲ. ಸರಳಾದೇವಿ ಅವರ ಭಾವಚಿತ್ರ ಹುಡುಕಿ ನೋಡುವುದೂ ಆಯಿತು. ಗಾಂಧಿ ತಮ್ಮ ಮಕ್ಕಳ ಮದುವೆ ಸುತ್ತುಮುತ್ತು ತೆಗೆದುಕೊಳ್ಳುವ ನಿರ್ಧಾರಗಳು, ಬ್ರಹ್ಮಚರ್ಯೆಯ ಒತ್ತಾಯ, ಪ್ರೇಮ ಪರೀಕ್ಷೆ.. ಇತ್ಯಾದಿಗಳು ತಿಳಿದಾಗ 'ಅಯ್ಯೋ ಗಾಂಧಿ ಯಾಕೆ ಹೀಗೆ ಮಾಡುವುದು' ಅಂತ ಚಡಪಡಿಸಿದೆವು. ಅವರ ಬ್ರಹ್ಮಚರ್ಯೆ ಪರಿಶೀಲಿಸುವ ಪ್ರಯೋಗವಂತೂ ಬಹಳ ಚಿಂತನೆಗೆ ತಳ್ಳಿತ್ತು. ಅಷ್ಟು ಚಿಕ್ಕ ವಯಸ್ಸಿನ ಹೆಣ್ಣುಮಕ್ಕಳು ಅದರಲ್ಲಿ ಭಾಗಿಯಾಗಿದ್ದು ಅತ್ಯಂತ ಅಚ್ಚರಿ ಅನಿಸಿತ್ತು. ಅಷ್ಟೇ ಅಲ್ಲ, "ಒಂದು ವೇಳೆ ಗಾಂಧಿ ಅವರ ಬ್ರಹ್ಮಚರ್ಯೆಯ ಪ್ರಯೋಗಕ್ಕೆ ನಮ್ಮನ್ನೇ ಕೇಳಿದ್ದರೆ ನಾವು ಹೇಗೆ ಪ್ರತಿಕ್ರಿಯಿಸುತ್ತಿದ್ದೆವು" ಅನ್ನುವ ಕಲ್ಪನೆಯನ್ನೂ ಹರಿಯಗೊಟ್ಟು ಅದರ ಸುತ್ತುಮುತ್ತು ಮಾತುಕತೆಯೂ ನಡೆಯಿತು. ಗಾಂಧೀಜಿಯವರ ಎಲ್ಲಾ ಅತಿರೇಕ ಅನಿಸಬಹುದಾದಂತಹ ವರ್ತನೆಗಳನ್ನು ಕಸ್ತೂರ್ ಬಾ ಅವರು ನಿಭಾಯಿಸಿಕೊಂಡು ಹೋಗುತ್ತಾ, ಇನ್ನೊಂದೇ ಎತ್ತರಕ್ಕೆ ಬೆಳೆದ ಬಗೆಯನ್ನು ವಿಸ್ಮಯದಿಂದ ನೋಡಿದೆವು. ಕಸ್ತೂರ್ ಬಾ ನಿಧನರಾಗುವ ಕತೆ ಕೇಳುತ್ತಾ ಹೃದಯ ಹಿಂಡಿದಂತಾಗಿ ಎಲ್ಲರ ಕಣ್ಣು ಮಂಜಾಯಿತು. ಆಮೇಲೆ ಅಂತೂ, ಭಾರತಕ್ಕೆ ಸ್ವಾತಂತ್ರ್ಯ ಬಂದ ಸಂಭ್ರಮವನ್ನು ಅನುಭವಿಸಲಿಕ್ಕೂ ಆಗಲಿಲ್ಲ. ನಾವು ಕೂಡಾ ಗಾಂಧಿ ಜೊತೆಗೆ ನೌಖಾಲಿಯಲ್ಲಿ ಇದ್ದೆವು, ದ್ವೇಷದ ಹೊಳೆ ಹರಿಯುವುದ ನೋಡಿ ಸಂಕಟ ಪಟ್ಟೆವು. ಕೊನೆಯ ದಿನ, ನನ್ನ ಟಿಪ್ಪಣಿ ಮಾಡಿಕೊಳ್ಳುತ್ತಿದ್ದೆ, ೧೯೪೮ ಜನವರಿ, ಹೊಸ ವರುಷ ಬಂತು – ಅಂತ ಓದುವಾಗಲೇ

ಎದೆ ಧಸಕ್ಕೆಂದಿತ್ತು. ಕೊನೆಯ ಭಾಗದ ಮಂಡನೆಯ ದಿನ ಏನೋ ಒಂದು ತರಹದ ಚಡಪಡಿಕೆ ಆತಂಕದ ಅನುಭವ.. ಗಾಂಧಿ ಇಂದು ಸಾಯುತ್ತಾರೆ ಅಂತ ಗೊತ್ತು, ಹೇಗೆ ಸಾಯುತ್ತಾರೆ ಎಂಬುದೂ ಗೊತ್ತು. ಆದರೂ ಇದೀಗ ನಮ್ಮ ಕಣ್ಣೆದುರೇ ಸಾಯುತ್ತಾರೇನೋ ಅನ್ನುವ ಹಾಗೆ ನಮ್ಮನ್ನು ಒಡ್ಡಿಕೊಂಡಿದ್ದೆವು. ಗುಂಡು ಗಾಂಧಿ ಎದೆಯೊಳಗೆ ನಾಟುತ್ತಿದ್ದಂತೆಯೇ ಕತೆ ಕೇಳಿಸಿಕೊಳ್ಳುತ್ತಿದ್ದ ನನ್ನ ಪುಟ್ಟ ಸಂಗಾತಿಗಳ ಕಣ್ಣಿಂದ ನೀರು ಹರಿದಿತ್ತು.

ಹೀಗೆ ಕತೆ ಹೇಳುವ ಕೇಳುವ ನಮ್ಮ ಚಿಕ್ಕ ತಂಡ ಇವನ್ನೆಲ್ಲಾ ಅನುಭವಿಸುತ್ತಿದ್ದ ಹೊತ್ತಿನಲ್ಲೇ, ಕಥನವನ್ನು ದೂರದಿಂದ ಕೇಳಿಸಿಕೊಳ್ಳುತ್ತಿದ್ದವರಿಂದ ಗಾಢವಾದ, ಆಪ್ತವಾದ ಪ್ರತಿಕ್ರಿಯೆಗಳೂ ನಿರಂತರವಾಗಿ ಬರುತ್ತಿದ್ದವು. ಮತ್ತು ಅವು ದೂರವನ್ನು ಮರೆಸುವಂತೆ ಇತ್ತು. ನನ್ನ ಕುಟುಂಬದವರು ಹಾಗೂ ಸ್ನೇಹಿತರು, ಸೇರಿದಂತೆ ಸುಮಾರು ಸುಮಾರು ೧೫ ರಿಂದ ೨೦ ಮಂದಿ ಕಥನದ ರೆಕಾರ್ಡ್‌ನ್ನು ಕೇಳಿಸಿಕೊಂಡಿದ್ದಾರೆ. ಕೆಲವರು ತಕ್ಷಣದಲ್ಲೇ ಪ್ರತಿಯೊಂದು ಭಾಗಕ್ಕೂ ಪ್ರತಿಕ್ರಿಯೆ ನೀಡಿದರೆ ಮತ್ತೆ ಕೆಲವರು ಆಗೊಮ್ಮೆ ಈಗೊಮ್ಮೆ ಪ್ರತಿಕ್ರಿಯೆ ನೀಡಿದ್ದಾರೆ. ಪ್ರತಿಕ್ರಿಯೆಗಳು ಬೇರೆ ಬೇರೆ ರೀತಿಯಲ್ಲಿ ಇತ್ತು.. ಕೆಲವು ಹೀಗೆ ಇವೆ..

• ಎಲ್ಲವನ್ನೂ ಕೇಳಿಸಿಕೊಂಡ ಮೇಲೆ ಗಾಂಧೀಜಿಯವರ ಬಗ್ಗೆ ನನಗೆ ಗೊತ್ತಿದ್ದದ್ದು ಎಷ್ಟು ಕಡಿಮೆ ಅಂತ ಗೊತ್ತಾಯಿತು. ಅವರ ಎಷ್ಟೊಂದು ವಿಚಾರಗಳು, ಆದರ್ಶಗಳು, ಸತ್ಯ, ನ್ಯಾಯ ಪರಿಪಾಲನೆ, ಮಾನವತಾವಾದಿ ಗುಣಗಳು ಇವನ್ನೆಲ್ಲಾ ನೋಡುವಾಗ ಹೀಗೊಬ್ಬ ಮಹಾನ್ ಚೇತನ ನಮ್ಮ ಕಾಲದಲ್ಲಿ ಆಗಿ ಹೋಗಿದ್ದರಲ್ಲ ಅಂತ ದಿಗ್ಭ್ರಮೆಯಾಗುತ್ತದೆ. ಮುಂದೆ ಇಂತಹವರೊಬ್ಬರು ಹುಟ್ಟಿ ಬರಲು ಸಾಧ್ಯವೇ ಎಂಬ ಪ್ರಶ್ನೆಯು ಮೂಡುತ್ತದೆ. ಕೆಲವೊಂದು ವಿಚಾರಗಳು ತಮ್ಮನ್ನು ತಾವು ಪರೀಕ್ಷೆಗೆ ಒಡ್ಡಿಕೊಳ್ಳುವ ಕೆಲವು ಘಟನೆಗಳು ಅತಿರೇಕ ಅನಿಸಿದರೂ ಅವನ್ನು ಗಾಂಧೀಜಿಯೊಬ್ಬರಿಂದಲೆ ನಡೆಸಿಕೊಂಡು ಬರಲು ಸಾಧ್ಯ ಅಂತ ಅನಿಸುತ್ತದೆ. ತೆರೆದ ಪುಸ್ತಕದಂತೆ ಇರುವ ಅವರ ಕಥೆ ಖಂಡಿತವಾಗಿಯೇ ಜನ ಸಾಮಾನ್ಯರ ಚಿಂತನೆಗೆ ನಿಲುಕದ ವಿಚಾರ. ಗಾಂಧೀಜಿಯ ಒಂದಷ್ಟು ಆದರ್ಶವನ್ನು ಮೈಗೂಡಿಸುವ ಆಶಯದೊಂದಿಗೆ ಅವರಿಗೆ ನನ್ನ ಸಾಷ್ಟಾಂಗ ನಮಸ್ಕಾರ. – ವೀಣಾ ಬೆಂಗಳೂರು

• ಗಾಂಧಿಯ ಬಗ್ಗೆ ನನಗೇನೂ ಗೊತ್ತಿರಲಿಲ್ಲ. ಅಲ್ಲಲ್ಲಿ ತುಂಡು ಓದು ಅಷ್ಟೆ. ಅದು ಬಿಟ್ಟರೆ ಈ ವಿವಿಧ ವಾದಿಗಳ ಆರೋಪಗಳು, ಪ್ರತ್ಯಾರೋಪಗಳು ಅಷ್ಟೇ. ಗಾಂಧಿ ಕಥನ ತರಿಸಿಕೊಂಡೆ. ಆದರೆ ಕೆಲಸದ ಒತ್ತಡದಲ್ಲಿ ಓದಲಾಗಲಿಲ್ಲ. ನೀವು ಪ್ರಸ್ತುತ ಪಡಿಸುತ್ತಿರುವ ರೀತಿ ಬಹಳವೇ ಆಪ್ತವಾಗಿದೆ. ಇನ್ನು ಮುಂದೆ ಗಾಂಧೀ ಕುರಿತು ಯಾರ ಬರಹವನ್ನೂ ಓದಿದರೂ ನನಗೆ ಸುಲಭವಾಗಿ ದಕ್ಕುತ್ತದೆ ಎಂಬ ವಿಶ್ವಾಸ ಇದೆ. – ಪ್ರತಿಭಾ ಬೆಂಗಳೂರು

• ಗಾಂಧೀಜಿಯವರ ಬಗ್ಗೆ ಸ್ಕೂಲಲ್ಲಿ, ಭಾಷಣಗಳಲ್ಲಿ ಮಾತ್ರ ಕೇಳಿದ್ದೆ. ಅವರ ಬಗ್ಗೆ ತಪ್ಪು ಅಭಿಪ್ರಾಯಗಳು ಇತ್ತು; ಹರಿಲಾಲ್ ಬಗ್ಗೆ ಓದಿದ್ದೆ, ಆಗಿಂದ ಗಾಂಧೀಜಿ ಅಂದರೆ ಯಾಕೋ ಮನಸ್ಸಿಗೆ ಬೇಡ ಅನಿಸುತ್ತಿತ್ತು, ಅದಕ್ಕೆ ಮತ್ತೆ ಮತ್ತೆ ನಿಧಾನಕ್ಕೆ ಅರ್ಥ ಮಾಡಿಕೊಳ್ಳುತ್ತಾ ಕೇಳಿಸಿಕೊಳ್ಳುತ್ತಾ ಇದ್ದೇನೆ. ಈ ಕಥೆಯನ್ನು ನಾನೇ ಓದಿದ್ದರೆ ಇಷ್ಟೊಂದು ಅರ್ಥ ಆಗುತ್ತಿರಲಿಲ್ಲ. ನೀವು ನಡುನಡುವೆ ಸಂದರ್ಭದ ವಿವರಣೆ ಕೊಡುತ್ತಾ ತುಂಬಾ ಅರ್ಥ ಆಗುವ ಹಾಗೆ ತಿಳಿಸುತ್ತಿದ್ದಿರಿ. ಮತ್ತೆ ನಮಗೆ ಹೆಣ್ಣು ಮಕ್ಕಳಿಗೆ, ಅಡುಗೆ ಮಾಡಿಕೊಂಡೂ, ಮತ್ತೇನೋ ಕೆಲಸ ಮಾಡಿಕೊಂಡೂ ಕೇಳಿಸಿಕೊಳ್ಳಲು ಅನುಕೂಲವಾಯಿತು. – ದಾಕ್ಷಾಯಿಣಿ, ಧಾರವಾಡ

• ಗಾಂಧೀ ಕಥನ ಬಹಳಷ್ಟು ಅರಿವನ್ನು ಮೂಡಿಸುವ ಕಥೆಯಾಗಿದೆ. ನನಗೆ ಒಂದಷ್ಟು ವಿಷಯ ಮನದಲ್ಲಿ ಕಾಡುತ್ತಿತ್ತು. ಅದೇನೆಂದರೆ ಈ ಜಗತ್ತಿನಲ್ಲಿ ಮನುಷ್ಯರ ಮಧ್ಯೆ ಕೋಮುಗಲಭೆ ಯಾಕೆಂದು? ಅದು ಎಲ್ಲಿಂದ ಬಂತು? ಇಂತಹ ವಿಷಯಗಳಿಗೆ ಉತ್ತರಗಳನ್ನು ಹುಡುಕಲು ಮನಸ್ಸು ಹಂಬಲಿಸುತ್ತಿತ್ತು. ಈ ಕಥೆಯಿಂದ ನಾನು ತಿಳಿದುಕೊಂಡೆ ದೇಶ ಪ್ರೇಮ ಅಂದರೆ ಏನು ಅಂತ. ನಾನು ಮತ್ತು ನನ್ನ ತಾಯಿ ಜೊತೆಯಲ್ಲಿ ಗಾಂಧೀ ಕಥನ ಕೇಳಿಸಿಕೊಂಡಿದ್ದೇವೆ. – ಅಜ್‌ಮುನ್ನೀಸಾ, ಕೊಪ್ಪಳ

• ಭಾರತ ಬಿಟ್ಟು ತೊಲಗಿ ಆಂದೋಲನದಲ್ಲಿ ಎಲ್ಲರೂ ಎಲ್ಲಾ ಭಿನ್ನಾಭಿಪ್ರಾಯಗಳನ್ನು ಮರೆತು ಒಮ್ಮತದಿಂದ ತೊಡಗಿಸಿಕೊಂಡಿದ್ದಾರೆ ಅಂದುಕೊಂಡಿದ್ದೆ. ಆದರೆ ಇಲ್ಲಿ ತುಂಬಾ ವಿರುದ್ಧ ಅಭಿಪ್ರಾಯಗಳು ಇದ್ದವು. ಗಾಂಧೀಜಿಯವರ ಜೀವನ ಸಂಘರ್ಷಗಳಿಂದಲೇ ತುಂಬಿಹೋಗಿತ್ತು. ಅದೇ ಅವರನ್ನು ಹೆಚ್ಚು ಮಾನವೀಯ ಮಾಡಿರಬೇಕು. – ಇನಿ ಪೆರಿಯೋಡಿ, ಬೆಂಗಳೂರು

• ಗಾಂಧೀಜಿ ಹಾಗೂ ಗೋಪಾಲಕೃಷ್ಣ ಗೋಖಲೆ ಮಧ್ಯೆ ಸಾಕಷ್ಟು ಭಿನ್ನಾಭಿಪ್ರಾಯಗಳು ಇತ್ತು. ಹಾಗೆಯೇ ಟಾಗೂರ್ ಮತ್ತೆ ಗಾಂಧಿ ಮಧ್ಯೆ ಮಹತ್ವದ ವಾದ ವಿವಾದಗಳು ನಡೆಯುತ್ತವೆ. ಹಾಗೆಯೇ ಗಾಂಧಿ ಮತ್ತೆ ಅಂಬೇಡ್ಕರ್ ಮಧ್ಯೆ ಕೂಡ ತೀವ್ರವಾದ ಅಭಿಪ್ರಾಯಭೇದಗಳಿದ್ದುವು. ವಿಶೇಷವೆಂದರೆ, ಅವರವರ ನೆಲೆಯಿಂದ ಅವರ ಅಭಿಪ್ರಾಯಗಳನ್ನು ನಮಗೆ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಆದರೆ ಜಿನ್ನಾರನ್ನು ಅರ್ಥಮಾಡಿಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ. ಅವರ ಕಾಳಜಿಗಳು ನಮಗೆ ಒಪ್ಪಿಗೆಯಾಗುವುದಿಲ್ಲ. ಯಾಕಿರಬಹುದು..

• ನನಗೆ ತುಂಬಾ ಕಾಡುತ್ತಿದ್ದ ವಿಚಾರ ಸ್ವಾತಂತ್ರ್ಯ ಸಿಕ್ಕ ಮೇಲೆ ಅಭಿವೃದ್ಧಿಗೆ ತೆಗೆದುಕೊಂಡ ದಾರಿ. ಹಳ್ಳಿಗಳ ಅಭಿವೃದ್ಧಿ, ಗುಡಿಕೈಗಾರಿಕೆಗಳ ಪುರುತ್ಥಾನ, ಆಗಬೇಕಾಗಿದ್ದ ಜಾಗದಲ್ಲಿ ಬೃಹತ್ ಕೈಗಾರಿಕೆಗಳಿಗೆ ಉತ್ತೇಜನ ಮತ್ತು ನಗರಾಭಿವೃದ್ಧಿಗೆ ಒತ್ತುಕೊಟ್ಟದ್ದು ಹೇಗೆ? ಇದು ಸರಿಯಲ್ಲ ಎಂದು ಗೊತ್ತಿದ್ದರೂ ನಾವು ಯಾಕೆ ಈ ಪಥ ಆಯ್ಕೆ ಮಾಡಿಕೊಂಡೆವು? ಗಾಂಧಿ ಕಥನ ಕೇಳಿದಾಗ ಯಾಕೆ ಹೀಗೆ ಆಯಿತು ಎಂಬುದು ಅರ್ಥವಾಯಿತು. ಆ ಸಂದರ್ಭ, ನಡೆದ ಘಟನಾವಳಿಗಳು, ವ್ಯಕ್ತಿಗಳ ಸ್ವಾರ್ಥ, ಗುಂಪಿನ ಸಂಘರ್ಷಗಳು, ಜಾಗತಿಕ ನಡಾವಳಿಗಳು, ಸ್ಥಳೀಯ ಅಗತ್ಯಗಳು, ಅನಿವಾರ್ಯಗಳು, – ಇವನ್ನೆಲ್ಲ ಲೇಖಕರು ಹೆಕ್ಕಿ ಹೆಕ್ಕಿ ಜೋಡಿಸಿ ಜೋಡಿಸಿ ಬೆರೆಸಿ ಹದವಾಗಿ ಬಡಿಸಿ ನಮಗೆ ರುಚಿಯೂ ಆಗುವ ಹಾಗೆ, ಜೀರ್ಣವೂ ಆಗುವ ಹಾಗೆ, ಒಳನೋಟ ಸಿಗುವ ಹಾಗೆ ಬರೆದಿದ್ದಾರೆ. – ಉಮಾಶಂಕರ್ ಪೆರಿಯೋಡಿ

ನಮ್ಮ ನಡುವೆ ಇಂತಹ ಅನೇಕ ವಿಚಾರಗಳು, ಚಿಂತನೆಗಳು ಹಾದುಹೋದವು. ಈ ವಿಚಾರಗಳ ಚಿಕ್ಕ ವಿವರಣೆ ಹೀಗಿದೆ.

• ಕೆಲವರಿಗೆ ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರಿಗಾಗಿ ಕೆಲಸ ಮಾಡಿದ್ದು ಅಂತ ಗೊತ್ತಿರಲಿಲ್ಲ. ಅಲ್ಲಿಯ ಕಪ್ಪು ಜನರ ಜೊತೆಗೆಯೇ ಕೆಲಸ ಮಾಡಿದ್ದು ಅಂದುಕೊಂಡಿದ್ದರಂತೆ.

• ಗಾಂಧೀಜಿಯವರು ಅಷ್ಟೊಂದು ಕಾಲ ಅಲ್ಲಿದ್ದು, ಕಪ್ಪು ಜನರ ಸಮಸ್ಯೆ ಅವರಿಗೆ ಯಾಕೆ ಅಷ್ಟಾಗಿ ಕಾಡಲಿಲ್ಲ. ಕೊನೆಯ ದಿನಗಳಲ್ಲಿ ಅಷ್ಟೇ ಅವರ ಗಮನ ಕಪ್ಪುಜನರ ಕಡೆಗೆ ಸರಿದಿತ್ತು. ಇದು ಆಶ್ಚರ್ಯವೆನಿಸುತ್ತದೆ.

• ಎಲ್ಲದರ ನಡುವೆ ಗಾಂಧಿ ಮತ್ತು ಅಂಬೇಡ್ಕರ್ ಜೊತೆಗೂಡಲು ಸಾಧ್ಯವೇ ಆಗದೇ ಇದ್ದದ್ದು ದುರದೃಷ್ಟಕರ. ಇಬ್ಬರಿಗೂ ಸಮಸ್ಯೆಗಳನ್ನು ನೋಡುವ ಅವರದ್ದೇ ಆದ ತೀವ್ರವಾದ ನೆಲೆಯಿತ್ತು ಅನಿಸುತ್ತದೆ. ಆ ಹೊತ್ತಿನಲ್ಲಿ ಆ ಹಿನ್ನೆಲೆಯಲ್ಲಿ ಅವರ ನಡುವೆ ಏನೇ ನಡೆದಿರಲಿ, ಅದನ್ನು ಇಟ್ಟುಕೊಂಡು ನಾವು ಗುದ್ದಾಡಬೇಕಾಗಿಲ್ಲ; ಇಂದಿಗೆ ನಮಗೆ ಅವರಿಬ್ಬರೂ ಬಹಳ ಬೇಕಾಗಿದ್ದಾರೆ ಎಂಬ ಸತ್ಯದ ಮೂಲಕ ನಾವು ಅವರನ್ನು ಜೊತೆಗೆ ಇರಿಸಿಕೊಳ್ಳಲು ಸಾಧ್ಯ ಅನಿಸುತ್ತದೆ.

• ಈ ಕಥನದ ಕೊನೆಯ ಪುಟಗಳಲ್ಲಿ ಲೋಹಿಯವರು ಬಹಳ ಗಮನ ಸೆಳೆಯುತ್ತಾರೆ. ಅವರನ್ನು ವಿಶೇಷವಾಗಿ ಓದಬೇಕು ಅಂತ ನಮ್ಮ ಯುವ ಒಡನಾಡಿಗಳಿಗೆ ಅನಿಸಿತು.

• ಗಾಂಧೀಜಿಯವರ ಸತ್ಯಾಗ್ರಹದ ಪರಿಕಲ್ಪನೆ ಮೂಡಿದ ಹೊತ್ತು, ರೂಪುಗೊಂಡ ರೀತಿ, ನೆಲಕ್ಕೆ ಇಳಿಯುತ್ತಾ ಬಂದ ಸೊಗಸು, ಅದರ ಸುತ್ತುಮುತ್ತು ಎದುರಾಗುವ ಅಗಾಧವಾದ ಸವಾಲುಗಳು.. ಕಣ್ಣಿಗೆ ಕಟ್ಟಿದಂತೆ ಆಯಿತು. ಅವರ ಸತ್ಯಾಗ್ರಹದ ಪರಿಕಲ್ಪನೆಯಲ್ಲಿ – ವೈರಿಯ ನೆಲೆಯಲ್ಲಿ ನಿಂತವರಿಗೆ ಸಮಸ್ಯೆಯನ್ನು ಮನದಟ್ಟು ಮಾಡುತ್ತಾ ಪರಿಹಾರದ ದಾರಿಯಲ್ಲಿ ಅವರ ಪಾತ್ರವನ್ನು ಗುರುತಿಸಿಕೊಳ್ಳುವಂತೆ ಅರಿವು ಮೂಡಿಸುವ ಪ್ರಯತ್ನ, ವಿರೋಧಿ ಬಳಗದವರು ಅಸಹಾಯಕ ಪರಿಸ್ಥಿತಿಯಲ್ಲಿ ಇದ್ದಾಗ ಹೋರಾಟವನ್ನು ನಿಲ್ಲಿಸುವುದು, ಅವರಿಗೆ ತೊಂದರೆ ಕೊಡದೆ ಇರುವುದು, ವಿರೋಧಿಗಳನ್ನು ಸೋಲಿಸುವುದಲ್ಲ, ಅವರ ಮನಸ್ಸನ್ನು ಗೆಲ್ಲುವುದು, ವಿರೋಧಿ ಸ್ಥಾನದಲ್ಲಿ ಇರುವವರೇ ಗಾಂಧೀಜಿಯವರನ್ನು ಗೌರವಿಸುವಂತೆ ಆಗುವುದು – ಎಲ್ಲವೂ ರೋಮಾಂಚಕಾರಿ ಆಗಿದ್ದವು.

ಕಥನ ಕೇಳಿಸುವುದರ ಮೂಲಕ ಪುಸ್ತಕ ಓದುವ ಅವಕಾಶ ತಪ್ಪಿಸಿದೆನೇನೋ ಗೊತ್ತಿಲ್ಲ, ಕೇಳಿಸಿಕೊಂಡವರಲ್ಲಿ ಸಾಕಷ್ಟು ಮಂದಿ ಪುಸ್ತಕ ಓದುವ ಹವ್ಯಾಸ ಇರುವವರೂ ಇದ್ದರು, ಇಷ್ಟು ದಪ್ಪ ಪುಸ್ತಕ ನೋಡಿದರೇ ಹೆದರಿ ಹಿಮ್ಮೆಟ್ಟುವವರೂ ಇದ್ದರು. ಒಂದು ಒಳ್ಳೆಯ ಅಂಶ ಅಂದರೆ, ಬಹಳಷ್ಟು ಮಂದಿ, 'ಕೇಳಿ ತಿಳಿದುಕೊಂಡಿದ್ದಾಯಿತು, ಇನ್ನು ಓದಿ ತಿಳಿದುಕೊಳ್ಳಬೇಕು ಅನಿಸಿದೆ', ಅಂತ ಹೇಳಿದ್ದಾರೆ. ಕಥನ ನಿರೂಪಣೆ ಮಾಡಿದ ರೀತಿಗೂ ಬಹಳ ಪ್ರೀತಿಯ, ಮೆಚ್ಚುಗೆಯ ಮಾತುಗಳು ಸಿಕ್ಕವು. ಈ ಘಟನೆಗಳು ನಡೆಯುವಾಗ, ಅಕ್ಕ ಅಲ್ಲಿಯೇ ಇದ್ದಳೇನೋ ಅನಿಸುತ್ತದೆ, ಅಂತ ತಂಗಿ ಒಬ್ಬಳು ಹೇಳಿದರೆ, ' 'ಆ ಮೆರವಣಿಗೆಯಲ್ಲಿ ನೀನೂ ಹೋಗಿದ್ದೀಯಾ' ಅಂತ ಗೆಳತಿಯೊಬ್ಬಳು ಕೇಳಿದಳು. ಈ ಎಲ್ಲಾ ಮೆಚ್ಚುಗೆಯ ಒಂದಷ್ಟು ಪಾಲು ಬೆರಗು ಕಣ್ಣುಗಳೊಂದಿಗೆ, ತನ್ಮಯತೆಯಿಂದ ಎದುರು ಕುಳಿತು ಕೇಳಿಸಿಕೊಂಡ ನನ್ನ ಯುವ ಒಡನಾಡಿಗಳಿಗೆ ಸಲ್ಲುತ್ತದೆ; ಮತ್ತು ಈ ಕಥೆ ಹೇಳುವ ಪ್ರಕ್ರಿಯೆಯನ್ನು ಅತ್ಯಂತ ಕಾಳಜಿಯಿಂದ ಹಾಗೂ ವ್ಯವಸ್ಥಿತವಾಗಿ ಸಂಯೋಜಿಸಿದ ನನ್ನ ಮಗಳು ಇಂದುಗೆ ಸಲ್ಲುತ್ತದೆ. ಕೊನೆಯಲ್ಲಿ, ಕೇಳಿಸಿಕೊಂಡ ಒಂದಷ್ಟು ಮಂದಿ ಒಡನಾಡಿಗಳ ಜೊತೆಗೆ ಒಂದು ಪುಟ್ಟ, ಆತ್ಮೀಯ ಸಮಾರಂಭವನ್ನು ಕೂಡಾ ಸಂಯೋಜಿಸಿದಳು. ಅಂದು ಗಾಂಧೀಜಿಯವರ ಪ್ರೀತಿಯ 'ವೈಷ್ಣವ ಜನತೋ' ಹಾಗೂ ಜಯಂತ್ ಕಾಯ್ಕಿಣಿ ಬರೆದ ಅದರ ಕನ್ನಡ ಭಾವಾನುವಾದವನ್ನೂ ತೃಪ್ತಿ ಮತ್ತು ಮಲ್ಲಿಕಾ ಹಾಡಿದರು.

ಕಥನವನ್ನು ಅತ್ಯಂತ ಸಮಗ್ರ ನೆಲೆಯಲ್ಲಿ, ಪರಿಣಾಮಕಾರಿಯಾಗಿ ಮುಂದಿಟ್ಟ ಡಿ.ಎಸ್.ಎನ್ ಅವರಿಗೆ ಮತ್ತೊಮ್ಮೆ ಪ್ರೀತಿ ಪೂರ್ವಕ ಗೌರವ ಸಲ್ಲಿಸುತ್ತೇನೆ. ಲೇಖಕರು

(೧೪ನೇ ಪುಟಕ್ಕೆ

# ಗಾಂಧೀಜಿಯ ಹಿಂದ್ ಸ್ವರಾಜ್ : ಕನಸನ್ನು ನನಸು ಮಾಡಿದ ಅಪರೂಪದ ಅಧ್ಯಾತ್ಮಜೀವಿ ಮಾರಿಷ್ ಫ್ರೀಡ್‌ಮನ್

ಗಾಂಧಿ ಕಥೆ-೨

-ಜೆ.ಎಸ್. ಸದಾನಂದ



ರಮಣ ಮಹರ್ಷಿಗಳಿಂದ "ಈತ ಇಲ್ಲಿನವನೇ, ಆಕಸ್ಮಿಕವಾಗಿ ಪೋಲೆಂಡ್‌ನಲ್ಲಿ ಹುಟ್ಟಿದ್ದಾನೆ' ಎಂದೆನಿಸಿಕೊಂಡ ಮಾರಿಷ್ ಫ್ರೀಡ್‌ಮನ್ ಎಂಬ ಎಲೆಕ್ಟ್ರಿಕಲ್ ಎಂಜಿನಿಯರ್ ಮೈಸೂರು ಸಂಸ್ಥಾನದ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್‌ರ ಆಹ್ವಾನದ ಮೇರೆಗೆ ಭಾರತಕ್ಕೆ ಬಂದು ಇಲ್ಲಿಯವರೇ ಆಗಿ, ಗಾಂಧಿ, ಸಂತ ರಾಮದಾಸ್, ರಮಣ ಮಹರ್ಷಿ, ದಲೈಲಾಮಾ ಮತ್ತು ನಿಸರ್ಗದತ್ತ ಮಹಾರಾಜ್‌ರ ಶಿಷ್ಯರಾಗಿ ಇಲ್ಲಿಯವರೇ ಆದದ್ದು ಒಂದು ರೋಮಾಂಚನಕಾರಿ ಕಥೆ. ಗಾಂಧಿಯವರ ಗುರು (ಗೋಖಲೆ)-ಶಿಷ್ಯರೆಲ್ಲರೂ ಅವರ 'ಗ್ರಾಮ ಸ್ವರಾಜ್ಯ' ಒಂದು ಭವ್ಯ ಕನಸು ಮಾತ್ರ ಎನ್ನುತ್ತಿದ್ದಾಗ ಭಾರತದ ಒಂದು ಸಣ್ಣ ಪ್ರಾಂತ್ಯದಲ್ಲಿ ಅದನ್ನು ನನಸು ಮಾಡಿದ ಕ್ರಿಯಾಶೀಲ ವ್ಯಕ್ತಿಯಾಗಿ, ಟಿಬೆಟ್‌ನ ಚೀನಾ ಆಕ್ರಮಣದ ಸಮಯದಲ್ಲಿ ದಲೈಲಾಮಾ ಅಲ್ಲಿಂದ ತಪ್ಪಿಸಿಕೊಂಡು ಭಾರತದ ಗಡಿ ಬಳಿ ಬಂದಾಗ ಆಶ್ರಯ ನೀಡುವಂತೆ ಪ್ರಧಾನಿ ನೆಹರೂ ಅವರ ಮನವೊಲಿಸಿದ ಸತ್ಯಾಗ್ರಹಿಯಾಗಿ ಫ್ರೀಡ್‌ಮನ್ ಗಾಂಧಿ ಪರಂಪರೆ ಪ್ರತಿನಿಧಿಸುವ ಅಧ್ಯಾತ್ಮ ಮತ್ತು ಸಾರ್ವಜನಿಕ ಬದುಕಿನ ಅನನ್ಯ ಬೆಸುಗೆಯ ಒಂದು ಅನುಪಮ ಪ್ರತೀಕ,-ಸಂ

**ಮಾ**ರಿಷ್ ಫ್ರೀಡ್‌ಮನ್ (೧೮೯೪) ಮೂಲತಃ ಪೋಲೆಂಡಿನ ಯಹೂದಿ ಜನಾಂಗದ ಬಡ ಕುಟುಂಬಕ್ಕೆ ಸೇರಿದವರು. ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಫ್ರೀಡ್‌ಮನ್ ತನ್ನ ೧೦ನೆ ವಯಸ್ಸಿಗೆ ಹಿಬ್ರೂ, ರಷ್ಯನ್, ಫ್ರೆಂಚ್, ಪೊಲಿಷ್, ಇಂಗ್ಲಿಷ್ ಭಾಷೆಯಲ್ಲಿ ಪರಿಣಿತರಾಗಿದ್ದರು. ಚಿಕ್ಕಂದಿನಿಂದಲೇ ಅಲೌಕಿಕ ಚಿಂತನೆಗಳಿಗೆ ತನ್ನನ್ನು ತೆರೆದುಕೊಂಡ ಫ್ರೀಡ್‌ಮನ್‌ರವರ ತಂದೆಗೆ ತನ್ನ ಮಗ ರಬ್ಬಿಯಾಗಬೇಕೆಂಬ (ಯಹೂದಿಗಳ ರಿಲಿಜಸ್ ಗುರು) ಹಂಬಲವಿತ್ತು. ಫ್ರೀಡ್‌ಮನ್‌ರಿಗೆ ಭಾರತೀಯ ಆಧ್ಯಾತ್ಮ ಚಿಂತನೆಯ ಪರಿಚಯವಾದದ್ದು ಸ್ವಿಜರ್‌ಲ್ಯಾಂಡ್‌ನಲ್ಲಿ, ಅನ್ನಿಬೆಸೆಂಟ್‌ರವರ ಥಿಯಾಸೊಫಿಕಲ್ ಸೊಸೈಟಿ ಮತ್ತು ಜೆ. ಕೃಷ್ಣಮೂರ್ತಿಯವರ ಪರಿಚಯವಾದ ನಂತರ.'ಪೋಲೆಂಡ್‌ನಲ್ಲಿ ಎಲೆಕ್ರಿಕಲ್ ಎಂಜನಿಯರಿಂಗ್ ಕಲಿತು ೧೯೨೮ರಲ್ಲಿ ಫ್ರಾನ್ಸ್‌ಗೆ ಬಂದು ಅಲ್ಲಿ ತಮ್ಮ ಸ್ವಂತ ಪರಿಶ್ರಮದಿಂದ ಒಂದು ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಸೇರಿ ತಮ್ಮ ಗುಣಮಟ್ಟದ ಕೆಲಸದಿಂದಾಗಿ ಬಹಳ ಬೇಗ ಜನರಲ್ ಮ್ಯಾನೇಜರ್ ಹುದ್ದೆಗೇರುತ್ತಾರೆ. ತಮ್ಮ ೨೬ನೆ ವಯಸ್ಸಿನಲ್ಲೆ ಸುಮಾರು ಹತ್ತು ಎಲೆಕ್ಟ್ರಿಕಲ್ ಮತ್ತು ಮೆಕಾನಿಕಲ್ ಉತ್ಪನ್ನಗಳಿಗೆ ಅವರು ಪೇಟೆಂಟ್ ಪಡೆದಿರುತ್ತಾರೆ. ಅದರಲ್ಲಿ ಮುಖ್ಯವಾದುದು ಅವರೇ ಕಂಡುಹಿಡಿದ 'ಮಾತನಾಡುವ ಪುಸ್ತಕ'. ಫ್ರಾನ್ಸ್‌ಗೆ ಬರುವ ಮೊದಲೆ ಜೆ. ಕೃಷ್ಣಮೂರ್ತಿಯವರೊಡನೆ ಬೆಳೆದ ಅವರ (ಸುಮಾರು ನಲವತ್ತು ವರ್ಷಗಳ) ಒಡನಾಟ ಭಾರತದ ಆಧ್ಯಾತ್ಮ ಚಿಂತನೆಯ ಕುರಿತು ಅವರಲ್ಲಿ ಅಗಾಧ ಆಸಕ್ತಿ ಕೆರಳಿಸಿತ್ತು. ಫ್ರಾನ್ಸಿಗೆ ಬಂದ ಮೇಲೆ ಭಾರತೀಯ ವೇದಾಂತ, ಭಗವದ್ಗೀತೆ, ಉಪನಿಷತ್‌ಗಳ ಅಧ್ಯಯನ ಮಾಡುತ್ತಿದ್ದ ಸಮಯದಲ್ಲೆ ಫ್ರೀಡ್‌ಮನ್ ಅವರ ಮೇಲೆ ರಮಣ ಮಹರ್ಷಿಯವರನ್ನು ಕುರಿತ ಪಾಲ್ ಬ್ರಂಟನ್‌ರವರ ಬರಹ ಅಗಾಧ ಪ್ರಭಾವವನ್ನು ಬೀರುತ್ತದೆ ಮತ್ತು ಭಾರತಕ್ಕೆ ಭೇಟಿಕೊಡಬೇಕೆಂಬ ಅದಮ್ಯ ಹಂಬಲವನ್ನು ಅವರಲ್ಲಿ ಹುಟ್ಟುಹಾಕುತ್ತದೆ. ಒಂದು ದಿನ ಎರಡನೆಯ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಿ ಮಿತ್ರ ರೋಮ್ಯಾನ್ ರ್‍ಯೋಲ್ಯಾಂಡ್‌ರನ್ನು ಭೇಟಿ ಮಾಡಲು ಸ್ವಿಟ್ಜರ್‌ಲೆಂಡ್‌ಗೆ ಪ್ರಯಾಣ ಮಾಡುತ್ತಿದ್ದ ಗಾಂಧೀಜಿಯವರ ದರ್ಶನ ಅಕಸ್ಮಾತ್ ಪ್ಯಾರಿಸ್ಸಿನ ರೈಲ್ವೇ ನಿಲ್ದಾಣದಲ್ಲಿ ಆದಾಗ ಆ ಹಂಬಲ ಅತ್ಯಂತ ತೀವ್ರವಾಗುತ್ತದೆ.

ಆಕಸ್ಮಿಕವೆಂಬಂತೆ ಅದೇ ಸಮಯದಲ್ಲಿ ಮೈಸೂರಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್‌ರವರು ಮೈಸೂರು ರಾಜ್ಯವನ್ನು ಆಧುನಿಕಗೊಳಿಸುವ ಅಂದಿನ ಮಹಾರಾಜರ ಅಪೇಕ್ಷೆಯಂತೆ ಬೆಂಗಳೂರಿನಲ್ಲಿ ಎಲೆಕ್ಟ್ರಿಕಲ್ ಫ್ಯಾಕ್ಟರಿಯನ್ನು ಸ್ಥಾಪಿಸುವ ಉದ್ದೇಶದಿಂದ ಪರಿಣಿತ ವ್ಯಕ್ತಿಯೊಬ್ಬರ ತಲಾಶೆಯಲ್ಲಿರುತ್ತಾರೆ. ೧೯೩೫ರಲ್ಲಿ ಫ್ರಾನ್ಸ್‌ಗೆ ಪ್ರವಾಸ ಬಂದ ದಿವಾನರು ಅಲ್ಲಿರುವ ಪ್ರಖ್ಯಾತ ಎಲೆಕ್ಟ್ರಿಕ್ ಫ್ಯಾಕ್ಟರಿಗೆ ನೀಡಿದ ಭೇಟಿಯ ಸಮಯದಲ್ಲಿ ಫ್ರೀಡ್‌ಮನ್‌ರ ಪರಿಚಯವಾಗಿ ಅವರನ್ನು ತಮ್ಮ ಸಂಸ್ಥಾನಕ್ಕೆ ಆಹ್ವಾನಿಸುತ್ತಾರೆ. ಅದಕ್ಕಾಗಿಯೆಕಾಯುತ್ತಿದ್ದ ಫ್ರೀಡ್‌ಮನ್ ತಕ್ಷಣ ಆಹ್ವಾನವನ್ನು ಒಪ್ಪಿಕೊಳ್ಳುತ್ತಾರಷ್ಟೆ ಅಲ್ಲ ಪ್ಯಾರಿಸ್ಸಿನ ಫ್ಯಾಕ್ಟರಿಯ ಕೆಲಸವನ್ನು ಬಿಟ್ಟು ದಿವಾನರೊಂದಿಗೆ ಹೊರಟು ಬಿಡುತ್ತಾರೆ.

ಬೆಂಗಳೂರಿನಲ್ಲಿ ಮೈಸೂರು ಸಂಸ್ಥಾನವು ಪ್ರಾರಂಭಿಸಿದ ಎಲೆಕ್ಟ್ರಿಕಲ್ ಫ್ಯಾಕ್ಟರಿಯ ಉಸ್ತುವಾರಿ ವಹಿಸಿಕೊಳ್ಳುತ್ತಾರೆ. ಇದೇ ವೇಳೆಯಲ್ಲಿ ಕಾಞಂಗಾಡ್‌ನಲ್ಲಿರುವ ಸಂತ ರಾಮದಾಸರ ಹತ್ತಿರ ಹೋಗಿ .ಭರತಾನಂದ ಎನ್ನುವ ಹೆಸರಿನಲ್ಲಿ ಸಂನ್ಯಾಸ ಸ್ವೀಕರಿಸುತ್ತಾರೆ. ಕಾವಿಯುಟ್ಟು ತನ್ನ ಜೀವನ ಶೈಲಿಯನ್ನು ಸಂಪೂರ್ಣವಾಗಿ ಬದಲಿಸಿಕೊಳ್ಳುತ್ತಾರೆ. ನಂತರ ಫ್ಯಾಕ್ಟರಿ ಉಸ್ತುವಾರಿಗಾಗಿ ನೀಡಲಾಗುತ್ತಿದ್ದ ಭತ್ಯೆಯನ್ನು ಮುಟ್ಟಲೂ ನಿರಾಕರಿಸತೊಡಗಿದ ಅವರು ಫ್ಯಾಕ್ಟರಿಯ ಕೆಲಸಗಾರರು ತರುತ್ತಿದ್ದ ಊಟವನ್ನೆ ಹಂಚಿಕೊಂಡು ತಿನ್ನಲು ಪ್ರಾರಂಭಿಸುತ್ತಾರೆ. ಹೀಗೆ ಮಾಡಿದರೆ ಫ್ಯಾಕ್ಟರಿಯಲ್ಲಿ ಶಿಸ್ತನ್ನು ಕಾಪಾಡಲು ಸಾಧ್ಯವಾಗುವುದಿಲ್ಲ ಎಂದು ದಿವಾನರು ಆಕ್ಷೇಪಣೆ ವ್ಯಕ್ತಪಡಿಸಿದಾಗ ಅವರು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಡಲು ಮುಂದಾಗುತ್ತಾರೆ. ದಿವಾನರೇ ಅವರ ಹಠಕ್ಕೆ ಮಣಿದು ಒಂದು ಒಪ್ಪಂದಕ್ಕೆ ಬರುತ್ತಾರೆ. ಅದರಂತೆ ವಿದೇಶದ ಗಣ್ಯರ ಭೇಟಿಯಿದ್ದಾಗ ಫ್ರೀಡ್‌ಮನ್ ಕೋಟು ಟೈಯನ್ನು ಧರಿಸಬೇಕಿತ್ತು. ಈ ಮಧ್ಯೆ ಫ್ಯಾಕ್ಟರಿಗೆ ಭೇಟಿ ಕೊಟ್ಟ ಮಹಾರಾಷ್ಟ್ರದ ಔಂದ್ ಪ್ರಾಂತ್ಯದ ರಾಜಕುಮಾರ ಅಪಾ ಪಂತ್ ಫ್ರೀಡ್‌ಮನ್‌ರ ಸಾಧನೆಯನ್ನು ನೋಡಿ ಅವರನ್ನು ತಮ್ಮ ಪ್ರಾಂತ್ಯಕ್ಕೆ ಆರು ತಿಂಗಳ ಕಾಲ ಎರವಲು ನೀಡಬೇಕೆಂದು ಮಿರ್ಜಾ ಇಸ್ಮಾಯಿಲ್‌ರು ನಿರಾಕರಿಸಿದಾಗ ಅಸಮಧಾನಗೊಂಡ ಫ್ರೀಡ್‌ಮನ್ ಬೆಂಗಳೂರನ್ನು ಬಿಟ್ಟು ಔಂದ್‌ಗೆ ತೆರಳುತ್ತಾರೆ. ಹೋಗುವಾಗ ತಮ್ಮ ಲೆಕ್ಕದಲ್ಲಿದ್ದ ತಮ್ಮ ಅಷ್ಟೂ ಭತ್ಯೆಯ ಅಷ್ಟೂ ಹಣವನ್ನು ಕೆಲಸಗಾರರಿಗೆ ಹಂಚಿ ಬಾಂಬೆಗೆ ಹೊರಡುತ್ತಾರೆ. ಬಾಂಬೆಯಲ್ಲಿ ಗಾಂಧಿಯವರನ್ನು ಭೇಟಿಯಾದ ಫ್ರೀಡ್‌ಮನ್ ಗಾಂಧಿಯವರು ನೂಲುತ್ತಿದ್ದ ಚರಕವನ್ನು ನೋಡಿ ಇದಕ್ಕಿಂತ ಉತ್ತಮವಾದ ಚರಕವನ್ನು ಮಾಡಬಹುದಲ್ಲ ಎಂದು ಅನ್ನಿಸಿ ಒಂದು ಸುಧಾರಿತ ಚರಕವನ್ನು ತಯಾರಿಸಿ ಗಾಂಧೀಜಿಗೆ ಕೊಡುತ್ತಾರೆ. ಅದನ್ನು ತುಂಬಾ ಇಷ್ಟಪಟ್ಟ ಗಾಂಧಿ ಕೊನೆಯವರೆಗೂ ಆ ಚರಕವನ್ನು ಬಳಸುತ್ತಿದ್ದರು ಎಂದು ಫ್ರೀಡ್‌ಮನ್ ಬಗ್ಗೆ ಸಾಕಷ್ಟು ಮಾಹಿತಿ ಕಲೆ ಹಾಕಿರುವ ರಮಣರ ಅನುಯಾಯಿ ಡೇವಿಡ್ ಗಾಡ್‌ಮನ್ ಹೇಳುತ್ತಾರೆ. ಗಾಂಧೀಜಿಯವರ ವಿಚಾರಧಾರೆಯಿಂದ ಪ್ರಭಾವಿತರಾದ ಮಾರಿಷ್ ಫ್ರೀಢ್‌ಮನ್ ಪೂರ್ಣ ಪ್ರಮಾಣದ ಕಾಂಗ್ರೆಸ್ ಕಾರ್ಯಕರ್ತರಾಗಿ, ಸಂಪೂರ್ಣವಾಗಿ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ತನ್ನನ್ನು ಸಮರ್ಪಿಸಿಕೊಳ್ಳುತ್ತಾರೆ.



## 'ಹಿಂದ್ ಸ್ವರಾಜ್' ಸ್ಫೂರ್ತಿ: ಔಂದ್ ಪ್ರಯೋಗ

ಎಲ್ಲೂ ಸಾಕಷ್ಟು ಪ್ರಚಾರವಾಗದೆ ಉಳಿದಿರುವ ಈ ಮಹನೀಯರ ಒಂದು ಅದ್ಭುತ ಸಾಧನೆ ಎಂದರೆ ಅವರ 'ಔಂದ್ ಪ್ರಯೋಗ'. ಆಗಿನ ಮುಂಬಯಿ ಪ್ರಾಂತ್ಯದಲ್ಲಿದ್ದ ಔಂದ್ ಎನ್ನುವ (ಸುಮಾರು ೭೨ ಹಳ್ಳಿಗಳನ್ನೊಳಗೊಂಡ) ಒಂದು ಪುಟ್ಟ ರಾಜ್ಯವನ್ನು ಆಳುತ್ತಿದ್ದ ಮಹಾರಾಜ ತನ್ನ ರಾಜ್ಯವನ್ನೂ ಮೈಸೂರಿನಂತೆಯೆ ಆಧುನಿಕಗೊಳಿಸುವಲ್ಲಿ ಸಹಾಯ ಮಾಡಬೇಕೆಂದು ಫ್ರೀಡ್‌ಮನ್‌ರನ್ನು ಕೇಳುತ್ತಾರೆ. ಈಗಾಗಲೆ ಗಾಂಧೀಜಿಯವರ 'ಗ್ರಾಮ್‌ಸ್ವರಾಜ್' ಪರಿಕಲ್ಪನೆಯಿಂದ ಪ್ರಭಾವಿತರಾಗಿದ್ದ ಫ್ರೀಡ್‌ಮನ್ ಮಹಾರಾಜರಿಗೆ ನಿಮಗೆ ನಿಜಕ್ಕೂ ಪ್ರಜೆಗಳಿಗೆ ಒಳಿತು ಮಾಡಬೇಕೆಂಬ ಆಸೆಯಿದ್ದರೆ ನಿಮ್ಮ ವೈಭವೋಪೇತ ಜೀವನವನ್ನು ತ್ಯಜಿಸಿ ಎಲ್ಲ ಅಧಿಕಾರವನ್ನು ಪ್ರಜೆಗಳಿಗೆ ವಹಿಸಿಕೊಡಿ ಎನ್ನುತ್ತಾರೆ. ಮೊದಲಿಗೆ ಮಹರಾಜ ಇದಕ್ಕೆಲ್ಲ ಒಪ್ಪದಿದ್ದರೂ ಕ್ರಮೇಣ ಫ್ರೀಡ್‌ಮನ್‌ರ ನಿಷ್ಕಲ್ಮಶ ಭಾವನೆಗೆ ಮತ್ತು ನೈತಿಕ ಒತ್ತಾಯದ ಬಲಕ್ಕೆ ತಲೆಬಾಗಲೇಬೇಕಾಗುತ್ತದೆ. ತಂದೆ ಮಗ ಇಬ್ಬರನ್ನೂ ಫ್ರೀಡ್‌ಮನ್ ಸರ್ಬಮತಿ ಆಶ್ರಮದಲ್ಲಿದ್ದ ಗಾಂಧೀಜಿಯವರ ಬಳಿ ಕರೆತರುತ್ತಾರೆ. ವಿಷಯವನ್ನು ತಿಳಿದ ಗಾಂಧೀಜಿ ಫ್ರೀಡ್‌ಮನ್‌ಗೆ, 'ಮೈಸೂರಿನ ಶ್ರೀಮಂತ ಮಹಾರಾಜರನ್ನು ಅವರಷ್ಟಕ್ಕೆ ಬಿಟ್ಟು ಈ ಬಡಪಾಯಿಯನ್ನು ನನ್ನ ಬಳಿ ಕರೆ ತಂದಿದ್ದೀಯಾ!' ಎಂದು ಚೇಷ್ಟೆ ಮಾಡಿ, ಪ್ರಾಂತ್ಯದ ಜನರನ್ನು ಮಾನಸಿಕವಾಗಿ ತಯಾರು ಮಾಡುವವರೆಗೂ ಜನರಿಗೆ ಅಧಿಕಾರ ಹಸ್ತಾಂತರ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಹೇಳಿ ಅದರ ಜವಾಬ್ದಾರಿಯನ್ನು ಫ್ರೀಡ್‌ಮನ್ ಹಾಗೂ ರಾಜಕುಮಾರ ಅಪಾ ಪಂತ್‌ರಿಗೆ ವಹಿಸುತ್ತಾರೆ. ಫ್ರೀಡ್‌ಮನ್ ರಾಜಕುಮಾರನೊಡನೆ ಹಳ್ಳಿಗಳಿಗೆ ತೆರಳಿ ಜನರು ತಮ್ಮ ಜವಾಬ್ದಾರಿಗಳನ್ನು ತಾವೇ ಹೇಗೆ ನಿರ್ವಹಿಸಿಕೊಳ್ಳಬೇಕೆಂಬುದರ ಬಗ್ಗೆ ಶಿಕ್ಷಣ-ತರಬೇತಿ ಕೊಡುತ್ತಾರೆ. ಜನರು ಸ್ವಾವಲಂಬಿಗಳಾಗಿ ಬದುಕಲು ಬಡಗಿ, ಕಮ್ಮಾರಿಕೆ, ಕೃಷಿ, ಚರ್ಮದ ಕೆಲಸದ ಬಗ್ಗೆ ಕಾರ್ಯಾಗಾರಗಳನ್ನು ಆರಂಭಿಸುತ್ತಾರೆ. ಈ ತರಬೇತಿಯ ಅವಧಿಯ ಮೂರು ತಿಂಗಳುಗಳ ಕಾಲ ಫ್ರೀಡ್‌ಮನ್ ಹಳ್ಳಿಗಳಲ್ಲಿ ಅಕೇಶಿಯಾ ಮರಗಳ ಕೆಳಗೆ ನಿದ್ರಿಸುತ್ತಿದ್ದರು ಎಂದು ಅವರ ಒಡನಾಡಿ ಡೇವಿಡ್ ಗಾಡ್‌ಮನ್ ಬರೆಯುತ್ತಾರೆ. ಅಧಿಕಾರ ವಿಕೇಂದ್ರೀಕರಣವನ್ನು ಕಾರ್ಯಗತಗೊಳಿಸಲು ಕರಡು ಸಂವಿಧಾನವನ್ನು

೧೯೩೮ರಲ್ಲಿ ಫ್ರೀಡ್‌ಮನ್‌ರವರೆ ರಚಿಸುತ್ತಾರೆ. 'ಔಂದ್ ಪ್ರಯೋಗ' (ಔಂದ್ ಎಕ್ಸ್‌ಪರಿಮೆಂಟ್) ಎಂದೇ ಇದು ಪ್ರಖ್ಯಾತವಾಗಿ ಮುಂದೆ ಸ್ವಾತಂತ್ರ್ಯಾನಂತರ ರಾಜರ ಆಳ್ವಿಕೆಯ ಪ್ರದೇಶಗಳನ್ನು ಭಾರತದೊಡನೆ ಸಮಗ್ರಗೊಳಿಸುವವರೆಗೂ ಇದು ಯಶಸ್ವಿಯಾಗಿ ಮುಂದುವರೆಯುತ್ತದೆ. ಮೊರಿಷ್ ಫ್ರೀಡ್‌ಮನ್ ಅವರಂತಹ ಮಹಾನ್‌ವ್ಯಕ್ತಿತ್ವದ ಬಗ್ಗೆ ಏಕೆ ಸಾಕಷ್ಟು ಪ್ರಚಾರವಾಗಲಿಲ್ಲ ಎನ್ನುವುದೇ ಆಶ್ಚರ್ಯ. ಡೇವಿಡ್ ಗಾಡ್‌ಮನ್ ಹೇಳುವಂತೆ ಫ್ರೀಡ್‌ಮನ್ ತಾವು ಮಾಡಿರುವ ಕೆಲಸದ ಬಗ್ಗೆ ದಾಖಲೆ ಉಳಿಯದಂತೆ ನೋಡಿಕೊಳ್ಳುತ್ತಿದ್ದುದು ಇದಕ್ಕಿರಬಹುದಾದ ಬಲವಾದ ಕಾರಣ. ಇದಕ್ಕೆ ಉದಾಹರಣೆಯಾಗಿ ಒಂದು ಘಟನೆಯನ್ನು ಇಲ್ಲಿ ಉಲ್ಲೇಖಿಸಬೇಕು. ಔಂದ್ ಪ್ರಾಂತ್ಯದ ಅಧಿಕಾರ ಜನರಿಗೆ ಹಸ್ತಾಂತರವಾದ ನಂತರ ಕೇಂದ್ರ ಕಾರಾಗೃಹದಲ್ಲಿದ್ದ ಆ ಹಳ್ಳಿಗಳ ಅಪರಾಧಿಗಳನ್ನು ಫ್ರೀಡ್‌ಮನ್ ತನ್ನ ಜವಾಬ್ದಾರಿಯ ಮೇಲೆ ಪೆರೋಲ್‌ನಲ್ಲಿ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡು ಅವರಿಗೆ ತಮ್ಮ ಬದುಕನ್ನು ಮರುರೂಪಿಸಿಕೊಳ್ಳಲು ಅಗತ್ಯವಾದ ಕಸುಬುಗಳ ತರಬೇತಿ ನೀಡುತ್ತಾರೆ. ಕೈದಿಗಳೆಲ್ಲರೂ ಅವರಿಂದ ಎಷ್ಟು ಪ್ರಭಾವಿತರಾಗುತ್ತಾರೆಂದರೆ ಅವರಲ್ಲಿ ಯಾರೊಬ್ಬರೂ ತಮ್ಮ ಜೀವಿತ ಕಾಲದಲ್ಲಿ ಮತ್ತೆ ಅಪರಾಧವನ್ನೆಸಗುವುದಿಲ್ಲ. 'ಸ್ವತಂತ್ರಪುರ'ವೆಂಬ ಅವರದೇ ಸಣ್ಣ ಪಟ್ಟಣವನ್ನು ನಿರ್ಮಿಸುತ್ತಾರೆ. ಆ ಪಟ್ಟಣ ಈಗಲೂ ಇದ್ದು ಈ ಕುರಿತೇ ೧೯೬೦ರ ದಶಕದಲ್ಲಿ ಒಂದು ಹಿಂದಿ ಚಲನಚಿತ್ರ ತಯಾರಾಗುತ್ತದೆ ಎಂದು ಡೇವಿಡ್ ಗಾಡ್‌ಮನ್ ಹೇಳುತ್ತಾರೆ. ಆದರೆ ಅದರ ಹೆಸರೇನೆಂಬುದುದನ್ನು ಅವರು ತಿಳಿಸಿಲ್ಲ. (ಯಾರಿಗಾದರೂ ಗೊತ್ತಿದ್ದರೆ ದಯವಿಟ್ಟು ಮಾಹಿತಿ ನೀಡಿ). ಆ ಚಿತ್ರದ ನಿರ್ಮಾಪಕರು ಅದಕ್ಕೆ ಸ್ಫೂರ್ತಿಯಾದ ಫ್ರೀಡ್‌ಮನ್‌ರ ಹೆಸರನ್ನು ಕೃತಜ್ಞತೆಯ ರೂಪದಲ್ಲಿ ಚಲನಚಿತ್ರದ ಪ್ರಾರಂಭದಲ್ಲಿ ದಾಖಲಿಸಲು ಮುಂದಾದಾಗ ಫ್ರೀಡ್‌ಮನ್ ಬಲವಾಗಿ ನಿರಾಕರಿಸುವುದಷ್ಟೆ ಅಲ್ಲ, ನಿರ್ಮಾಪಕರು ಅದಕ್ಕಾಗಿ ಮತ್ತೆ ಮತ್ತೆ ಒತ್ತಾಯಿಸಿದಾಗ 'ನೀವು ನನ್ನ ಹೆಸರನ್ನೇನಾದರೂ ಹಾಕಿದರೆ ನ್ಯಾಯಾಲಯಕ್ಕೆ ಹೋಗಿ ಚಿತ್ರ ಬಿಡುಗಡೆಯಾಗದಂತೆ ತಡೆಯಾಜ್ಞೆಯನ್ನು ತರುತ್ತೇನೆ' ಎಂದು ಎಚ್ಚರಿಸುತ್ತಾರೆ. ಅಧ್ಯಾತ್ಮ ಸಾಧನೆಯ ತುತ್ತತುದಿಯಿದಲ್ಲವೆ?

## ನಿಸರ್ಗದತ್ತ ಮಹಾರಾಜ್ ಅವರ ಶಿಷ್ಯರಾಗಿ

ಕಾಂಗ್ರೆಸ್‌ನ ಸೇವಾಗ್ರಾಮದ ಚಟುವಟಿಕೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡ ಕಾಲದಲ್ಲೆ ಫ್ರೀಡ್‌ಮನ್‌ರವರಿಗೆ ಮುಂಬಯಿಯಲ್ಲಿ ಮತ್ತೊಬ್ಬ ಆಧ್ಯಾತ್ಮಿಕ ಸಾಧಕರಾದ ನಿಸರ್ಗದತ್ತ ಮಹಾರಾಜ ಅವರ ವಿಚಾರ ಪರಿಚಯವಾಗಿ ಆ ವಿಚಾರಗಳ ಸಂಗ್ರಹದಲ್ಲಿ ತೊಡಗುತ್ತಾರೆ. ಮುಂದೆ ಫ್ರೀಡ್‌ಮನ್, ಅವರನ್ನು ಭೇಟಿಯಾಗಿ ನಡೆಸಿದ ದೀರ್ಘ ಮಾತುಕತೆಯ ನಂತರ ಈ ವ್ಯಕ್ತಿ ತನ್ನ ಚಿಂತನೆಗಳನ್ನು ಸಂಪೂರ್ಣವಾಗಿ ಗ್ರಹಿಸಿದ್ದಾನೆ ಎಂದು ನಿಸರ್ಗದತರಿಗೆ ಮನದಟ್ಟಾದಾಗ ಅವರು ತಮ್ಮ ಚಿಂತನೆಗಳನ್ನು ಅಧಿಕೃತವಾಗಿ ಪ್ರಕಟಿಸಲು ಫ್ರೀಡ್‌ಮನ್‌ರಿಗೆ ಅನುಮತಿ ನೀಡುತ್ತಾರೆ. ಅದೇ ಬಹುವಿಖ್ಯಾತ ಅಧ್ಯಾತ್ಮ ಗ್ರಂಥ 'ಐಯಾಮ್ ದಟ್". ಫ್ರೀಡ್‌ಮನ್ ಕಾಲವಾದ ಎಷ್ಟೋ ವರ್ಷಗಳ ನಂತರ ಗಾಡ್‌ಮನ್ ನಿಸರ್ಗದತ್ತರನ್ನು ಭೇಟಿಯಾದಾಗ ನಿಮ್ಮ ಶಿಷ್ಯಂದಿರಲ್ಲಿ ನಿಜವಾದ ಜ್ಞಾನಿ ಯಾರು ಎಂದು ಕೇಳಿದಾಗ ಮಾರಿಷ್ ಮಾತ್ರ ಎಂದು ಹೇಳುತ್ತಾರೆ. ಅಷ್ಟು ಮಾತ್ರವಲ್ಲ ಗಾಡ್‌ಮನ್ ನಿಸರ್ಗದತ್ತರು ಪ್ರತಿನಿತ್ಯ ಕುಂಕುಮವಿಟ್ಟು ಪೂಜಿಸುತ್ತಿದ್ದ ಹಲವು ಸಂತರ ಫೋಟೋಗಳಲ್ಲಿ ಮಾರಿಷ್‌ರವರ ಫೋಟೋ ಸಹ ಇದ್ದುದನ್ನು ಕಂಡು ಬೆರಗಾಗುತ್ತಾರೆ.

## ರಮಣ ಮಹರ್ಷಿಗಳ ಸನ್ನಿಧಿಯಲ್ಲಿ

ಮಾರಿಷ್ ಫ್ರೀಡ್‌ಮನ್ ಒಬ್ಬ ನೂರಕ್ಕೆ ನೂರರಷ್ಟು ಕಾಯಕ ಜೀವಿ. ಯಾವುದೇ ಚಿಂತನೆ ಕಾರ್ಯರೂಪಕ್ಕೆ ಬರದಿದ್ದರೆ ಅದು ಎಷ್ಟೇ ಉದಾತ್ತ ಚಿಂತನೆಯಾದರೂ ನಿರರ್ಥಕ ಎನ್ನುವುದು ಅವರ ಬಲವಾದ ನಂಬಿಕೆಯಾಗಿತ್ತು. ಹಾಗಾಗಿ ರಮಣರ ಬಗ್ಗೆ ಅವರು ಸಾಕಷ್ಟು ಕೇಳಿದ್ದರೂ ಸಹ ಅವರು ಏನನ್ನೂ ಮಾಡದೆ ಸದಾಕಾಲವೂ ಬೆಟ್ಟದ ಮೇಲೆ ಕುಳಿತೆ ಇರುತ್ತಾರೆ ಎನ್ನುವ ಕಾರಣದಿಂದ ಸ್ವಲ್ಪ ನಿರುತ್ಸಾಹದಿಂದಲೇ ಅವರನ್ನು ಭೇಟಿಯಾಗುತ್ತಾರೆ. ಡೇವಿಡ್ ಗಾಡ್‌ಮನ್ ದಾಖಲಿಸುವಂತೆ ರಮಣರನ್ನು ಹೋಗಿ ನೋಡಿದ ಕ್ಷಣದಿಂದಲೇ ಫ್ರೀಡ್‌ಮನ್‌ರಿಗೆ ಅವರ ಹಳೆಯ ಅಭಿಪ್ರಾಯಗಳೆಲ್ಲ ತಲೆಕೆಳಗಾಗಿ ಮಹರ್ಷಿಗಳ ಸಾನ್ನಿಧ್ಯದಲ್ಲೇ ಸದಾಕಾಲವೂ ತಾನಿರಬೇಕು ಎನ್ನುವ ಉತ್ಕಟ ಬಯಕೆಯಾಗಿ ಬಹಳಷ್ಟು ಕಾಲ ತಿರುವನ್ನಾಮಲೈಯಲ್ಲಿಯೆ ಉಳಿದುಬಿಡುತ್ತಾರೆ. ಅವರನ್ನು ನೋಡಿದ ಮಹರ್ಷಿಗಳು 'ಇವನು ಈ ದೇಶಕ್ಕೆ ಸೇರಿದವನೆ, ಯಾವುದೋ ಕಾರಣದಿಂದ ಬೇರೆ ದೇಶದಲ್ಲಿ ಹುಟ್ಟಿದ್ದಾನೆ, ಈಗ ಇಲ್ಲಿಗೆ ಬಂದಿದ್ದಾನೆ ಮತ್ತು ಮುಂದೆ ಇಲ್ಲಿಯೆ ಇರುತ್ತಾನೆ' ಎಂದು ಹೇಳಿದರಂತೆ. ತಾನು ಹೇಳುತ್ತಿದ್ದುದನ್ನು ಸಂಪೂರ್ಣವಾಗಿ ಗ್ರಹಿಸುತ್ತಿದ್ದ ಫ್ರೀಡ್‌ಮನ್‌ರ ಸಾಮರ್ಥ್ಯವನ್ನು ಅರಿತ ಮಹರ್ಷಿಗಳು ತಮ್ಮ ಉಪದೇಶಗಳನ್ನು ವಿದೇಶಿಯರಿಗೆ ಇಂಗ್ಲಿಷ್‌ನಲ್ಲಿ ವಿವರಿಸಲು ಅವರಿಗೆ ಮಾತ್ರ ಅನುಮತಿ ನೀಡುತ್ತಾರೆ.

ರಮಣಾಶ್ರಮದಲ್ಲಿ ನಡೆದ ಒಂದು ಘಟನೆ ಫ್ರೀಡ್‌ಮನ್ ಎಂತಹ ಹಠಮಾರಿ ಎನ್ನುವುದನ್ನು ತೋರಿಸುತ್ತದೆ. ರಮಣರ ಕೃಶ ಶರೀರವನ್ನು ನೋಡಿದ ಫ್ರೀಡ್‌ಮನ್‌ಗೆ ಅವರಿಗೆ ಪೌಷ್ಠಿಕ ಆಹಾರದ ಅಗತ್ಯವಿದೆ ಎನಿಸಿ ಕಿತ್ತಳೆ ಹಣ್ಣಿನ ರಸವನ್ನು ತಯಾರಿಸಿ ರಮಣರಿಗೆ ಕೊಡುತ್ತಾರೆ. ಆದರೆ ಜೊತೆಯವರನ್ನು ಬಿಟ್ಟು ತಾವೊಬ್ಬರೆ ಏನನ್ನೂ



ರಮಣ ಮಹರ್ಷಿ ನಿಸರ್ಗದತ್ತ ಮಹಾರಾಜ್ ದಲೈಲಾಮಾ

ಸೇವಿಸುವ ಅಭ್ಯಾಸವಿರದಿದ್ದ ರಮಣರು ಅಲ್ಲಿದ್ದ ಸುಮಾರು ೨೦೦ ಜನರ ಕಡೆ ತೋರಿಸಿ ಅವರಿಗೆಲ್ಲ ಎಲ್ಲಿ? ಎಂದು ಕೇಳಿ ಅದನ್ನು ಕುಡಿಯಲು ನಿರಾಕರಿಸುತ್ತಾರೆ. ಮಹರ್ಷಿಗಳಿಗೆ ಕಿತ್ತಳೆ ರಸವನ್ನು ಕುಡಿಸಲೇಬೇಕೆಂದು ಪಣತೊಟ್ಟ ಫ್ರೀಡ್‌ಮನ್ ಹತ್ತಿರದ ಪೇಟೆಗೆ ಹೋಗಿ ಅಲ್ಲಿದ್ದ ಎಲ್ಲ ಅಂಗಡಿಗಳಲ್ಲೂ ಇದ್ದ ಕಿತ್ತಳೆ ಹಣ್ಣುಗಳನ್ನು ಕೊಂಡು ತಾನೆ ಸ್ವತಃ ಅವುಗಳನ್ನು ಕೈಯಲ್ಲಿ ಹಿಂಡಿ ಎಲ್ಲರಿಗೂ ಕಿತ್ತಳೆ ಪಾನೀಯವನ್ನು ಕೊಡುತ್ತಾರೆ. ಮುಂದೆ ರಮಣರ ಚಿಂತನೆಗಳ ಸಂಗ್ರಹವನ್ನು 'ಗಾಸ್ಪೆಲ್ ಆಫ್ ಮಹರ್ಷಿ' ಎನ್ನುವ ಹೆಸರಿನಲ್ಲಿ ಅವರು ಪ್ರಕಟಿಸುತ್ತಾರೆ.

ಇನ್ನು ಮುವತ್ತರ ದಶಕದ ಕೊನೆಯ ಹೊತ್ತಿಗೆ ಆರಂಭವಾದ ಎರಡನೇ ಮಹಾಯುದ್ಧದ ಪರಿಣಾಮವಾಗಿ ಪೋಲೆಂಡ್‌ನಲ್ಲಿ ಸಾವಿರಾರು ಜನ ನಿರ್ವಸಿತರಾದಾಗ ಫ್ರೀಡ್‌ಮನ್ ತಮ್ಮದೇ ದೇಶದ ವಾಂಡಾ ಡೈನೊಸ್ಕಿ ಎಂಬ ಮಹಿಳೆಯೊಂದಿಗೆ ಸೇರಿ (ಇವರು ಮುಂದೆ ಉಮಾದೇವಿ ಎಂಬ ಹೆಸರೊನೊಂದಿಗೆ ಭಾರತದಲ್ಲೇ ನೆಲೆಸುತ್ತಾರೇ) ಭಾರತವೂ ಸೇರಿದಂತೆ ಹಲವು ದೇಶಗಳಲ್ಲಿ ಆಶ್ರಯ ಒದಗಿಸುವುದರಲ್ಲಿ ತೊಡಗಿಕೊಳ್ಳುತ್ತಾರೆ. ಆಗಲೇ ಎರಡೂ ದೇಶಗಳು ತಂತಮ್ಮ ಆಧ್ಯಾತ್ಮಿಕ ಚಿಂತನೆಗಳನ್ನು ಅನುವಾದಗಳ ಮೂಲಕ ಪರಸ್ಪರ ವಿನಿಮಯ ಮಾಡಿಕೊಳ್ಳುವ ಉದ್ದೇಶದ *ಇಂಡೋ-ಪೋಲಿಷ್ ಗ್ರಂಥಾಲಯ*ವನ್ನು ಸ್ಥಾಪಿಸುತ್ತಾರೆ.

## ದಲೈಲಾಮಾರಿಗಾಗಿ ನೆಹರೂ ಮುಂದೆ ಸತ್ಯಾಗ್ರಹ

ಮೊರಿಷ್ ಫ್ರೀಡ್‌ಮನ್‌ರವರ ಮತ್ತೊಂದು ಮಹತ್ಸಾಧನೆ ಎಂದರೆ ದಲೈಲಾಮ ಅವರಿಗೆ ಭಾರತವು ಆಶ್ರಯ ಕೊಡುವಂತೆ ಮಾಡಿದ್ದು. ಚೀನಾ ಟಿಬೆಟ್‌ನ್ನು ಆಕ್ರಮಿಸಿಕೊಂಡಾಗ ಟಿಬೆಟ್‌ನಿಂದ ಬಂದ ಲಕ್ಷಾಂತರ ನಿರಾಶ್ರಿತರಿಗೆ, ಮುಖ್ಯವಾಗಿ ದಲೈಲಾಮ ಅವರಿಗೆ ಭಾರತದಲ್ಲಿ ಆಶ್ರಯ ಕೊಡುವಂತೆ ಕೋರಲು ಅವರು ಪ್ರಧಾನಿ ನೆಹರೂರವರನ್ನು ಭೇಟಿಯಾಗಲು ಬಯಸುತ್ತಾರೆ. ಆದರೆ ಅದು ಸಾಧ್ಯವಾಗದೆ ಅವರು ಭೇಟಿಯಾಗುವವರೆಗೂ ಪ್ರಧಾನಿಯ ಕಛೇರಿಯ ಹೊರಗೆ ಸತ್ಯಾಗ್ರಹ ರೂಪದ ಧರಣಿ ಆರಂಭಿಸಿಬಿಡುತ್ತಾರೆ.. ಅವರ ಆಗ್ರಹಕ್ಕೆ ಮಣಿದ ನೆಹರು ಅವರನ್ನು ಭೇಟಿಯಾಗುತ್ತಾರಾದರೂ ಇವರ ಬೇಡಿಕೆಯನ್ನು, ಅದು ಚೀನಾ ದೇಶದ ಅಸಮಾಧಾನಕ್ಕೆ ಕಾರಣವಾದೀತೆಂಬ ಆತಂಕದಿಂದ ಒಪ್ಪಲು ಹಿಂಜರಿಯುತ್ತಾರೆ. ಆದರೆ ಮಾತುಕತೆ ಮುಂದುವರೆದು ದಲಲಾಮ ಭಾರತಕ್ಕೆ ಧರ್ಮಪ್ರಚಾರಕ್ಕೆ ಬರಬಹುದೇ ಹೊರತು ಯಾವುದೇ ರಾಜಕೀಯ ಚಟುವಟಿಕೆಯಲ್ಲಿ ತೊಡಗುವಂತಿಲ್ಲ ಎನ್ನುವ ನಿಬಂಧನೆಯೊಂದಿಗೆ ನೆಹರು ಒಪ್ಪಿಗೆ ಸೂಚಿಸುತ್ತಾರೆ. ಇಷ್ಟಲ್ಲದೆ ದಲೈಲಾಮಾರ ಜೊತೆಗೇ ಟಿಬೆಟ್ ನಿರಾಶ್ರಿತರಿಗೆ ಆಶ್ರಯವನ್ನು ಕೊಡಿಸುವಲ್ಲೂ ಸಫಲಗುತ್ತಾರೆ. ಉಮಾದೇವಿಯವರೊಂದಿಗೆ ಸೇರಿ ಭಾರತದಾದ್ಯಂತ ಸಂಚರಿಸಿ ತಮ್ಮ ಶ್ರೀಮಂತ ಮಿತ್ರರ ಮನವೊಲಿಸಿ ಭೂಮಿ ಪಡೆದು ಅಲ್ಲೆಲ್ಲ ಟಿಬೆಟ್ ನಿರಾಶ್ರಿತರಿಗೆ ವಸತಿ ಕಲ್ಪಿಸುವ ವ್ಯವಸ್ಥೆ ಮಾಡುತ್ತಾರೆ.

ದಲೈಲಾಮಾರವರ ಭಾರತದ ಮೊದಲ ಭೇಟಿ ಸುಲಭವಾಗಿರಲಿಲ್ಲ. ಪ್ರಧಾನಿ ನೆಹರೂರವರಿಂದ ಅಧಿಕೃತ ಒಪ್ಪಿಗೆ ಸಿಗುವವರೆಗೂ ಅವರಿಗೆ ಎಲ್ಲಿ ಆಶ್ರಯ ಕಲ್ಪಿಸುವುದು ಎನ್ನುವ ಸಮಸ್ಯೆ ಉದ್ಭವವಾದಾಗ ಮಾರಿಷ್‌ರಿಗೆ ನೆನಪಾದದ್ದು ಔಂದ್ ಪ್ರಾಂತ್ಯದ ಮಾಜಿ ರಾಜಕುಮಾರ ಅಪಾ ಪಂತ್. ಪಂತ್ ಆಗ ತಮ್ಮ ಉನ್ನತ ವಿದ್ಯಾಭ್ಯಾಸ ಮುಗಿಸಿ ಆಗಿನ ಸ್ವತಂತ್ರ ಸಿಕ್ಕಿಮ್ ರಾಜ್ಯದ ರಾಯಭಾರಿ ಕಛೇರಿಯಲ್ಲಿ ಭಾರತದ ಪ್ರತಿನಿಧಿಯಾಗಿರುತ್ತಾರೆ. ದಲೈಲಾಮರಿಗೆ ಅಲ್ಲಿಯೆ ಉಳಿದುಕೊಳ್ಳುವ ವ್ಯವಸ್ಥೆ ಮಾಡಿದ ಫ್ರೀಡ್‌ಮನ್ ಅವರ ಉಟೋಪಚಾರಗಳ ವ್ಯವಸ್ಥೆಗೆಂದು ಉಮಾದೇವಿಯರನ್ನು ಕಳಿಸುತ್ತಾರೆ. ಫ್ರೀಡ್‌ಮನ್ ತೀರಿಕೊಂಡ ಎಷ್ಟೋ ವರ್ಷಗಳ ನಂತರ ದಲೈಲಾಮಾ ಪೋಲೆಂಡ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಫ್ರೀಡ್‌ಮನ್ ಹಾಗೂ ಉಮಾದೇವಿಯವರ ಬಗ್ಗೆ ಕೃತಜ್ಞತಾಪೂರ್ವಕವಾಗಿ ಮಾತನಾಡಿದಾಗ ಪೋಲೆಂಡ್‌ನ ಜನ ಇವರಿಬ್ಬರ ಬಗ್ಗೆ ಮೊದಲಬಾರಿಗೆ ಕೇಳುತ್ತಿರುವುದಾಗಿ ಅಚ್ಚರಿ ವ್ಯಕ್ತಪಡಿಸಿದರಂತೆ.

ಮಾರಿಷ್ ಫ್ರೀಡ್‌ಮನ್ ಮುಂಬಯಿಯಲ್ಲಾದ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಹಾಸಿಗೆ ಹಿಡಿಯುತ್ತಾರೆ. ಒಂದು ದಿನ ವೃತ್ತಿಪರ ದಾದಿಯೊಬ್ಬಳು ಬಂದು ರಾತ್ರಿ ಕನಸಿನಲ್ಲಿ ಬಂದ ಯೋಗಿಯೊಬ್ಬರು ನಾನು ನಿಮ್ಮ ಆರೈಕೆ ಮಾಡಬೇಕೆಂದು

(೧೧ನೇ ಪುಟಕ್ಕೆ

# ಗಾಂಧಿ ಧರ್ಮ

ಗಾಂಧಿ ಕಥೆ-೩



ಗಾಂಧಿ ಸಬರ್ಮತಿಯ ಸತ್ಯಾಗ್ರಹ ಆಶ್ರಮದಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ವರ್ಷದಲ್ಲೇ (೧೯೨೬) ಆಶ್ರಮವಾಸಿಗಳಿಗಾಗಿ ಭಗವದ್ಗೀತೆ, ನಂತರ ಗುಜರಾತ್ ವಿದ್ಯಾಪೀಠದಲ್ಲಿ ಬೈಬಲ್ ಕುರಿತು ಪ್ರವಚನಗಳನ್ನು ನೀಡಿದರು. ೧೯೨೬ರ ಮಾರ್ಚ್ ತಿಂಗಳಲ್ಲಿ ಆರಂಭವಾದ ಈ ಉಪನ್ಯಾಸ ಮಾಲೆ, ತಮ್ಮ ಬಾಲ್ಯದಿಂದಲೂ ನಿರಂತರವಾಗಿ ತಮಗೆ ಸ್ಫೂರ್ತಿಯಾಗಿ, ಮಾರ್ಗದರ್ಶಕ ಶಕ್ತಿಯಾಗಿ ಉಳಿದಿದ್ದ ಗೀತೆಯ ತಾತ್ಪರ್ಯವನ್ನು ತಾವು ಅರ್ಥ ಮಾಡಿಕೊಂಡಂತೆ ನಿರೂಪಿಸುತ್ತಾ ಹೋದರು. ಗೀತೆಯನ್ನು ಒಂದು ರೂಪಕವಾಗಿ ನೋಡಬೇಕೆಂದು ಹೇಳಿದ ಅವರು, ಇದರಲ್ಲಿ ಅರ್ಜುನನಿಗೆ ಎಲ್ಲದರ ಮೋಹವನ್ನೂ ತೊರೆದು ಸ್ಥಿತಪ್ರಜ್ಞನಾಗಲು ಹೇಳುವ ಕೃಷ್ಣ, ವಾಸ್ತವದಲ್ಲಿ ಯುದ್ಧವನ್ನು ಬೋಧಿಸಲಾರ ಎಂದು ಅಭಿಪ್ರಾಯಪಟ್ಟರು. ಅಲ್ಲಿ ಚಿತ್ರಿತವಾಗಿರುವ ಯುದ್ಧಭೂಮಿ ಮನೋಭೂಮಿಯಾಗಿದ್ದು, ಅಲ್ಲಿ ಬರುವ ಪಾತ್ರಗಳು ಮನುಷ್ಯನ ವಿವಿಧ ಮನೋವೃತ್ತಿಗಳ ಸಂಕೇತಗಳನ್ನಾಗಿ ಗ್ರಹಿಸಬೇಕೆಂದು ಅವರು ಹೇಳಿದರು. ಹಾಗಾಗಿ ಅಲ್ಲಿ ನಡೆಯುವ ಯುದ್ಧ, ವಿವಿಧ ಮನೋವೃತ್ತಿಗಳ ನಡುವಣ ಚಿತ್ರಣ ಮಾತ್ರವಾಗಿದ್ದು ಯಾವ ಕಾರಣಕ್ಕೂ ಅದನ್ನು ಹಿಂಸಾಪರವಾದ ಭೌತಿಕ ಯುದ್ಧವೆಂದು ಪರಿಗಣಿಸಬಾರದೆಂಬುದು. ಅದರ ಒಟ್ಟು ವ್ಯಾಖ್ಯಾನಕ್ಕಾಗಿ ಅವರು ಬುದ್ಧ, ಯೇಸು, ಮಹಮ್ಮದ್, ಚೈತನ್ಯ ಮಹಾಪ್ರಭು, ಗುಜರಾತಿ ಕವಿ ನರಸಿಂಹ ಮೆಹತಾ, ಮುಂತಾದವರ ಉಪದೇಶಗಳನ್ನು ವ್ಯಾಪಕವಾಗಿ ಬಳಸಿದರು. ಗೀತೆಯಲ್ಲಿ ಉಲ್ಲೇಖವಾಗುವ ಕರ್ಮವೆಂದರೆ ಜೀವನೋಪಾಯಕ್ಕಾಗಿ ಮಾಡುವ ಕೆಲಸವಾಗಿರದೆ, ಜ್ಞಾನಾನ್ವೇಷಣೆಯ ಭಾಗವಾಗಿ ಮಾಡುವ ಕೆಲಸ ಎಂದು ಅರ್ಥೈಸಿದರು. ಹಾಗೇ ಯಜ್ಞವೆಂದರೆ ಪುರಾತನ ಕಾಲದಲ್ಲಿ ಯಾವುದೋ ಉದ್ದೇಶಕ್ಕಾಗಿ ದೇವತೆಗಳ ಸಂಪ್ರೀತಿಗೆಂದು ನಡೆಸಲಾಗುತ್ತಿದ್ದ ಪಶುಬಲಿಯ ಆಚರಣೆಯೆಂದು ಅರ್ಥೈಸದೆ, ಈಗ ಪ್ರಾಣಿದಯೆಯನ್ನು ರೂಢಿಸಿಕೊಂಡಿರುವ ನಾವು ಅದನ್ನು ಮಾನಸಿಕ ಸಂಕಲ್ಪದ ರೂಪದಲ್ಲಿ ಆಚರಿಸಬೇಕಾಗಿದೆ ಎಂದರು. ಗೀತೆ ರಚಿತವಾದ ಕಾಲದಲ್ಲಿ ಜನಕಲ್ಯಾಣಕ್ಕಾಗಿ ಕಾಡು ಕಡಿಯುವುದನ್ನು ಯಜ್ಞವೆಂದು ಕರೆಯಲಾಗುತ್ತಿತ್ತು. ಇಂದು ಜನಕಲ್ಯಾಣಕ್ಕಾಗಿ ಚರಕಾ ತಿರುಗಿಸುವುದು ಯಜ್ಞವಾಗಬೇಕು ಎಂದು ಪ್ರತಿಪಾದಿಸಿದ ಅವರು, ವ್ಯಾಸನ ಶಬ್ದಗಳಿಗೆ ನಮ್ಮ ಕಾಲಕ್ಕೆ ಅಗತ್ಯವಾದ ಅರ್ಥ ನೀಡುವುದು, ತಂದೆಯ ವಾರಸುದಾರಿಕೆಯನ್ನು ಮಗ ಸುಧಾರಿಸುವುದು ಹೇಗೆ ತಪ್ಪಾಗುವುದಿಲ್ಲವೋ ಹಾಗೆ ತಪ್ಪೆನಿಸುವುದಿಲ್ಲ ಎಂದು ಹೇಳಿದರು. ಗೀತೆ ಮನಸ್ಸಿಗೆ ಅಮೃತಪ್ರಾಯವಾಗಿದ್ದರೆ, ಚರಕ ದೇಹಕ್ಕೆ ಅಮೃತಪ್ರಾಯವಾಗಿದ್ದು, ಚರಕದ ಮೂಲಕವೇ ಸ್ವರಾಜ್ಯ ಸಾಧಿಸಬಹುದೆಂಬ ಕರೆಯೊಂದಿಗೆ ತಮ್ಮ ಉಪನ್ಯಾಸ ಮಾಲೆಯನ್ನು ಮುಕ್ತಾಯಗೊಳಿಸಿದರು. ಜೊತೆಗೆ ಆಶ್ರಮವಾಸಿಗಳೂ ಗೀತೆಯಿಂದ ಪ್ರೇರಣೆ ಪಡೆದು ತನ್ನದೆನ್ನುವ ಎಲ್ಲ ಮೋಹಗಳನ್ನೂ ತೊರೆದು ನಿಷ್ಕಾಮ ಕರ್ಮದಲ್ಲಿ ತೊಡಗಬೇಕೆಂದು ಸಲಹೆ ಮಾಡಿದರು.

ಭಗವದ್ಗೀತೆ ಕುರಿತ ಪ್ರವಚನದ ನಂತರ ಗಾಂಧಿ, ಆಗಸ್ಟ್‌ನಲ್ಲಿ ಗುಜರಾತ್ ವಿದ್ಯಾಪೀಠದ ವಿದ್ಯಾರ್ಥಿಗಳಿಗಾಗಿ ಗೀತೆಯ ನಂತರ ತಮಗೆ ಬಹುಪ್ರಿಯವಾಗಿದ್ದ ಧರ್ಮಗ್ರಂಥವಾಗಿದ್ದ ಬೈಬಲ್ ಕುರಿತು ಪ್ರವಚನ ಆರಂಭಿಸಿದರು. ಇದಕ್ಕೆ ಪತ್ರಿಕೆಯೊಂದರಲ್ಲಿ ಸಂಪ್ರದಾಯವಾದಿಗಳಿಂದ ತೀವ್ರ ವಿರೋಧ ವ್ಯಕ್ತವಾದಾಗ, ಗಾಂಧಿ ಇದನ್ನು ತಾವು ವಿದ್ಯಾರ್ಥಿಗಳ ಅಪೇಕ್ಷೆಯ ಮೇರೆಗೇ ಆರಂಭಿಸಿರುವುದಾಗಿ ಉತ್ತರಿಸುತ್ತಾ, ಅನ್ಯ ಧರ್ಮಗಳ ತಿಳುವಳಿಕೆ ಸ್ವಧರ್ಮದ ತಿಳುವಳಿಕೆಯನ್ನು ಹೇಗೆ ಹೆಚ್ಚಿಸುತ್ತದೆ ಎಂಬುದನ್ನು ವಿವರಿಸಿದರು. ತಾವೊಬ್ಬ ಸನಾತನ ಹಿಂದೂವಾಗಿರುವುದರಿಂದಲೇ ಇತರ ಧರ್ಮಗಳ ಗ್ರಂಥಗಳನ್ನು ಗೌರವಿಸಿ ಅಧ್ಯಯನ ಮಾಡುತ್ತಿರುವುದಾಗಿ ಹೇಳಿದ ಅವರು, ಪುರಾತನ ಗ್ರಂಥವೊಂದು ಅಥವಾ ಸಂಸ್ಕೃತದ ರಚನೆಯೊಂದು ಹೇಳಿದೆ ಎಂದು ಕೆಟ್ಟದ್ದನ್ನು ಒಳ್ಳೆಯದೆಂದು ಒಪ್ಪಿಕೊಳ್ಳುವ ಸಂಕುಚಿತ ಮನಸ್ಸಿನ ಪಾಶಂಡಿ ಸನಾತನ ಹಿಂದೂವಲ್ಲ ಎಂದು ಘೋಷಿಸಿದರು. ಪರಲೋಕದಲ್ಲಿ ಹಿಂದು-ಮುಸ್ಲಿಂ-ಕ್ರಿಶ್ಚಿಯನ್ ಇತ್ಯಾದಿ ಹಣೆಪಟ್ಟಿಗಳಿರುವುದಿಲ್ಲವಾದರೂ, ಈ ಲೋಕದಲ್ಲಿ ಇಂತಹ ಹಣೆಪಟ್ಟಿಯೊಂದು ಅನಿವಾರ್ಯವಾಗಿರುವುದರಿಂದ, ತಾವು ತಮ್ಮ ಹಿರಿಯರ ಹಣೆಪಟ್ಟಿಯನ್ನು ಉಳಿಸಿಕೊಂಡಿದ್ದು, ಅದು ತಮ್ಮ ವ್ಯಕ್ತಿತ್ವದ ಬೆಳವಣಿಗೆ ಮತ್ತು ಇತರ ಧರ್ಮಗಳಲ್ಲಿನ ಒಳ್ಳೆಯದನ್ನು ತನ್ನ ಧರ್ಮದೊಳಕ್ಕೆ ಅನುಸಂಧಾನ ಮಾಡಿಕೊಳ್ಳಲು ಅಡ್ಡಿಯಾಗದು ಎಂದು ಅವರು ಸ್ಪಷ್ಟಪಡಿಸಿದರು. ಯಾವುದೇ ಧರ್ಮ ಪರಿಪೂರ್ಣವಲ್ಲ; ಪ್ರತಿಯೊಂದರಲ್ಲೂ ದೋಷಗಳನ್ನು ಕಾಣಬಹುದು ಎಂದ ಗಾಂಧಿ, ಯಾವುದೇ ಧರ್ಮದ ಮನುಷ್ಯ ಇನ್ನೊಂದು ಧರ್ಮದಲ್ಲಿನ ಒಳ್ಳೆಯ ಅಂಶಗಳನ್ನು ಮೆಚ್ಚಿ ಅದಕ್ಕೆ ಮತಾಂತರವಾಗುವುದಕ್ಕಿಂತ ತಾನು ಮೆಚ್ಚಿದ ಆ ಧರ್ಮದ ಅಂಶಗಳನ್ನು ತನ್ನ ಧರ್ಮದೊಳಕ್ಕೆ ಅಳವಡಿಸಿಕೊಂಡು ತನ್ನ ಧರ್ಮದ ಉತ್ತಮ ಮನುಷ್ಯನಾಗುವುದೇ ಹೆಚ್ಚು ಸಾಧು ಎಂದು ಅಭಿಪ್ರಾಯಪಟ್ಟರು.

## ಪ್ರಾಣಿ ಹತ್ಯೆ ಮತ್ತು ಅಹಿಂಸೆಯ ಅರ್ಥ

ಧರ್ಮ ಸಮನ್ವಯ ಕುರಿತ ಗಾಂಧಿಯವರ ಈ ಸಂಕಥನದಂತೆಯೇ ಅಹಿಂಸೆಯನ್ನು ಕುರಿತ ಅವರ ಸಂಕಥನದ ಸಂಕೀರ್ಣತೆ ಬಿಚ್ಚಿಕೊಳ್ಳುವ ಸಂದರ್ಭಗಳು ಇದೇ ಅವಧಿಯಲ್ಲಿ ಒದಗಿ ಬಂದವು. ಒಮ್ಮೆ ಹತೋಟಿಗೆ ಸಿಗದ ಬಿಡಾಡಿ ನಾಯಿಗಳ ದೊಡ್ಡ ಹಿಂಡೊಂದು ಗಾಂಧಿಯವರ ಮಿತ್ರ ಅಂಬಾಲಾಲ್ ಸಾರಾಭಾಯಿಯವರ ಜವಳಿ ಗಿರಣಿಯ ಆವರಣದ ಗೋಡೆಗಳನ್ನು ಹಾರಿ ಬಂದು ಹಾವಳಿ ನಡೆಸತೊಡಗಿದವು. ಹಾವಳಿಯನ್ನು ತಡೆಯಲಾಗದ ಅಂಬಾಲಾಲ್ ಆ ನಾಯಿಗಳನ್ನು ಕೊಲ್ಲಿಸಿದರು. ಇದರಿಂದ ಕುಪಿತರಾದ ಕೆಲ ಜೈನರು ಅಂಬಾಲಾಲರ ಮೇಲೆ ಪ್ರಾಣಿ ಹಿಂಸೆಯ ಆರೋಪ ಹೊರಿಸಿ, ಗಾಂಧಿಯವರ ಮಧ್ಯಸ್ಥಿಕೆಯಲ್ಲಿ ಅಂಬಾಲಾಲರಿಗೆ ಶಿಕ್ಷೆ ತೀರ್ಮಾನಿಸಬಯಸಿದರು. ಆದರೆ ಅವರ ಆಶ್ಚರ್ಯಕ್ಕೆ ಗಾಂಧಿ, ಅಂಬಾಲಾಲರ ಕ್ರಮವನ್ನು ಸಮರ್ಥಿಸಿದರು. ಇದು ಬಹಳ ಜನರ ಆಶ್ಚರ್ಯ ಮತ್ತು ಕೆಲವರ ಅಸಮಾಧಾನಕ್ಕೆ ಕಾರಣವಾದಾಗ, ಅವರು ನವಜೀವನ ಮತ್ತು ಯಂಗ್ ಇಂಡಿಯಾ ಪತ್ರಿಕೆಗಳಲ್ಲಿ ತಮ್ಮ ಸಮರ್ಥನೆಯನ್ನು ವಿವರಿಸಿ ಲೇಖನಗಳನ್ನು ಬರೆದರು. ಅವರ ವಾದದ ಸಾರಾಂಶ ಹೀಗಿತ್ತು: ಒಂದು ತತ್ವದ ಪರಿಪೂರ್ಣತೆ, ಅಪರಿಪೂರ್ಣವಾದ ಲೋಕದಲ್ಲಿ ಮತ್ತು ಅಪರಿಪೂರ್ಣವಾದ ಮನುಷ್ಯರಿಂದ ಸದಾ ರಾಜಿಯ ಮಿತಿಗಳಿಗಾಗಿ ಹುಡುಕಾಟ ನಡೆಸುತ್ತಿರುತ್ತದೆ. ತತ್ವದ ಪರಿಪೂರ್ಣತೆ ಕಾಡಿನಲ್ಲಿರುವ ಬೈರಾಗಿಯೊಬ್ಬನಿಂದ ಸಾಧ್ಯವಾಗಬಹುದೇನೋ. ಆದರೆ ಪಟ್ಟಣದ ಜನ ಅದನ್ನು ಒಂದು ಮಿತಿಯಲ್ಲಿ ಮಾತ್ರ ಸಾಧಿಸಲು ಸಾಧ್ಯ. ನಾಯಿಗಳನ್ನು ಕೊಲ್ಲುವುದು ಪಾಪವೇ ಸರಿ. ಆದರೆ ಕೊಲ್ಲದಿರುವುದು ಇನ್ನೂ ದೊಡ್ಡ ಪಾಪದಲ್ಲಿ ಪರಿಣಮಿಸುವಂತಹ ಪರಿಸ್ಥಿತಿ ಉಂಟಾಗಿದೆ. ಅಹಮದಾಬಾದದ ನಗರದ ಆಸ್ಪತ್ರೆಗಳಲ್ಲಿ ನಾಯಿ ಕಡಿತಗಳ, ವಿಶೇಷವಾಗಿ ಹುಚ್ಚುನಾಯಿ ಕಡಿತಗಳ ಪ್ರಮಾಣ ಗಣನೀಯವಾಗಿ ಏರಿ ಪರಿಸ್ಥಿತಿ ಆತಂಕ ಹುಟ್ಟಿಸಿದೆ.

ಇದೇ ಸಂದರ್ಭದಲ್ಲಿ, ಹಿಂದೊಮ್ಮೆ ಬೆಳೆ ಹಾಳು ಮಾಡುತ್ತಿದ್ದ ಕೋತಿಗಳನ್ನು ಬೇರೆ ನಿರ್ವಾಹವಿಲ್ಲದಿದ್ದಾಗ ಕೊಲ್ಲಲು ನೀಡಿದ್ದ ಗಾಂಧಿಯವರ ಸೂಚನೆಯನ್ನೂ ಮತ್ತು ಎರಡು ವರ್ಷಗಳ ನಂತರ, ಆಶ್ರಮದ ಒಂದು ಕರು ಗಾಯಗೊಂಡು ಬಹು ಕಾಲ ನರಳುತ್ತಿದ್ದುದನ್ನು ನೋಡಲಾಗದೆ ಅದಕ್ಕೆ ವೈದ್ಯರಿಂದ ಚುಚ್ಚುಮದ್ದು ನೀಡಿ ಸಾಯಿಸಿದ್ದ ಅವರ ಕ್ರಮವನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. ಮನುಷ್ಯರ ಹೃದಯ ಪರಿವರ್ತನೆಯನ್ನು ನಿರೀಕ್ಷಿಸಬಹುದು; ಆದರೆ ಪ್ರಾಣಿಗಳ ವಿಷಯದಲ್ಲಿ ಅದಾಗದು ಎಂದಿದ್ದ ಗಾಂಧಿ, ಕರುವನ್ನು ಕೊಲ್ಲಲು ನಿರ್ಧರಿಸಿದ್ದನ್ನು ಸಮರ್ಥಿಸಿಕೊಂಡದ್ದು ಹೀಗೆ: ಅಹಿಂಸೆ ಕುರಿತ ನಮ್ಮ ಜನರ ಕಲ್ಪನೆ ಎಷ್ಟು ಕುರುಡಾಗಿದೆ ಎಂದರೆ ಅದನ್ನು ಸರಿಯಾದ ಅರ್ಥದಲ್ಲಿ ಹರಡುವುದೇ ಕಷ್ಟವಾಗಿಬಿಟ್ಟಿದೆ. ಅಹಿಂಸೆ ಕುರಿತ ಈ ತಪ್ಪು ಗ್ರಹಿಕೆ ಎಂತಹ ಮನೋವಿಕಲತೆಯನ್ನು ಉಂಟುಮಾಡಿದೆ ಎಂದರೆ ಒರಟು ಮಾತು, ಹಗೆತನ, ಸೇಡು, ಕಟು ತೀರ್ಮಾನಗಳು ಮತ್ತು ಹಿಂಸಾ ವಕಾಲತ್ತುಗಳೆಲ್ಲ ಹಿಂಸೆ ಎಂಬ ಭಾವನೆಯನ್ನೇ ತೊಡೆದು ಹಾಕಿ ನಿಧಾನ ಹಿಂಸೆಯ ಅರಿವೇ ನಮಗೆ ಬಾರದಂತೆ ನಮ್ಮ ಸಂವೇದನೆಗಳನ್ನು ಮೊಂಡುಗೊಳಿಸಿಬಿಟ್ಟಿದೆ. ದುರ್ಬಲ ಜನರ ಹಸಿವು ಅವಮಾನ, ಶೋಷಣೆ, ಘನತೆ-ಗೌರವಗಳ ನಾಶಕ್ಕೆ ಕಾರಣವಾದ ನಮ್ಮ ದುರಾಸೆಯ ಜೀವನ ಕ್ರಮಗಳೂ ಹಿಂಸೆಯಲ್ಲವೆ?

ಈ ಬಗ್ಗೆ ನವಜೀವನ ಮತ್ತು ಯಂಗ್ ಇಂಡಿಯಾದಲ್ಲಿ ನಡೆದ ತೀವ್ರ ಬಿಸಿ ಬಿಸಿ ಚರ್ಚೆಯಲ್ಲಿ ಕೆಲವರು ಗಾಂಧಿಯನ್ನು ರೈತರ ಬೆಳೆಗಳನ್ನು ಹಾಳು ಮಾಡುವ ಕೀಟಗಳನ್ನು ಕೊಲ್ಲುವುದು ಅಹಿಂಸೆಯಾಗುವುದಾದರೆ ಸಾಮಾಜಿಕ ಅಪರಾಧಗಳಲ್ಲಿ ತೊಡಗುವ ಮಾನವ ಕೀಟಗಳನ್ನು ಕೊಲ್ಲುವುದು ಏಕೆ ಅಹಿಂಸೆಯಾಗಿ ಸಮರ್ಥನೀಯವೆನಿಸಬಾರದು ಎಂದು ಪ್ರಶ್ನಿಸಿದರು. ಅವರಿಗೆ ಗಾಂಧಿ ಈ ಹಿಂದೆ ತಾವು ಕೋತಿಗಳನ್ನು ಕೊಲಲ್ಲು ನೀಡಿದ್ದ ಕಾರಣವನ್ನು ಅವರಿಗೆ ಉತ್ತರವಾಗಿ ನೀಡಿ, ಮನುಷ್ಯರನ್ನು ಕೊಲ್ಲುವುದಕ್ಕೆ ಮನುಷ್ಯ-ಮನುಷ್ಯರ ನಡುವೆ ಸಾಧ್ಯವಾಗಬಲ್ಲ ಸಂವಾದದ ಅಗಾಧ ಸಾಧ್ಯತೆಗಳ ಮಾನವತೆಯ ಅರಿವು ಅವಕಾಶ ನೀಡುವುದಿಲ್ಲ ಎಂದು ಉತ್ತರಿಸಿದರು.

(ಮುಂದಿನ ಪುಟಕ್ಕೆ

# ಎರಡು ಶ್ರದ್ಧಾಂಜಲಿಗಳು

## ಸತ್ವಶಾಲಿ ಸಮಾಜವಾದಿ ರಘುವಂಶಪ್ರಸಾದ ಸಿಂಗ್



ಹಿರಿಯ ಸಮಾಜವಾದಿ ರಾಜಕಾರಣಿ ರಘುವಂಶ ಪ್ರಸಾದ್ ಸಿಂಗ್ ಇನ್ನಿಲ್ಲ ಎಂಬುದು ಕರ್ನಾಟಕದ ಬಹಳ ಜನರಿಗೆ ಗೊತ್ತೇ ಆಗಲಿಲ್ಲ. ಸುಮಾರು ಐವತ್ತು ವರ್ಷಗಳಷ್ಟು ದೀರ್ಘ ಅವಧಿಯ ಹೋರಾಟ ಮತ್ತು ಸಂಸದೀಯ ರಾಜಕಾರಣದ ಬದುಕು ನಡೆಸಿದ್ದ ಅವರ ಮರಣ ನಮ್ಮ ಪತ್ರಿಕೆಗಳಲ್ಲಿ ಎರಡು ಸಾಲಿನ ಸುದ್ದಿಯೂ ಆಗದಿದ್ದರೆ ಅದು ನಮ್ಮ ಇಂದಿನ ಈ ಪತ್ರಿಕೋದ್ಯಮ ಮುಟ್ಟಿರುವ ರಾಜಕೀಯ ತಿಳುವಳಿಕೆಯ ಕೊರತೆಯ ಮಟ್ಟದ ಸೂಚನೆಯೇ ಹೊರತು ರಘುವಂಶ ಪ್ರಸಾದರ ರಾಜಕೀಯ ಸಾಧನೆಯ ಕೊರತೆಯಲ್ಲ. ಏಕೆಂದರೆ ಇಂದು ಭಾರತಾದ್ಯಂತ ಗ್ರಾಮೀಣ ಬಡಜನತೆಯನ್ನು ಸಂಕಷ್ಟದ ಕಾಲದಲ್ಲಿ ಹಸಿವಿನಿಂದ ಪಾರು ಮಾಡುತ್ತಾ ಅವರ ನಿತ್ಯ ತುತ್ತಿಗೆ ಆಸರೆಯಾಗಿರುವ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಬಡತನ ನಿವಾರಣೆಯ ಹೆಸರಿನ ಇನ್ನೊಂದು ಸರ್ಕಾರಿ ಪ್ರದರ್ಶನದ ಯೋಜನೆಯಾಗಿ ಕಳೆದುಹೋಗದಂತೆ ಪಟ್ಟು ಹಿಡಿದು ಅದನ್ನು ಹಳ್ಳಿ ಹಳ್ಳಿಗೆ ತಲುಪಿಸಿದ ಸಾಧಕರಿವರು.

ಈ ಯೋಜನೆ ಸೋನಿಯಾ ಗಾಂಧಿಯವರ ರಾಷ್ಟ್ರೀಯ ಸಲಹಾ ಸಮಿತಿಯ ಕೊಡುಗೆಯಾದರೂ ರಘುವಂಶ ಪ್ರಸಾದ್ ಸಿಂಗ್ ಮೊದಲ ಯುಪಿಎ ಸರ್ಕಾರದಲ್ಲಿ ಲಾಲೂ ಪ್ರಸಾದ ಯಾದವ್ ಅವರ ರಾಷ್ಟ್ರೀಯ ಜನತಾ ದಳದ ಪ್ರತಿನಿಧಿಯಾಗಿ ಗ್ರಾಮೀಣ ಅಭಿವೃದ್ಧಿ ಮಂತ್ರಿಯಾಗಿದ್ದ ಇವರು (೨೦೦೪-೦೯) ಈ ಯೋಜನೆಗೆ ಮುಕ್ತ ಮಾರುಕಟ್ಟೆ ಆರ್ಥಿಕತೆಯ ಸಮರ್ಥಕರಾದ ಮನಮೋಹನ್ ಸಿಂಗ್ ಅವರ ನೇತೃತ್ವದ ಸರ್ಕಾರ ಮತ್ತು ಅವರ ಆಪ್ತ ಶಿಷ್ಯ ಮೋಂಟೆಕ್ ಸಿಂಗ್ ಅಹ್ಲೂವಾಲಿಯಾ ನೇತೃತ್ವದ ಯೋಜನಾ ಆಯೋಗ ಈ ಎರಡೂ, ಹಣದ ಕೊಸರಾಟ ನಡೆಸಿದಾಗಲೆಲ್ಲ ತಮ್ಮ ವಿಶಿಷ್ಟ ಗ್ರಾಮೀಣ ಕಸುವಿನ ವಾದಗಳ ಮೂಲಕ ಅಗತ್ಯ ಹಣ ಮಂಜೂರು ಮಾಡಿಸಿಕೊಂಡು ಈ ಯೋಜನೆಯನ್ನು ಆ ಯುಪಿಎ ಸರ್ಕಾರದ ಧ್ವಜ ಕಾರ್ಯಕ್ರಮವನ್ನಾಗಿ ಪರಿವರ್ತಿಸಿದರು. ಅಷ್ಟೇ ಅಲ್ಲ, ಅದನ್ನು ಒಂದು ಶಾಸನಾತ್ಮಕ ಯೋಜನೆಯನ್ನಾಗಿ ಮಾಡುವ ಸಂಸದೀಯ ಕೌಶಲ್ಯವನ್ನೂ ಪ್ರದರ್ಶಿಸಿ ತಮ್ಮ ಸಮಾಜವಾದಿ ತಾತ್ವಿಕತೆಯ ಕಟಿಬದ್ಧತೆಯನ್ನು ಮೆರೆದರು ಈ ಸರ್ಕಾರ ೨೦೦೯ರಲ್ಲಿ ಮತ್ತೆ ಅಧಿಕಾರಕ್ಕೆ ಬರದದ್ದೇ ಈ ಯೋಜನೆಯ ಯಶಸ್ಸಿನಿಂದಾಗಿ ಎಂಬುದು ರಾಜಕೀಯ ವಿಶ್ಲೇಷಕರ ಅಭಿಮತ. ಇಂದು ಮೋದಿ ಸರ್ಕಾರ ಈ ಯೋಜನೆಯನ್ನು ಕೊಸರಾಡಿಯಾದರೂ ಮುಂದುವರೆಸುತ್ತಿದ್ದರೆ ಅದಕ್ಕೆ ಮುಖ್ಯ ಕಾರಣ ಈ ಯೋಜನೆಯ ಶಾಸನಾತ್ಮಕ ಸ್ವರೂಪವೇ ಕಾರಣವಾಗಿದೆ.

೧೯೭೦ರ ದಶಕದಲ್ಲಿ ಜೆಪಿ ಚಳುವಳಿಯಲ್ಲಿ ಭಾಗವಹಿಸಿದ್ದ ಬಿಹಾರ ಸಮಾಜವಾದಿ ವಿಚಾರಧಾರೆಯ ಯುವ ಸಮೂಹದಲ್ಲಿ ಒಬ್ಬರಾಗಿದ್ದ ರಘುವಂಶ ಪ್ರಸಾದ್ ಸಿಂಗ್ ಗಣಿತಶಾಸ್ತ್ರ ಅಧ್ಯಯನದಲ್ಲಿ ಡಾಕ್ಟೋರೇಟ್ ಪಡೆದವರು. ಅವರು ಹುಟ್ಟಿನಿಂದ ರಜಪೂತರಾದರೂ ಲೋಹಿಯಾ ಅವರ ಪಟ್ಟ ಶಿಷ್ಯರಾಗಿದ್ದ ಹಿಂದುಳಿದ ವರ್ಗಗಳ ನಾಯಕ ಕರ್ಪೂರಿ ಠಾಕೂರರ ಅನುಯಾಯಿಯಾಗಿ ಬೆಳೆದವರು. ೧೯೭೭ರ ಬಿಹಾರ ವಿಧಾನ ಸಭೆಗೆ ಆಯ್ಕೆಯಾದ ಅವರು ಕರ್ಪೂರ ಠಾಕೂರ್ ಅವರ ಸಂಪುಟದಲ್ಲಿ ಇಂಧನ ಖಾತೆಯ ಉಪಮಂತ್ರಿಯಾಗಿ ಸೇರಲ್ಪಟ್ಟವರು ೧೯೯೬ರಲ್ಲಿ ಲೋಕಸಭೆಗೆ ಆಯ್ಕೆಯಾಗುವವರೆಗೆ ವಿವಿಧ ಖಾತೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಸಚಿವರಾಗಿ ಬಿಹಾರ ರಾಜಕಾರಣದ ಸಮಾಜವಾದಿ ಧಾರೆಯ ಮಹಾಪೋಷಕರಾಗಿ ಬೆಳೆದರು. ೧೯೯೪ರಲ್ಲಿ ತಮ್ಮಿಬ್ಬರು ಗೆಳೆಯರಾದ ಲಾಲೂ ಮತ್ತು ನಿತೀಶ್ ಕುಮಾರ್ ಬೇರೆ ಬೇರೆ ದಿಕ್ಕುಗಳಲ್ಲಿ ಹೊರಟಾಗ ಕೋಮುವಾದಿ ರಾಜಕರಣದ ಉಗ್ರ ವಿರೋಧಿಯಾದ ಸಿಂಗ್ ಅವರು ಲಾಲೂ ಅವರ ರಾಷ್ಟ್ರೀಯ ಜನತಾದಳದ ಕಡೆಗೆ ಒಲಿದಿದ್ದು ಸಹಜವೇ ಆಗಿತ್ತು. ಈ ಪಕ್ಷದ ಅಭ್ಯರ್ಥಿಯಾಗಿ ವೈಶಾಲಿ ಕ್ಷೇತ್ರದಿಂದ ೧೯೯೬ರಿಂದ ಸತತವಾಗಿ ಐದು ಬಾರಿ ಲೋಕಸಭೆಗೆ ಆಯ್ಕೆಯಾದ ಅವರು ೨೦೧೪ರ ಚುನಾವಣೆಯಲ್ಲಿ ಮೋದಿ ಅಲೆ ಎದುರು ಮೊದಲ ಪರಾಭವವನ್ನು ಕಂಡರು.

ಇತ್ತೀಚಿನ ವರ್ಷಗಳಲ್ಲಿ ರಾಜಕೀಯದಲ್ಲಿ ಸಕ್ರಿಯ ಆಸಕ್ತಿ ಕಳೆದುಕೊಂಡಿದ್ದ ಸಿಂಗ್ ತಮ್ಮ ಪಕ್ಷ ಸಂಪೂರ್ಣವಾಗಿ ಲಾಲೂ ಮಕ್ಕಳ ಕೈವಶವಾಗುತ್ತಿರುವುದನ್ನು ಪ್ರತಿಭಟಿಸತೊಡಗಿದ್ದರು. ಪಕ್ಷದ ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆಯನ್ನೂ ನೀಡಿದ್ದರು. ಒಂದು ತಿಂಗಳ ಹಿಂದೆ ಕೋವಿಡ್‌ನಿಂದ ಬಳಲಿ ಸುಧಾರಿಸಿಕೊಂಡಿದ್ದ ಅವರು ನಂತರದ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಾ ತಮ್ಮ ಬದುಕಿನ ಕೊನೆಯ ಹೋರಾಟ ನಡೆಸಿ ಅಂತಿಮವಾಗಿ ದೆಹಲಿಯ ಅಖಿಲ ಭಾರತ ವೈದ್ಯಕೀಯ ಸಂಸ್ಥೆಯಲ್ಲಿ ಸೆಪ್ಟಂಬರ್ ೧೪ರಂದು ತಮ್ಮ ೭೪ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದರು ಬುದ್ಧನ ನಾಡಾದ ವೈಶಾಲಿಯ ಪುತ್ರನಾದ ಅವರು ಮರಣ ಶಯ್ಯೆಯಿಂದಲೇ ಬರೆದ ತಮ್ಮ ಎರಡು ಕೊನೆಯ ಪತ್ರಗಳಲ್ಲಿ ಪ್ರಧಾನ ಮಂತ್ರಿ ಮೋದಿಯವರನ್ನು ಕಾಬೂಲ್‌ನಲ್ಲಿರುವ ಭಿಕ್ಷಾಪಾತ್ರೆಯನ್ನು ವೈಶಾಲಿಗೆ ವಾಪಸ್ ತರುವ ವ್ಯವಸ್ಥೆ ಮಾಡಬೇಕೆಂದೂ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್‌ನ್ನು ಉದ್ಯೋಗ ಖಾತರಿ ಯೋಜನೆಯ ಪ್ರಾಮಾಣಿಕ ಅನುಷ್ಠಾನದ ಮೂಲಕ ತಮ್ಮ ವೈಶಾಲಿ ಕ್ಷೇತ್ರದ ಗ್ರಾಮೀಣ ಬಡ ಜನತೆಯನ್ನು ರಕ್ಷಿಸಿ ಎಂದು ಕೋರಿದ್ದರು. ಇದು ಅವರ ಸಮಾಜವಾದಿ ತತ್ವ ಬದ್ಧತೆಗೆ ಸಹಜವೇ ಆಗಿತ್ತು.

## ಹೋರಾಟಗಾರ ಸಂನ್ಯಾಸಿ ಸ್ವಾಮಿ ಅಗ್ನಿವೇಶ್



ಇದೇ ಸಂದರ್ಭದಲ್ಲಿ 'ಹೊಸ ಮನುಷ್ಯ' ಆರ್ಯ ಸಮಾಜ ಚಳುವಳಿಯ ಹಿರಿಯ ನಾಯಕರೂ, ಮಾಜಿ ಲೋಕಸಭಾ ಸದಸ್ಯರೂ ಆಗಿದ್ದ ಸ್ವಾಮಿ ಅಗ್ನಿವೇಶ್ ಅವರ ನಿಧನದ ಬಗ್ಗೆ ತನ್ನ ಸಂತಾಪಗಳನ್ನು ವ್ಯಕ್ತಪಡಿಸಬಯಸುತ್ತದೆ. ಕಾವಿ ತೊಟ್ಟು ಸಂನ್ಯಾಸಿಯಾಗಿ ತಮ್ಮ ರಾಜ್ಯ ಹರ್ಯಾನಾದಲ್ಲಿ ಸಮಾಜ ಸುಧಾರಣಾ ಕಾರ್ಯಕ್ರಮಗಳಲ್ಲಿ ತೊಡಗಿದ್ದ ಅಗ್ನಿವೇಶರು ದೇಶ ಇಂದಿರಾ ಗಾಂಧಿಯವರ ನೇತೃತ್ವದಲ್ಲಿ ಅಡ್ಡ ಹಾದಿ ಹಿಡಿಯತೊಡಗಿದಾಗ ಜಯಪ್ರಕಾಶ ನಾರಾಯಣರ ಕರೆಯ ಮೇರೆಗೆ ಪ್ರಜಾಸತ್ತೆಯನ್ನು ರಕ್ಷಿಸುವ ಮಹಾ ಆಂದೋಲನದಲ್ಲಿ ಭಾಗವಹಿಸಲು ಹಿಂಜರಿಯಲಿಲ್ಲ. ೧೯೭೭ರಲ್ಲಿ ಲೋಕಸಭೆಗೆ ಆಯ್ಕೆಯಾಗುವಷ್ಟು ಜನಮನ್ನಣೆ ಗಳಿಸಿದ ಅವರು ಜೆಪಿ ಚಳುವಳಿಯ ಪ್ರಭಾವ ಕ್ಷೀಣಿಸಿದಂತೆ ಅವರೂ ರಾಜಕಾರಣದ ಹಿನ್ನೆಲೆಗೆ ಸರಿದರು. ಹರ್ಯಾಣಾ-ರಾಜಸ್ಥಾನಗಳಲ್ಲಿ ಜೀತ ಪದ್ಧತಿ, ಅಸ್ಪೃಶ್ಯತೆ ಮತ್ತು ಮಹಿಳಾ ದೌರ್ಜನ್ಯಗಳ ವಿರುದ್ಧ ಹಲವು ಹೋರಾಟಗಳನ್ನು ನಡೆಸಿ ಯಶಸ್ವಿಯಾಗಿದ್ದ ಅವರು ಸಂಘ ಪರಿವಾರದ ಕೋಮುವಾದಿ ರಾಜಕಾರಣದ ವಿರುದ್ಧ ತಮ್ಮ ಕೊನೆಯ ಹೋರಾಟವನ್ನೂ ನಡೆಸುತ್ತಾ ಅಸು ನೀಗಿದ್ದಾರೆ.

ಇಂದಿನ ತಲೆಮಾರಿನ ಯುವಜನ ಅವಶ್ಯವಾಗಿ ನೆನಪಿಡಬೇಕಾದ ಇಬ್ಬರು ನಿಜ ಹೋರಾಟಗಾರರಿವರು.

**-ಡಿಎಸ್ಸೆನ್**

---

೯ನೇ ಪುಟದಿಂದ)

ತಿಳಿಸಿದ್ದಾರೆ ಎಂದಾಗ ಅದನ್ನು ಫ್ರೀಡ್‌ಮನ್ ನಿರಾಕರಿಸುತ್ತಾರೆ. ಅವಳು ರೂಮಿನಿಂದ ಹೊರಹೋಗುವಾಗ ಗೋಡೆಯ ಮೇಲಿದ್ದ ರಮಣರ ಪೋಟೋ ತೋರಿಸಿ ಇವರೇ ನನ್ನನ್ನು ಕಳಿಸಿದ್ದು ಎಂದು ಹೇಳಿದಾಗ ಅತ್ಯಾಶ್ಚರ್ಯಗೊಂಡ (ರಮಣರು ಇಹಲೋಕ ತ್ಯಜಿಸಿ ೨೮ ವರ್ಷಗಳಾಗಿದ್ದವು) ಫ್ರೀಡ್‌ಮನ್ ಅವಳ ಅರ್ಹತೆಗೆ ಒಪ್ಪಿಕೊಳ್ಳುತ್ತಾರೆ. ಆದರೆ ಅವರು ಬಹಳ ಕಾಲ ಉಳಿಯುವುದಿಲ್ಲ. ೧೯೭೬ರಲ್ಲಿ ನಿಸರ್ಗದತ್ತ ಮಹಾರಾಜರ ಸಾನ್ನಿಧ್ಯದಲ್ಲಿ, ಅಪರೂಪದ ಮಹಾ ಚೈತನ್ಯದ ಶಕ್ತಿ ಶಾಶ್ವತವಾಗಿ ಅನಂತದಲ್ಲಿ ಲೀನವಾಗುತ್ತದ

***(ಫ್ರೀಡ್‌ಮನ್‌ರವರ ಕುರಿತು ಹೆಚ್ಚಿನ ಮಾಹಿತಿಗಾಗಿ ಅಪಾ ಪಂತ್‌ರವರ 'ಮೌಂಟೆನ್ ಪಾಥ್', 'ಎ ಮೂವ್‌ಮೆಂಟ್ ಇನ್ ಟೈಮ್', ಮತ್ತು 'ಯಾನ್ ಅನ್‌ಯುಷ್ಯೂವಲ್ ರಾಜಾ' (ಓರಿಯಂಟ್ ಲಾಂಗ್‌ಮನ್ ಪ್ರಕಟಣೆ) ಕೃತಿಗಳನ್ನು, ಹಾಗೂ ಯೂ ಟ್ಯೂಬ್‌ನಲ್ಲಿ ಡೇವಿಡ್ ಗಾಡ್‌ಮನ್‌ರ 'ಬುದ್ಧ ಎಟ್ ದ ಗ್ಯಾಸ್ ಪಂಪ್' ಸಂದರ್ಶನ ನೋಡಿ).***



**(ಶಿವಮೊಗ್ಗದ ನಿವಾಸಿಯಾದ ಲೇಖಕರು ಕುವೆಂಪು ವಿಶ್ವವಿದ್ಯಾಲಯದ ರಾಜಕೀಯಶಾಸ್ತ್ರದ ನಿವೃತ್ತ ಪ್ರಾಧ್ಯಾಪಕರು ಮತ್ತು ಲೇಖಕರು)**

---

ಪಕ್ಕದ ಪುಟದಿಂದ)

ಹಿಂದೂ ಮುಸ್ಲಿಂ ಗಲಾಟೆಗಳ ಸಂದರ್ಭದಲ್ಲಿ ಎದ್ದಿದ್ದ ಇದೇ ರೀತಿಯ ಚರ್ಚೆಗಳಲ್ಲಿ ಗಾಂಧಿ ಅಹಿಂಸೆಯ ಹೆಸರಿನಲ್ಲಿನ ಹೇಡಿತನಕ್ಕೆ ಬದಲಾಗಿ ರಕ್ಷಣಾತ್ಮಕ ಹಿಂಸೆಯನ್ನು ನಾನು ಎತ್ತಿ ಹಿಡಿಯುತ್ತೇನೆ ಎಂದಿದ್ದ ಮಾತನ್ನೂ, ಗೋಹತ್ಯೆಯ ವಿವಾದದ ಸಂದರ್ಭದಲ್ಲಿ ನಮ್ಮ ನಂಬಿಕೆಗಾಗಿ ನಾವು ಪ್ರಾಣತ್ಯಾಗ ಮಾಡಿ ಗೋವನ್ನು ಕಾಪಾಡಬೇಕೇ ಹೊರತು ಬೇರೆಯವರನ್ನು ಕೊಲ್ಲುವ ಮೂಲಕ ಅಲ್ಲ ಎಂಬ ಮಾತನ್ನೂ ಮತ್ತು ಓರ್ವ ಯುವತಿ ಒಮ್ಮೆ ಅತ್ಯಾಚಾರವೆಸಗಬಂದ ಗಂಡಸೊಬ್ಬನನ್ನು ಅಹಿಂಸಾತ್ಮಕವಾಗಿ ಎದುರಿಸುವುದು ಹೇಗೆ ಎಂದು ಕೇಳಿದ ಪ್ರಶ್ನೆಗೆ ಅವರು 'ಏಕೆ, ನಿನ್ನ ಬಳಿ ದೇವರು ಕೊಟ್ಟ ಉಗುರುಗಳಿಲ್ಲವೆ? ಎಂಬ ಮರುಪ್ರಶ್ನೆಯ ಮೂಲಕ ಕೊಟ್ಟ ಉತ್ತರವನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು. ಗಾಂಧಿಯವರ ಅಹಿಂಸೆ ಹಿಂಸಾರಾಹಿತ್ಯ ಎಂಬ ಸರಳಾರ್ಥದ ಪರಿಕಲ್ಪನೆಯಾಗಿರದೆ, ಅದರ ಸಂಕೀರ್ಣ ಅರ್ಥವನ್ನು ಅವರ 'ಅಹಿಂಸೆ ಎಂಬುದು ಈ ಜಗತ್ತಿನ ಸಾಗರ-ಪರ್ವತಗಳಷ್ಟೇ ಪುರಾತನವಾದದ್ದು' ಎಂಬ ಮಾತಿನಲ್ಲಿ ಅರಸಬೇಕು. ಈ ಮಾತಿನ ಮಥಿತಾರ್ಥದ ಪ್ರಕಾರ ಅಹಿಂಸೆ ಎಂದರೆ ಸಹಬಾಳ್ವೆಗೆ ಆಧಾರವಾದ ಆಂತರಿಕ ಸಮತೋಲನ, ಸಮಚಿತ್ತ ಎನ್ನಬಹುದು.

**(ಡಿ.ಎಸ್. ನಾಗಭೂಷಣ ಅವರ 'ಗಾಂಧಿ ಕಥನ' ಕೃತಿಯಿಂದ ಆಯ್ದ ಭಾಗ)**

ಕಥೆ

# ಯಂಕ್ಚಿಕ್ಕಿ ಖಾನಾವಳಿ

-ಅನುಪಮಾ ಪ್ರಸಾದ್



ಚಿತ್ರ: ಗುಜ್ಜಾರ್

*ಋಣವೆಂಬ ಸೂತಕವು ಬಹು ಬಾಧೆ ಪಡಿಸುತಿದೆ*
*ಗುಣ ನಿಧಿಯೆ ನೀನೆನ್ನ ಋಣವ ಪರಿಹರಿಸೊ*

ಹಾಡಿಕೊಳ್ಳುತ್ತಿದ್ದ ಯಂಕ್ಚಿಕ್ಕಿಯ ಗಂಟಲು ಕಟ್ಟಿತು. ಬೈಹುಲ್ಲು ತಿನ್ನುತ್ತಿದ್ದ ಯಮುನೆಯ ಕೊರಳ ತಬ್ಬಿದ ಯಂಕ್ಚಿಕ್ಕಿ ತನ್ನ ಮುಖವನ್ನು ಯಮುನೆಯ ಮುಖಕ್ಕೆ ಮೃದುವಾಗಿ ಉಜ್ಜಿದಳು. "ನಾಳೆಗೆ ನಾ ಹೊರಟೆ ಮಗಾ. ಇನ್ಮುಂದೆ ನಾಗತ್ತೆ ದಾಣಿ ಇಡಲು ಬರುವುದಿಲ್ಲ. ನೋಡು ಆ ಶ್ರೀಹರಿ ಈ ನೆಲದ ನೀರಿನ ಋಣ ಮುಗುತ್ತು ನಿಂಗೆ ಅಂದ. ಇನ್ನು ಆ ನೆಲದ್ದು ಎಷ್ಟು ದಿನವೊ. ಯಾವಾಗ್ಲೂ ಹೋಗ್ಬತ್ನೆ ಮಗಾ ಅಂತಿದ್ದೆ. ಈಗ ಹೋಗ್ತ್ನೇ ಮಗಾ ಅನ್ನದೇ ಸೈ.. ಪುಣ್ಯಾತ್ಗಿತ್ತಿ ನೀನು. ಕೊಟ್ಗೆ ತುಂಬ ನಿಂದೇ ವಂಶಾವಳಿ. ನಿನ್ನ ಬಾಣಂತನ ಮಾಡಿದ ಈ ಯಂಕ್ಚಿಕ್ಕನೂ ಕಮ್ಮಿ ಇಲ್ಲೆ ಬಿಡು. ಈ ಬಾಳೆಮೂಲೆ ವಂಶಿಕರ ಮನೆಲೆಲ್ಲ ಯಂಕ್ಚಿಕ್ಕಿ ಖಾನಾವಳಿ ನಡ್ಸಿದ್ದು." ಯಮುನೆ ಬಾಯಲ್ಲಿ ಹುಲ್ಲು ಕಚ್ಚಿಕೊಂಡಿರುವಂತೆಯೇ ಏನೋ ಅರ್ಥವಾದವಳಂತೆ ಹೂಂಕರಿಸುತ್ತ ಯಂಕ್ಚಿಕ್ಕಿಯ ತಲೆ ಮೂಸಿದಳು. ಯಂಕ್ಚಿಕ್ಕಿಗೆ ತನಗೇನಾಗುತ್ತಿದೆಯೆಂದೇ ಅರ್ಥವಾಗುತ್ತಿರಲಿಲ್ಲ. ನಿನ್ನೆಯಿಂದ ಅಂಡು ಸುಟ್ಟ ಬೆಕ್ಕಿನಂತೆ ಓಡಾಡುತ್ತಿದ್ದಳು. ಒಮ್ಮೆ ಬಿಸಿಲು ಮಚ್ಚು ಹತ್ತಿದರೆ ಮತ್ತೊಮ್ಮೆ ಬಚ್ಚಲೊಲೆಗೆ ಸುಮ್ಸುಮ್ಮನೆ ಸೋಗೆ ಮುರಿದು ತುರುಕುತ್ತಿದ್ದಳು. ಅಲ್ಲಿಂದ ಹೋಗಿ ಹಿತ್ತಿಲ ಬಾವಿ ಬಳಿ ನಿಂತು ಅಲವರಿಯುತ್ತಿದ್ದಳು. ಮತ್ತೇನೊ ಮರೆತವಳಂತೆ ಕೊಟ್ಟಿಗೆಗೆ ಹೋಗಿ ದಾಣಿ ಪಾತ್ರ ಜೋಡಿಸುತ್ತಿದ್ದಳು. ಕತ್ತಿ ಹಿಡಿದು ತೋಟದತ್ತ ಹೊರಟಾಗ ಮಾತ್ರ.ಷಣ್ಮುಖ ತಡೆದಿದ್ದ.

"ಚಿಕ್ಕಿ, ನೀನೀಗ ತೋಟ ಗದ್ದೆ ಅಂತ ತಿರುಗೋದೇನ್ಬೇಡ. ಇಷ್ಟು ದಿವ್ಸ ಮಾಡಿದ್ದು ಬಹಳಷ್ಟಾಗಿದೆ. ನಾಳೆ ಹೊರಡೋ ಹೊತ್ತಿಗೆ ಹುಷಾರು ತಪ್ಪಿ ಮಲಗೋ ಹಾಗೆ ಮಾಡ್ಕೊಬೇಡ. ಹೊರಡುವ ಹೊತ್ತಿನವರೆಗೂ ದುಡಿಸಿದ್ರು ಅಂತ ಜನ ನಮ್ಗೆ ಕೈ ತೋರಿಸುವುದು ಬೇಡ." ಕಾಳಜಿ ಮಾತಿನಂತೆ ಕಂಡರೂ ಅದರೊಳಗಿನ ಕೂರಂಬು ಮೊನಚಾಗಿಯೇ ಇತ್ತು. ಕಣ್ಣಲ್ಲಿ ನೀರುಕ್ಕಿದ್ದು ಕಾಣಬಾರದೆಂದೇ ಅವಳು ಸೀದಾ ಕೊಟ್ಟಿಗೆಯತ್ತ ನಡೆದಿದ್ದಳು.

ಷಣ್ಮುಖ ಅವಳ ಗಂಡ ತಾರಾನಾಥನ ಅಣ್ಣ ರಂಗನಾಥನ ಎರಡನೆಯ ಮಗ. ರಂಗನಾಥನಿಗೆ ವಯೋಸಹಜ ಖಾಯಿಲೆಗಳು ಧಾಳಿ ಇಡಲಾರಂಭಿಸಿದ್ದರಿಂದ ಈಗ ಎರಡು ವರ್ಷಗಳಿಂದ ಷಣ್ಮುಖನೇ ಮನೆ ಯಜಮಾನ. ಹಿರಿಯವನಿಗೆ ಇನ್ನೊಂದು ಆಸ್ತಿ ಮಾಡಿಕೊಟ್ಟಿದ್ದರು. ಕೊನೆಯವನು ಶ್ರೀಪತಿ. ಎಂಜಿನಿಯರಿಂಗ್ ಓದಿ ಪೂನಾದಲ್ಲಿ ಖಾಸಗಿ ಕಂಪೆನಿ ಉದ್ಯೋಗಿಯಾಗಿದ್ದ. ಅವನ ಹೆಂಡತಿಗೂ ಒಳ್ಳೆಯ ಕಂಪೆನಿಯೊಂದರಲ್ಲಿ ಕೆಲಸ. ರಂಗನಾಥನ ಹೆಣ್ಣು ಮಕ್ಕಳಿಬ್ಬರು ಮದುವೆಯಾಗಿ ಅವರವರ ಸಂಸಾರದಲ್ಲಿ ಮುಳುಗೇಳುತ್ತಿದ್ದರು. ವೆಂಕಟಲಕ್ಷ್ಮಿ ತಾರಾನಾಥನ ವಧುವಾಗಿ ಆ ಮನೆಗೆ ಬಂದು ವರ್ಷವುರುಳುವುದರಲ್ಲಿಯೇ ಗಂಡನನ್ನು ಕಳೆದುಕೊಂಡು ದಿಕ್ಕೇಡಿಯಾಗಿದ್ದಳು. ಆಗ ಅವಳಿಗೆ ಹದಿನಾಲ್ಕು ವರ್ಷ. ಅಲ್ಲಿಂದ ಮುಂದೆ ಅವಳು ನಿಧಾನವಾಗಿ ತವರು ಮನೆಯವರಿಗೂ ಗಂಡನ ಮನೆಯರಿಗೂ ಆಪತ್ತಿಗೆ ಒದಗುವ ಯಂಕ್ಚಿಕ್ಕಿಯಾಗಿ ಬದಲಾಗಿ ಇಡೀ ವಂಶಾವಳಿಯ ಯಾವುದೊ ರೆಂಬೆಕೊಂಬೆಗಳಲ್ಲಿ ಬಸಿರು ಚಿಗುರೊಡೆದರೆ ಶಿಶು-

'ಯಂಕ್ಚಿಕ್ಕಿಗೆ ಗುಡ್ಡದ ಅಮ್ಮ ಎಂಬುದು ಕಿವಿಗೆ ಬಿದ್ದಿದ್ದೇ ಕನವರಿಸುತ್ತಿದ್ದುದು ಕಣ್ಮುಂದೆ ಪ್ರತ್ಯಕ್ಷ ಆದ ಅನುಭವ. ಸರೋಜಕ್ಕನ ಬಾಯಿಯಲ್ಲಿ ಅನ್ನ ಸುರಿಯುವ ಭಂಗಿಯಲ್ಲಿ ನಿಂತಿರುವ ಗುಡ್ಡದ ಅಮ್ಮನ ವರ್ಣನೆ ಕೇಳಿ, ಷಣ್ಮುಖನ ಮೊಬೈಲಲ್ಲಿ ದೇವಸ್ಥಾನ ಪರಿಸರದ ವಿಡಿಯೋ ನೋಡಿದ ಮೇಲೆ ಅದರಲ್ಲೂ ಅಮ್ಮನವರ ಚಿತ್ರಪಟ ನೋಡಿದ ಮೇಲೆ ತಾನೂ ಒಮ್ಮೆಯಾದರೂ ಗುಡ್ಡದ ಅಮ್ಮನನ್ನು ಕಾಣಬೇಕೆಂಬ ಆಸೆಯಾಗಿತ್ತು. ಅವಳದನ್ನು ಹೇಳಿಕೊಂಡಾಗ ಸರೋಜಕ್ಕ, "ಹೋಗಬೇಕು ಅಂದುಕೊಂಡ ಕೂಡಲೆ ಹೋಗುವಂತ ಜಾಗ ಅಲ್ಲ ಅದು. ಆ ಅಮ್ಮನವರಿಗೂ ಮನಸಾಗಬೇಕು. ಮುಂದಿನ ಜನ್ಮದಲ್ಲಾದರೂ ನಮ್ಮ ಯಂಕುಗೆ ಗಂಡನ ಜೊತೆ ಬಾಳುವೆ ಮಾಡುವ ಭಾಗ್ಯ ಕೊಡು ಅಂತ ನಿನ್ನ ಲೆಕ್ಕದಲ್ಲಿ ನಾನೇ ಬೇಡಿಕೊಂಡೆ. ಪ್ರಸಾದ ಹಚ್ಕೊ" ಎಂದು ಕುಂಕುಮ ಪಟ್ಲ ಮುಂದೆ ಹಿಡಿದಿದ್ದಳು'

ಬಾಣಂತಿ ಮೀಯಿಸುವುದರಿಂದ ತೊಡಗಿ ಖಾಯಿಲೆ ಕಸಾಲೆಯೆಂದು ಆಸ್ಪತ್ರೆ ವಾಸಕ್ಕೆ ಹೋಗಬೇಕಾದರೆ ಅವರೊಂದಿಗಿರುವ ಶುಶ್ರೂಶಕಿಯಾಗಿಯೂ, ಅಡುಗೆಯವಳಾಗಿಯೂ ಆಯಾಯ ಮನೆಗಳ ಅಗತ್ಯ ಪೂರೈಸುತ್ತಿದ್ದಳು. ಇಂತಹ ಸಮಯದಲ್ಲೇ ಒಮ್ಮೆ ರಂಗನಾಥನ ಮಗಳು ಬಿದ್ದು ಸೊಂಟಕ್ಕೆ ಪೆಟ್ಟಾಗಿ ಮಲಗಿದಲ್ಲೇ ಆದಾಗ ಅವರ ಮನೆಯಲ್ಲಿ ಎರಡು ತಿಂಗಳು ಉಳಿದುಕೊಂಡು ಮನೆ ಮಗಳ ಆರೈಕೆ ಮಾಡಿದ್ದಳು. ಆ ಸಮಯದಲ್ಲೆ ಅವಳ ಮಾವನವರು, "ಯಾವ ಹೊತ್ತಿಗೆ ಹೋದ್ರೂ ನಮ್ಮ ನಂಜಮ್ಮನ ಖಾನಾವಳಿಲ್ಲಿ ಊಟ ಇಲ್ಲ ಅನ್ನೋದಿಲ್ಲ. ಆದ್ರೆ ಅದು ಇದ್ದಲ್ಲಿ ನಾವು ಹೋಗ್ಬೇಕು. ಈ ಯಂಕ್ಚಿಕ್ಕಿ ಮಾತ್ರ ಯಾವಾಗ ಬಂದು ಸೇವೆ ಬೇಕು ಬಾ ಅಂದ್ರೂ ಇಲ್ಲಾ ಎಂಬೊ ಮಾತೇ ಇಲ್ಲ. ಯಂಕ್ಚಿಕ್ಕಿಯದು ಚಕ್ರ ಕಟ್ಟಿಕೊಂಡ ಖಾನಾವಳಿ ಅಂದಿದ್ದರು. ಯಂಕ್ಚಿಕ್ಕಿಗೆ ಅದು ಅಂದು ಹೆಗ್ಗಳಿಕೆಯಾಗಿ ಕಂಡಿದ್ದರಿಂದ ಅವಳೇ ಮುಂದಾಗಿ ಅವರು ತನಗೆ ಹೊಸ ಹೆಸರಿಟ್ಟ ಸಂಗತಿಯನ್ನು ರಸವತ್ತಾಗಿ ಹೇಳುತ್ತಿದ್ದಳು. ಆದರೆ, ಕ್ರಮೇಣ ಅವಳಿಗೆ ಚಕ್ರ ಕಟ್ಟಿದ ಖಾನಾವಳಿಯಿಂದ ಬಿಡುಗಡೆ ಬೇಕೆಂದರೂ ಸಿಗದಂತ ಸ್ಥಿತಿಯಾಗಿತ್ತು. ಈಗ ಎಪ್ಪತ್ತರ ಇಳಿ ವಯಸ್ಸಲ್ಲಿ ಮನೆಯ ಕಿರಿಮಗ ಶ್ರೀಪತಿಯೊಂದಿಗೆ ಪುಣೆಗೆ ಹೊರಡಬೇಕಾದ ಅನಿವಾರ್ಯ ಬಂದಿತ್ತು. ಶ್ರೀಪತಿಯಂತು ಸಣ್ಣವನಿದ್ದಾಗ ಯಂಕ್ಚಿಕ್ಕಿಯ ಕೈಯಲ್ಲೇ ಬೆಳೆದವನು. ಈಗ ಅವನ ಮನೆಯ ಕಷ್ಟಕ್ಕೆ ಆಗುವುದಿಲ್ಲವೆನ್ನಲು ಸಾಧ್ಯವೇ ಇರಲಿಲ್ಲ. ಕೊರೊನಾ ಕಾರಣದಿಂದ ಲಾಕ್ಡೌನ್ ಆದಾಗ ಮನೆಗೆ ಬಂದಿದ್ದ ಶ್ರೀಪತಿ ಅವನ ಹೆಂಡತಿ ಮಂಗಳಾ, ನಾಲ್ಕು ವರ್ಷದ ಮಗಳು ಚಿನ್ಮಯಿ ಮತ್ತೆ ಪುಣೆಗೆ ಹೊರಟಿದ್ದರು. ಆದರೆ, ಇಬ್ಬರಿಗೂ ವರ್ಕ್ ಫ್ರಂ ಹೋಂ ಸುರುವಾಗಿತ್ತು. ಬೆಳಗ್ಗೆ ಹತ್ತು ಘಂಟೆಗೆ ಇಬ್ಬರೂ ಅವರವರ ಕಂಪ್ಯೂಟರ್ ಎದುರು ಕುಳಿತಾಗಬೇಕು. ಅದರಲ್ಲೂ ಮಂಗಳೆಯದು ಹೆಚ್ಚು ಒಳ್ಳೆಯ ಪೊಸಿಷನ್. ಸಂಬಳವೂ ಜಾಸ್ತಿ. ನರ್ಸರಿಗೆ ಹೋಗುವ ಮಗು ಚಿನ್ಮಯಿಗೆ ಈಗ ನರ್ಸರಿ ಇಲ್ಲದ್ದರಿಂದ ಅವಳನ್ನು ನೋಡಿಕೊಳ್ಳುವುದು ಯಾರೆಂಬ ಸಮಸ್ಯೆಗೆ ಉತ್ತರವಾಗಿ ಕಂಡಿದ್ದು ಯಂಕ್ಚಿಕ್ಕಿ. ಶ್ರೀಪತಿ ತಾಯಿಯೊಂದಿಗೆ ಸಮಸ್ಯೆ ಹೇಳಿಕೊಂಡಾಗ ಆಕೆಯೇ ಕೊಟ್ಟ ಪರಿಹಾರವಾಗಿತ್ತಿದು. ಯಂಕ್ಚಿಕ್ಕಿಗೆ ಹಿಂದೆ ಮುಂದೆ ಯಾರೂ ಇಲ್ಲದ್ದರಿಂದ ಅವಳನ್ನ ಕೇಳುವಂತದ್ದೇನಿರಲಿಲ್ಲ. ಮನೆ ಜನಕ್ಕಿಂತ ಒಡನಾಟ ಜಾಸ್ತಿ ಇದ್ದಿದ್ದು ಅವಳಿಗೆ ತಾನು ಬೇರಿಳಿಸಿದ ಆ ನೆಲದ ಮೇಲೆ. ಅಕ್ಕಚ್ಚು ದಾಣಿ ಇಟ್ಟು ಸಾಕಿದ ಜಾನುವಾರುಗಳ ಮೇಲೆ. ಈಗ ಇದ್ದಕ್ಕಿದ್ದಂತೆ ಬಂದೆರಗಿದ ಪ್ರಯಾಣ ಅವಳನ್ನು ಇನ್ನಿಲ್ಲದಂತೆ ಘಾಸಿಗೊಳಿಸಿತ್ತು. ಆದರೆ, ಕಂಡವರ ಋಣ ಬಾಧೆಯಲ್ಲಿ ಬಿದ್ದವಳು ತಾನೆಂದು ನಂಬಿದವಳಿಗೆ ಇಲ್ಲವೆಂಬ ಪದ ಬಳಸಿ ಅಭ್ಯಾಸವಿರಲಿಲ್ಲ. ಮರು ಬೆಳಗ್ಗೆಯೇ ಅವರು ಹೊರಡುವವರಿದ್ದರು.

**

ಮನೆಯಿಂದ ಬೇಗ ಹೊರಟಿದ್ದರೂ ಸುರಿಯುತ್ತಿರುವ ಮಳೆಯಿಂದಾಗಿ ನಿಧಾನ ಗತಿಯಲ್ಲಿ ಚಲಿಸಬೇಕಿತ್ತು. ಚಿನ್ಮಯಿಗೆ ಯಂಕಜ್ಜಿ ತಮ್ಮೊಂದಿಗೆ ಬರುತ್ತಿರುವ ಸಂಭ್ರಮ. ಯಂಕ್ಚಿಕ್ಕಿಗೆ ಊರು ದೂರ ಸರಿಯುತ್ತಿರುವ ಶೂನ್ಯ. ಭೀಮ ಸಮುದ್ರ ಸೇತುವೆಗೆ ಒಂದು ಕಿಲೋಮೀಟರ್ ಇದೆ ಅನ್ನುವಾಗ ಮುಂದೆ ಟ್ರಾಫಿಕ್ ಜಾಮ್ ಇರುವಂತೆ ಕಂಡಿತು ಶ್ರೀಪತಿಗೆ. ತುಸು ಮುಂದೆ ಹೋಗುತ್ತಿದ್ದಂತೆ ದಾರಿ ಬದಿ ಇದ್ದವರು ಕೈ ತೋರಿಸಿ, "ಸೇತುವೆ ಮೇಲೆ ಲಾರಿ ಪಲ್ಟಿ ಆಗಿದೆ. ನೀವು ಒಂದು ಕಿಮೀ ಹಿಂದೆ ಹೋಗಿ ಎಡಗಡೆಯ ರಸ್ತೆಯಲ್ಲಿ ಹೋದರೆ ಗುಡ್ಡದ ಅಮ್ಮನವರ ದೇವಸ್ಥಾನ ಸಿಗುತ್ತೆ. ಅಲ್ಲಿಂದ ನೀವು ಬೆಳಗಾಂ ರಸ್ತೆಗೆ ಸೇರ್ಕೊಳ್ಬಹುದು ನೋಡಿ" ಅಂದರು. ಶ್ರೀಪತಿ ಕಾರ್ ರಿವರ್ಸ್ ತೆಗೆದು ಸೈಡಿಗೆ ಹಾಕಿ ಗುಡ್ಡದ ಅಮ್ಮನವರ ದೇವಸ್ಥಾನಕ್ಕೆ ಗೂಗಲ್ ಮ್ಯಾಪ್ ಸೆಟ್ ಮಾಡಿದ. ನಲ್ವತ್ತು ಕಿಮೀ ತೋರಿಸುತ್ತಿತ್ತು. ಯಂಕ್ಚಿಕ್ಕಿಗೆ ಗುಡ್ಡದ ಅಮ್ಮ ಎಂಬುದು ಕಿವಿಗೆ ಬಿದ್ದಿದ್ದೇ ಕನವರಿಸುತ್ತಿದ್ದುದು ಕಣ್ಮುಂದೆ ಪ್ರತ್ಯಕ್ಷ ಆದ ಅನುಭವ. ಸರೋಜಕ್ಕನ ಬಾಯಿಯಲ್ಲಿ ಅನ್ನ ಸುರಿಯುವ ಭಂಗಿಯಲ್ಲಿ ನಿಂತಿರುವ ಗುಡ್ಡದ ಅಮ್ಮನ ವರ್ಣನೆ ಕೇಳಿ, ಷಣ್ಮುಖನ ಮೊಬೈಲಲ್ಲಿ ದೇವಸ್ಥಾನ ಪರಿಸರದ ವಿಡಿಯೋ ನೋಡಿದ ಮೇಲೆ ಅದರಲ್ಲೂ ಅಮ್ಮನವರ ಚಿತ್ರಪಟ ನೋಡಿದ ಮೇಲೆ ತಾನೂ ಒಮ್ಮೆಯಾದರೂ ಗುಡ್ಡದ ಅಮ್ಮನನ್ನು ಕಾಣಬೇಕೆಂಬ

ಆಸೆಯಾಗಿತ್ತು. ಅವಳದನ್ನು ಹೇಳಿಕೊಂಡಾಗ ಸರೋಜಕ್ಕ, "ಹೋಗಬೇಕು ಅಂದುಕೊಂಡ ಕೂಡಲೆ ಹೋಗುವಂತ ಜಾಗ ಅಲ್ಲ ಅದು. ಆ ಅಮ್ಮನವರಿಗೂ ಮನಸಾಗಬೇಕು. ಮುಂದಿನ ಜನ್ಮದಲ್ಲಾದರೂ ನಮ್ಮ ಯಂಕುಗೆ ಗಂಡನ ಜೊತೆ ಬಾಳುವೆ ಮಾಡುವ ಭಾಗ್ಯ ಕೊಡು ಅಂತ ನಿನ್ನ ಲೆಕ್ಕದಲ್ಲಿ ನಾನೇ ಬೇಡಿಕೊಂಡೆ. ಪ್ರಸಾದ ಹಚ್ಕೊ" ಎಂದು ಕುಂಕುಮ ಪಟ್ಲ ಮುಂದೆ ಹಿಡಿದಿದ್ದಳು. ಈಗ ದುತ್ತನೆ ಅಂತ ಒಂದು ಸಮಯ ಎದುರಾಗಿದೆ. "ಮಗಾ ಶ್ರೀಪತಿ, ಹಂಗಾದ್ರೆ ಅಮ್ಮನವರ ದರ್ಶನ ಮಾಡಿಸಿಬಿಡೋ ಈ ಯಂಕ್ಚಿಕ್ಕಿಗೆ. ಅಷ್ಟಾದ್ರೆ ಮತ್ತೆ ಹೊರಳಿ ಈ ಊರಿಗೆ ಬರದೇ ಇದ್ರೂ ಚಿಂತೆ ಇಲ್ಲ" ದೀನಳಂತೆ ಕೇಳಿದಳು. ಯಾವತ್ತೂ ಇಷ್ಟೊಂದು ದೈನೇಸಿಯಂತೆ ಮಾತಾಡಿರದ ಯಂಕ್ಚಿಕ್ಕಿಯನ್ನು ಅವಾಕ್ಕಾಗಿ ನೋಡಿದ ಶ್ರೀಪತಿ. ಮಂಗಳೆ ಗಾಬರಿಯಿಂದ "ಅಯ್ಯೋ, ದೇವಸ್ಥಾನದೊಳಗೆ ಹೋಗೋದಂದ್ರೆ ಒಂದೆರಡು ಘಂಟೆ ಆದ್ರೂ ಟೈಮ್ ಬೇಕು. ನಾವು ಬೆಳಗಾಂ ಸೇರೋ ಹೊತ್ತಿಗೆ ಮಧ್ಯರಾತ್ರಿ ಆದೀತು" ಅಂದಳು. ಹೇಗೂ ನಮಗಿನ್ನು ಊಟಕ್ಕೆ ಹೊಟೆಲ್ ಸರಿಯಾಗಿ ಸಿಗೋದಿಲ್ಲ. ದೇವಸ್ಥಾನದಲ್ಲಿ ದಿನಾ ಒಳ್ಳೆ ಪಾಯಸದ ಊಟ ಹಾಕ್ತಾರಂತೆ. ಅಮ್ಮನವರ ದರ್ಶನ ಮಾಡಿ ಉಂಡು ಹೊರಟ್ರೆ ಅದೊಂದು ಕೆಲಸ ಆಯ್ತಲ್ವ ಮಂಗಳಾ ಅಂದವನೇ ಚಿನ್ಮಯಿಯತ್ತ ತಿರುಗಿ ಇವತ್ತು ನಮ್ಮ ಚಿನ್ನುಗೆ ಅನ್ನ ಪಾಚದ ಊಟ ಅಂದ.

ಮುಖ್ಯ ರಸ್ತೆಯಿಂದ ಎಂಟು ಹತ್ತು ಕಿಲೋಮೀಟರ್ ಮುಂದೆ ಹೋದಂತೆ ಕಾಡು ದಟ್ಟವಾಗುತ್ತ ಕೆಲವು ಕಡೆ ಸಣ್ಣ ಊರಿದೆಯೆಂಬುದಕ್ಕೆ ಸಾಕ್ಷಿಯಾಗಿ ಬತ್ತದ ಗದ್ದೆಗಳು, ದೂರದಲ್ಲಿ ಅಲ್ಲಲ್ಲಿ ಜಾನುವಾರುಗಳು ಕಾಣಿಸುತ್ತಿದ್ದವು. ಅಬ್ಬಾ..ರಾತ್ರಿ ಹೊತ್ತೇನಾದರೂ ಈ ದಾರಿಯಲ್ಲಿ ಬಂದ್ರೆ ಆ ಗುಡ್ಡದ ಅಮ್ಮನೇ ಕಾಪಾಡ್ಬೇಕು ಅಂದಳು ಮಂಗಳಾ. ಹೆಸರಿಗೆ ತಕ್ಕಂತೆ ಮುಂದುವರಿದಂತೆ ಕಿರು ಘಾಟಿಯಂತೆಯೇ ಇತ್ತು ರಸ್ತೆ. ಎದುರಾಗುತ್ತಿದ್ದ ವಾಹನಗಳು ದೇವಸ್ಥಾನದಿಂದಲೇ ಬರುತ್ತಿರುವುದಕ್ಕೆ ಗುರುತೆಂಬಂತೆ ಹೂಹಾರ ಹಾಕಿಕೊಂಡಿರುತ್ತಿದ್ದವು. ಘಾಟಿ ದಾಟಿ ತುಸು ಮುಂದೆ ಹೋಗುತ್ತಿದ್ದಂತೆ ದೇವಸ್ಥಾನದತ್ತ ಹೊರಳುವ ಕುರುಹಾಗಿ ದೊಡ್ಡ ಕಮಾನು ಎದುರಾಯಿತು. ಯಂಕ್ಚಿಗೆ ತನ್ನೊಳಗೆ ಏನಾಗುತ್ತಿದೆಯೆಂದೇ ಅರ್ಥವಾಗದಷ್ಟು ಉದ್ವೇಗ, ಸಂತೋಷ. ಕೊರೊನಾ ಕಾಲವಾದರೂ ಅಮ್ಮನ ದರ್ಶನಕ್ಕೆ ಬಂದವರಿದ್ದರು. ಹೆಚ್ಚಿನವರು ಮಾಸ್ಕ ಕಟ್ಟಿಕೊಂಡಿದ್ದರೆ ಕೆಲವರು ಮುಖಕ್ಕೆ ಬಟ್ಟೆ ಕಟ್ಟಿಕೊಂಡಿದ್ದರು. ಪಾರ್ಕಿಂಗ್ ಆವರಣದಲ್ಲಿ ವಾಹನ ನಿಲ್ಲಿಸಿ ದೇವಸ್ಥಾನದ ಅಂಗಳಕ್ಕೆ ತುಸು ದೂರ ನಡೆಯಬೇಕು. ಮಂಗಳಾ ಹೆಗಲ ಚೀಲದಲ್ಲಿ ನೀರಿನ ಬಾಟ್ಲಿ ಇಟ್ಟುಕೊಂಡಳು. ಚಿನ್ಮಯಿಗೆ ಮಾಸ್ಕ್ ಹಾಕಿ ತಾನೂ ಕಲಂಕಾರಿ ಡಿಸೈನ್ ಇರುವ ಮಾಸ್ಕ್ ಕಟ್ಟಿಕೊಂಡಳು. ಯಂಕ್ಚಿಕ್ಕಿಯೂ ಮುಖಕ್ಕೆ ಟುವಾಲು ಕಟ್ಟಿಕೊಂಡು ತನ್ನ ಕೈ ಚೀಲ ಹಿಡಿದುಕೊಂಡಳು. ಶ್ರೀಪತಿ ಚಿನ್ಮಯಿಯನ್ನೆತ್ತಿಕೊಂಡ, ದೇವಸ್ಥಾನದತ್ತ ಹೋಗುತ್ತಿರುವ ಜನರ ನಡುವೆ ಇವರೂ ನಡೆದರು. ಹೊಳೆ ಹರಿಯುತ್ತಿರುವ ಸದ್ದು ಕಿವಿ ತುಂಬುತ್ತಿತ್ತು.

ದೇವಸ್ಥಾನದ ಹೆಬ್ಬಾಗಿಲೊಳಗೆ ಕಾಲಿಡುತ್ತಿದ್ದಂತೆ ಬೊಗಸೆಯಿಂದ ಅನ್ನ ಸುರಿಯುತ್ತಿರುವ ಅಮ್ಮನವರ ಮೂರ್ತಿ ಅದರಲ್ಲೂ ಕಣ್ಣೊಳಗಿನ ಆರ್ದ್ರತೆ ಯಂಕ್ಚಿಕ್ಕಿಯನ್ನು ವಿಚಕ್ಷಣವಾಗಿ ಸೆಳೆಯಿತು. ತಾನು ಮೀಯಿಸಿದ ಶಿಶು ಬಾಣಂತಿಯರು ಕಣ್ಮುಂದೆ ಸುಳಿದರು. ಆ ಶಿಶುಗಳ ಕೈಕಾಲು ಮೂಗು ಎಂದು ಎಣ್ಣೆ ಹಚ್ಚಿ ತಿದ್ದಿ ತೀಡಿ ಅಭ್ಯಂಗ ಮಾಡಿಸಿದ್ದು ನೆನಪಾಯ್ತು.. ಈ ಮೂರ್ತಿಯನ್ನು ಕೆತ್ತಿದ ಶಿಲ್ಪಿ ಎಷ್ಟು ಪ್ರೀತಿಯಿಂದ ಇದನ್ನು ಕೆತ್ತಿದನೋ ಆ ತಾಯಿಗೇ ಗೊತ್ತು ಅನಿಸಿತವಳಿಗೆ. ಜನರನ್ನು ಶಿಸ್ತಿನಿಂದ ಬರುವಂತೆ ನೋಡಿಕೊಳ್ಳಲು ಹೆಬ್ಬಾಗಿಲಿನಿಂದ ಗರ್ಭಗುಡಿಯ ಬಾಗಿಲವರೆಗೂ ಎರಡೂ ಬದಿ ಕಟಕಟೆ ಇತ್ತು. ಒಂದರಲ್ಲಿ ಹೆಂಗಸರು. ಒಂದರಲ್ಲಿ ಗಂಡಸರು. ಕೊರೊನಾ ಕಾಲವಾದ್ದರಿಂದ ಜನ ಜಂಗುಳಿ ಕಡಿಮೆ ಇದ್ದಿರಬೇಕು. ಕ್ಯೂನಲ್ಲಿ ಅಂತರ ಕಾಯ್ದುಕೊಳ್ಳುವ ವ್ಯವಸ್ಥೆ ಇತ್ತು. ಶ್ರೀಪತಿ ಚಿನ್ಮಯಿಯನ್ನು ಮಂಗಳಾಳ ಕೈಗೊಪ್ಪಿಸಿ ತಾನು ಗಂಡಸರ ಕ್ಯೂ ಸೇರಿದ. ಯಂಕ್ಚಿಕ್ಕಿ ಮಂಗಳಾ ಚಿನ್ನಿಯರ ಹಿಂದೆ ನಿಂತಳು. ತೀರ್ಥ ಪ್ರಸಾದ ವ್ಯವಸ್ಥೆ ಇರಲಿಲ್ಲ. ಆದರೆ ಎಲ್ಲರಿಗೂ ಒಂದು ಪುಟ್ಟ ಹಾಳೆ ತಟ್ಟೆಯಲ್ಲಿ ಬಿಸಿಬಿಸಿ ಪಾಯಸ ಕೊಡುತ್ತಿದ್ದರು. ಅಮ್ಮನವರ ಪಾದದ ಬಳಿ ಕುಂಕುಮದ ಬಟ್ಟಲಿಟ್ಟಿದ್ದರು. ಯಂಕ್ಚಿಕ್ಕಿ ಪೂಜಾರಿ ನೀಡಿದ ಬಟ್ಟಲು ಹಿಡಿದು ವಿಗ್ರಹ ದಿಟ್ಟಿಸಿದಳು. ಅಂತೂ ಯಂಕ್ಚಿಕ್ಕಿಗೂ ನಿನ್ನ ಖಾನಾವಳಿ ಊಟ ಸಿಕ್ತು ಅನ್ನುತ್ತ ಹಾಳೆ ತಟ್ಟೆ ಕಣ್ಣಿಗೊತ್ತಿಕೊಂಡಳು. ಅವಳ ಮಾತು ಮುಂದೆ ನಿಂತಿದ್ದ ಮಂಗಳೆ ಕಿವಿಗೆ ಬಿತ್ತು. ಇಲ್ಲೂ ನೀ ಹಲುಬೋದು ಬಿಟ್ಟಿಲ್ಲ. ಯಾರ ಕಿವಿಗಾದ್ರು ಬಿದ್ರೆ ಹುಚ್ಚು ಅಂದುಕೊಂಡಾರು ಎಂದು ಸಣ್ಣಗೆ ಗದರಿದಳು. ಯಂಕ್ಚಿಕ್ಕಿ ತಪ್ಪಿತಸ್ಥಳಂತೆ "ಮನಸ್ಸಿಗೆ ಬಂತು. ಹೇಳ್ಬಿಟ್ಟೆ ನೋಡು" ಅಂದಳು. ಪಾಯಸದ ತಟ್ಟೆ ಹಿಡಿದುಕೊಂಡು ಹೊರ ಹೋಗಲು ಬೇರೆ ಬಾಗಿಲು. ಆ ಬಾಗಿಲಿಂದ ಹೊರ ಬಿದ್ದೊಡನೆ ಸಣ್ಣ ಹೂತೋಟದ ಪಕ್ಕದಲ್ಲಿ ಕಲ್ಲು ಹಾಸಿದ ಕಾಲು ಹಾದಿ. ತುಸು ಮುಂದುವರಿದಾಗ ಮೂರು ದಿಕ್ಸೂಚಿ ನೆಟ್ಟಿದ್ದರು. ಒಂದರ ಕೆಳಗೆ ಊಟದ ಶಾಲೆ ಎಂದು ಬರೆದಿದ್ದರು. ಹಸಿದ ಹೊಟ್ಟೆಗಳೆಲ್ಲ ಸಹಜವಾಗಿಯೇ ಊಟದ ಶಾಲೆಯತ್ತ ನಡೆಯುತ್ತಿದ್ದವು. ಮಂಗಳೆ ಚಿನ್ಮಯಿಗೆ ಉಣಿಸುವಷ್ಟರಲ್ಲಿ ಯಂಕ್ಚಿಕ್ಕಿ, ಶ್ರೀಪತಿಯರ ಊಟ ಮುಗಿದಿತ್ತು. ಮಂಗಳೆಯ ಊಟ ಮುಗಿಸುವಷ್ಟರಲ್ಲಿ ಹೊಳೆ ಬಾಗಿಲು ಸುತ್ತಿ ಬಂದರಾಯ್ತೆಂದು ಶ್ರೀಪತಿ ಚಿನ್ಮಯಿ, ಯಂಕ್ಚಿಕ್ಕಿಯರನ್ನು ಕೂಡಿಕೊಂಡು ಹೊರಟ. ದೇವಳದ ಆವರಣದ ತುದಿಯಲ್ಲಿ ಹೊಳೆಗಿಳಿಯಲು ಮೆಟ್ಟಿಲುಗಳು. ಅಲ್ಲಲ್ಲಿ ಮಂಡಕ್ಕಿ ಮಾರುತ್ತಿರುವ ಹುಡುಗರು. ಜನ ಗುಂಪುಗುಂಪಾಗಿ ಕುಳಿತು ಮೀನುಗಳಿಗೆ ಮಂಡಕ್ಕಿ ಚೆಲ್ಲುತ್ತಿದ್ದರು. ಚಿನ್ಮಯಿಗಂತು ಅನಿರೀಕ್ಷಿತ ಖುಷಿ. ಮೂರೂ ಜನ ಒಂದು ಜಾಗ ಹಿಡಿದು ಕುಳಿತರು. ಚಿನ್ಮಯಿ ಅಪ್ಪನ ಕೈಯಿಂದ ತನ್ನ ಬೊಗಸೆಯಲ್ಲಿ ಹಿಡಿಯುವಷ್ಟು ಮಂಡಕ್ಕಿ ತುಂಬಿಕೊಂಡು ನದಿಗೆ ಚೆಲ್ಲಿದಳು. ಪೈಪೋಟಿಯಲ್ಲಿ ತಿನ್ನುವ ಸಣ್ಣ ದೊಡ್ಡ ಪಳಪಳ ಹೊಳೆವ ಮೀನುಗಳನ್ನು ನೋಡಿ ಖುಷಿ ಪಡುತ್ತಿದ್ದಳು. ತುಸು ಹೊತ್ತು ಚಿನ್ಮಯಿ ಜೊತೆ ತಾನೂ ಮಂಡಕ್ಕಿ ಹಾಕಿದ ಯಂಕ್ಚಿಕ್ಕಿಗೆ ತನ್ನ ಪಕ್ಕದಲ್ಲೇ ಕುಳಿತಿದ್ದ ಸುಮಾರು ಅರುವತ್ತರ ಮೇಲಿನ ಪ್ರಾಯವಿರಬಹುದಾದ ಒಂಟಿ ಹೆಂಗಸನ್ನು ಮಾತಾಡಿಸಬೇಕೆಂಬ ತುಡಿತ ತಡೆಯಲಾಗಲಿಲ್ಲ. ಅವಳ ಊರು ಕೇರಿ ವಿಚಾರಿಸಿದಳು. ಆದರೆ, ಸ್ವಲ್ಪ ಆಧುನಿಕಳಂತೆ ಕಾಣುತ್ತಿದ್ದ ಆ ಮಹಿಳೆಗೆ ಹೀಗೆ ಹಳ್ಳಿ ಗಮಾರಳಂತೆ ಪತ್ತಲ ಸುತ್ತಿಕೊಂಡು ಕಪ್ಪು ಬೊಟ್ಟಿಟ್ಟುಕೊಂಡಿರುವ ಯಂಕ್ಚಿಕ್ಕಿ ಮಾತಾಡಿಸುವುದು ಇಷ್ಟವಾಗದಿದ್ದರೆ ಸುಮ್ಸುಮ್ನೆ ಮುಜುಗರ ಅನುಭವಿಸಬೇಕಲ್ಲ ಅನಿಸಿ ಶ್ರೀಪತಿ ತುಸು ಕೆಮ್ಮಿ ಯಂಕ್ಚಿಕ್ಕಿ ತನ್ನತ್ತ ನೋಡುವಂತೆ ಮಾಡಿ "ಸುರು ಹಚ್ಕೊಂಡ್ಯಾ" ಎಂಬಂತೆ ಕಣ್ಣಲ್ಲೆ ಗದರಿದ. ಅಷ್ಟರಲ್ಲಿ ಆ ಹೆಂಗಸು ತಾನು ಇಲ್ಲೇ ಆಶ್ರಮವಾಸಿಯೆಂದಿದ್ದು ಮಾತ್ರ ತೀರಾ ಅನಿರೀಕ್ಷಿತ ಇಬ್ಬರಿಗೂ. ತಾನು ಇಲ್ಲೇ ಹತ್ತಿರದ ಹಳ್ಳಿಯವಳಾಗಿದ್ದು ಟೀಚರ್ ಕೆಲಸ ಮಾಡುತ್ತಿದ್ದು ನಿವೃತ್ತಿಯಾಗಿದ್ದನ್ನೂ, ಆಕೆಯ ಮಗ ವಿದೇಶದಲ್ಲಿರುವುದನ್ನ, ಮಗಳು ಮುಂಬಯಿಯಲ್ಲಿರುವುದನ್ನೂ, ಮಗಳು ಮುಂಬಯಿಗೆ ಕರೆದರೂ ತಾನು ಹೋಗಲು ಇಷ್ಟ ಪಡದೆ ಇದ್ದಾಗ ಊರಲ್ಲಿ ಒಬ್ಬಳೇ ಇರುವುದು ಬೇಡವೆಂದು ಇಲ್ಲಿ ಉಳಿಯುವ ವ್ಯವಸ್ಥೆ ಮಾಡಿದ್ದನ್ನೂ, ತನಗಿಲ್ಲಿ ನೆಮ್ಮದಿಯಿರುವುದನ್ನೂ ಹೇಳಿಕೊಳ್ಳುತ್ತಿದ್ದಳು. ಶ್ರೀಪತಿಗೆ ಮಕ್ಕಳಿದ್ದೂ ವೃದ್ಧಾಶ್ರಮದಲ್ಲುಳಿದುಕೊಂಡು ಮಕ್ಕಳಿಗೆ ಅವಮಾನವಾಗುವಂತೆ ಮಾಡುತ್ತಿದ್ದಾಳೆ ಈಕೆ ಅನಿಸಿ ಅಸಮಾಧಾನವಾಯಿತು. ತನ್ನ ಯಂಕ್ಚಿಕ್ಕಿ ಎಷ್ಟು ಒಳ್ಳೆವಳೆಂದು ತೋರಿಸಿಕೊಡಲೆಂಬಂತೆ ಯಂಕ್ಚಿಕ್ಕಿ ತಮ್ಮ ಮಗಳನ್ನು ನೋಡಿಕೊಳ್ಳಲೆಂದೇ ಈ ವಯಸ್ಸಿನಲ್ಲೂ ತಮ್ಮೊಂದಿಗೆ ಪುಣೆಗೆ ಬರುತ್ತಿರುವುದನ್ನು ವಿದ್ಯಾಭ್ಯಾಸ ಇಲ್ಲದ ಅವಳು ಭಾಷೆ ಗೊತ್ತಿಲ್ಲದ ಊರಿಗೆ ತಮಗಾಗಿ ಬರುತ್ತಿರುವುದನ್ನು ಹೆಮ್ಮೆಯಿಂದ ಹೇಳಿದ. ಸಾಮಾನ್ಯವಾಗಿ ಯಾರಾದರು ಹೊಗಳಿದರೆ ಖುಷಿಯಿಂದ ಅರಳುವ ಯಂಕ್ಚಿಕ್ಕಿ ಮುಖ ಸಪ್ಪಗೇ ಇತ್ತು. ಶ್ರೀಪತಿಗೆ ಅವಳ ಈ ನಮೂನೆ ಹೊಸದು. ಮಂಗಳಾ ಬಂದಿದ್ದರಿಂದ ಚಿನ್ಮಯಿ ತಾಯಿಗೆ ಮೀನು ತೋರಿಸುವ ಆತುರಕ್ಕೆ ಬಿದ್ದಳು. ತುಸು ಹೊತ್ತು ಆಟವಾಡಿ ಮಂಗಳೆ ತಾವು ಹೋಗಬೇಕಾದ ದಾರಿಯ ದೂರ ನೆನಪಿಸಿ ಎಲ್ಲರನ್ನು ಎಬ್ಬಿಸಿದಳು. ಶ್ರೀಪತಿ ಮಗಳನ್ನು ಅನುನಯಿಸಿ ಹೊರಡಿಸಿದ. ಯಂಕ್ಚಿಕ್ಕಿಯೂ ಮನಸಿಲ್ಲದ ಮನಸಿಂದ ಹೆಂಗಸಿಗೆ ವಿದಾಯ ಹೇಳಿ ಮಂಗಳೆಯ ಹಿಂದೆ ಹೊಟಳು. ಆದರೆ ಒಂದೊಂದು ಹೆಜ್ಜೆಗೂ ಪಾದಗಳು ಮಣಭಾರವಾಗಿತ್ತು. ಅವಳಿಗಿಂತ ಮೂರು ಮೆಟ್ಟಿಲು ಮೇಲೆ ಮಂಗಳಾ. ಮಂಗಳೆಗಿಂತ ಮತ್ತೆರಡು ಮೆಟ್ಟಿಲು ಮುಂದೆ ಶ್ರೀಪತಿ ಚಿನ್ಮಯಿ. ಆವರಣದ ಬಾಗಿಲು ದಾಟಿ ಹೊರ ಹೋಗುವ ದಾರಿಗೆ ಎಲ್ಲರೂ ಹೊರಳಿಕೊಳ್ಳುತ್ತಿದ್ದಂತೆ ಯಂಕ್ಚಿಕ್ಕಿ ತಟ್ಟನೆ ನಿಂತಳು. ಮೆಲ್ಲ ಮೆಲ್ಲ ಜನ ಹೆಚ್ಚಿರುವ ಕಡೆ ಸರಿಯುತ್ತ ತಲೆ ಮೇಲೆ ಸೆರಗೆಳೆದುಕೊಂಡು ದೇವಸ್ಥಾನಕ್ಕೆ ಪ್ರದಕ್ಷಿಣೆ ಬರುತ್ತಿರುವ ಜನರ ನಡುವೆ ಸೇರಿಕೊಂಡಳು. ಹೆಬ್ಬಾಗಿಲು ದಾಟುವಾಗ ಯಂಕ್ಚಿಕ್ಕಿಗಾಗಿ ತಿರುಗಿ ನೋಡಿದ ಮಂಗಳೆಗೆ ಅವಳು ಎಲ್ಲೂ ಕಾಣಿಸಲಿಲ್ಲ. ಯಂಕ್ಚಿಕ್ಕಿ ಎಂದು ಕರೆಯುತ್ತ ಮತ್ತೆ ಹಿಂದೆ ಬಂದಳು. ಮೆಟ್ಟಿಲುಗಳ ಮೇಲೆಲ್ಲೂ ಕಾಣಿಸಲಿಲ್ಲ. ಮತ್ತೊಬ್ಬ ಹೆಂಗಸು ಮೊದಲು ಕುಳಿತಲ್ಲೇ ಕುಳಿತಿದ್ದಳು. ಮಂಗಳಾ ಗಾಬರಿಯಿಂದ ಶ್ರೀಪತಿಯನ್ನು ಕರೆದಳು. ಇಬ್ಬರೂ ಒಂದೊಂದು ಬದಿ ಹುಡುಕಲಾರಂಭಿಸಿದರು. ಅಡಗಿ ಗಮನಿಸುತ್ತಿದ್ದ ಯಂಕ್ಚಿಕ್ಕಿಗೆ ಮಂಗಳೆ ತಾನಿರುವತ್ತಲೇ ಬರುತ್ತಿರುವುದು ಕಂಡಿತು. ಆದರೆ, ಆಕೆ ತನ್ನನ್ನು ಕಂಡಿಲ್ಲ ಎಂಬುದು ಅರ್ಥವಾಗುತ್ತಿದ್ದಂತೆ ಮರೆಗೆ ಸರಿದಳು. ಆದರೆ, ಇನ್ನೊಂದು ಬದಿಯಿಂದ ಬರುತ್ತಿದ್ದ ಶ್ರೀಪತಿಯ ಕಣ್ಣಿಗೆ ಯಂಕ್ಚಿಕ್ಕಿ ಬಿದ್ದಳು. ಆತ ಖುಷಿಯಿಂದ ಕರೆಯಬೇಕೆಂದುಕೊಂಡು ಬಾಯಿ ತೆರೆಯುವಷ್ಟರಲ್ಲಿ ಮಂಗಳಾ ಅವನ ಕಣ್ಣಿಗೆ ಬಿದ್ದಳು. ಯಂಕ್ಚಿಕ್ಕಿ ಮಂಗಳೆಯನ್ನು ಕಂಡು ಅಡಗುತ್ತಿರುವುದನ್ನು ಗಮನಿಸಿದ. ಒಂದು ಕ್ಷಣ ಏನಾಗುತ್ತಿದೆಯೆಂದರಿವಾಗದೆ ಬೆಪ್ಪನಂತೆ ನಿಂತು ಯಂಕ್ಚಿಕ್ಕಿಯನ್ನೇ ಗಮನಿಸಿದ. ಮರೆಗೆ ಸರಿಯುತ್ತ ಮಂಗಳೆಯನ್ನು ಗಮನಿಸುವುದರಲ್ಲೇ ಮಗ್ನಳಾಗಿದ್ದ ಯಂಕ್ಚಿಕ್ಕಿಯನ್ನು ಹಿಂದಿನಿಂದ ಹೋಗಿ ಗಕ್ಕನೆ ಹಿಡಿದು ನಿಲ್ಲಿಸಿ, "ಇದೆಂತಾ ಹುಚ್ಚಾಟ ಯಂಕ್ಚಿಕ್ಕಿ ನಿಂದು..? ಅವನ ಧ್ವನಿ ತುಸು ಏರಿತ್ತು. ಮಾಲು ಸಮೇತ ಸಿಕ್ಕಿಬಿದ್ದೆನೆಂದರಿವಾದ ಯಂಕ್ಚಿಕ್ಕಿ ಗರ ಬಡಿದವಳಂತೆ ಅರೆಘಳಿಗೆ ಶ್ರೀಪತಿಯನ್ನೇ ದಿಟ್ಟಿಸಿದಳು. ಮಂಗಳೆಯೂ ಬಂದು ಸೇರಿಕೊಂಡಳು. ಯಂಕ್ಚಿಕ್ಕಿ ಇದ್ದಕ್ಕಿದ್ದಂತೆ ಎರಡೂ ಕೈ ಜೋಡಿಸಿ, "ನಾ ಇನ್ಮುಂದೆ ಇಲ್ಲೇ ಇದ್ದುಬಿಡ್ತೇನೊ ಶ್ರೀಪತಿ. ನಿನ್ನ ಯಂಕ್ಚಿಕ್ಕಿಗೆ ಖಾನಾವಳಿ ನಡೆಸಿ ಸಾಕಾಗೋಯ್ತೊ ಮಗಾ.." ದುಃಖ ಉಕ್ಕುವ ಅನುಭವವಾಗಿ ಬಾಯಿಗೆ ಸೆರಗು ಜಡಿದಳು. ಏನೂ ಮಾತಾಡಬೇಡವೆಂದು ಮಂಗಳೆಗೆ ಸನ್ನೆ ಮಾಡಿದ ಶ್ರೀಪತಿ ಮಗಳನ್ನು ಮಂಗಳೆ ಕೈಗೆ ದಾಟಿಸಿ ಯಂಕ್ಚಿಕ್ಕಿಯ ಕೈ ಹಿಡಿದು ಒಂದು ಬದಿಯಲ್ಲಿ ಕುಳಿತ. ದೇವರ ಜಾಗದಲ್ಲಿ ಇಂತದ್ದೆಲ್ಲ ಸಾಮಾನ್ಯವೆಂಬಂತೆ ಜನ ಒಮ್ಮೆ ಅವರತ್ತ ನೋಡಿ ತಂತಮ್ಮ ಪಾಡಿಗೆ ಮುಂದುವರೆದರು. ಯಂಕ್ಚಿಕ್ಕಿ, ನಿಂಗೆ ಒಂದಷ್ಟು ದಿನ ಇಲ್ಲೇ ಉಳಿಯುವ ಆಸೆ ಇದ್ರೆ ಹೇಳು. ವ್ಯವಸ್ಥೆ ಮಾಡ್ತೀನಿ. ಸ್ವಲ್ಪ ದಿವಸ ಬಿಟ್ಟು ನಾನೇ ಬಂದು ಕರ್ಕೊಂಡು ಹೋಗ್ತೀನಿ" ಅಂದ. ಯಂಕ್ಚಿಕ್ಕಿ ಎರಡೂ ಕೈ ಮುಗಿದಳು. "ಮಗಾ, ಬಾಳೆಮೂಲೆ ವಂಶಾವಳಿಗೂ ಈ

ಯಂಕ್ಚಕ್ಕಿಗೂ ಋಣ ಮುಗಿಯಿತು. ಇನ್ನೇನಿದ್ರೂ ಈ ಜನ್ಮಕ್ಕೆ ಅಮ್ಮನ ಋಣ ಮಾತ್ರ ಬಾಕಿ. ನೀನೂ ಅಷ್ಟೆ ಮಗಾ. ಹೆತ್ತ ಋಣ ಸಾಕಿ ಸಂದಾಯ ಮಾಡ್ಕೊ."

ಮಂಗಳಾಗೆ ತನ್ನ ಅತ್ತೆಯವರು ಯಂಕ್ಚಕ್ಕಿ ಮಹಾ ಚಾಲಾಕಿ, ಎಷ್ಟು ಹೊತ್ತಿಗೆ ಎಂತ ನಾಟ್ಕ ಮಾಡ್ತಾಳೊ ತಿಳಿಯೋದಿಲ್ಲ. ಯಾವಾಗ್ಲೂ ಅವಳ ಮೇಲೆ ಒಂದು ಕಣ್ಣಿಟ್ಟಿರು ಎಂದು ಎಚ್ಚರಿಸಿದ್ದು ನೆನಪಾಯ್ತು. "ಯಂಕ್ಚಕ್ಕಿ, ಏಳು ಮೇಲೆ. ಈಗ್ಲೇ ತಡ ಆಗಿದೆ. ನಾಳೆ ನಮಗಿಬ್ರಿಗೂ ತುಂಬಾ ಕೆಲಸ ಇದೆ. ಚಿನ್ಮಯಿಗೆ ಏನೇನು ಬೇಕಾಗುತ್ತೊ ಅದನ್ನೆಲ್ಲ ನಿಂಗೆ ತೋರಿಸಿಕೊಟ್ಟು ನಾನು ಕೆಲಸ ಸುರು ಮಾಡ್ಬೇಕು. ಆಫೀಸ್ ಟೈಮಿಗೆ ಲ್ಯಾಪಿ ಮುಂದೆ ಕೂತಾಗ್ಬೇಕು ನಂಗೆ" ತುಸು ಅಸಹನೆಯಿಂದ ಹೇಳಿದಳು. ಯಂಕ್ಚಕ್ಕಿ ತಮ್ಮೆಲ್ಲರ ವ್ಯಾಮೋಹದಿಂದ ಬಹು ದೂರ ನಡೆದುಬಿಟ್ಟಿದ್ದಾಳೆಂಬುದು ಅರ್ಥವಾಗಿಬಿಟ್ಟಿತು ಶ್ರೀಪತಿಗೆ. ಜೊತೆಗೇ ಅವಳ ಒಗಟಿನಂತ ಮಾತಿನ ತಥ್ಯದ ಬಗ್ಗೆ ಯೋಚಿಸಿದ.

"ಮಂಗಳಾ, ನಾವು ಯಂಕ್ಚಕ್ಕಿಗೆ ಇಲ್ಲಿ ಬೇಕಾದ ವ್ಯವಸ್ಥೆ ಮಾಡಿ ಹೊರಟು ಬಿಡೋಣ. ಚಿನ್ಮಯಿ ಬಗ್ಗೆ ಯೋಚನೆ ಬೇಡ. ನಾನು ಕೆಲಸ ಬಿಟ್ಟು ಚಿನ್ನು ಜೊತೆ ಇರ್ತೇನೆ."

"ಅಂದ್ರೇ.. ಗಂಡನ ಕೆಲಸ ಬಿಡಿಸಿ ಮಗು ನೋಡ್ಕೊಳೋಕೆ ಹಾಕಿದ್ಲು ಅಂತ ನನ್ನ ಕೆಟ್ಟೋಳನ್ನಾಗಿ ಮಾಡ್ಬೇಕು ಅನ್ಕೊಂಡ್ರ್ಯಾ?" ಅಸಹಾಯಕತೆಯ ಸಿಟ್ಟು ಉಕ್ಕುತ್ತಿತ್ತು ಅವಳ ಮಾತಲ್ಲಿ. ಆ ಸಿಟ್ಟಿಗೆ ಮೂಲ ಗೊತ್ತಿರುವುದರಿಂದ ತಾಳ್ಮೆಯಿಂದಲೇ,

"ಗುಡ್ ಗರ್ಲ್ ಗುಡ್ ಬಾಯ್ ಸಿಂಡ್ರೋಮ್ ಸಾಕು ಮಂಗಳಾ. ನಾವು ಯಾರ ಕಣ್ಣಿಗೆ ಹೆದರ್ತೀವೊ ಅವರು ನಾನು ಕೆಲಸ ಬಿಟ್ರೆ ಹೆಂಡ್ತಿ ಗುಲಾಮ ಅಂತಾರೆ. ನೀನು ಕೆಲಸ ಬಿಟ್ಟು ಕೂತ್ರೆ ಸತಿ ಶಿರೋಮಣಿ ಆದರ್ಶ ಮಾತೆ ಅಂತಾರೆ. ಯಂಕ್ಚಕ್ಕಿ ಹೇಳಿದ ಸತ್ಯ ಮಾತ್ರ ಯಾರೂ ಹೇಳೋದಿಲ್ಲ." ಅನ್ನುತ್ತ ಯಂಕ್ಚಕ್ಕಿಯ ಕೈಗಳೆರಡನ್ನೂ ಕೃತಜ್ಞತೆಯಿಂದೆಂಬಂತೆ ಕಣ್ಣಿಗೊತ್ತಿಕೊಂಡು ಎದ್ದು ನಿಂತ.



**(ಮೂಲತಃ ಉ.ಕ. ದವರಾದ ಲೇಖಕಿ ಸಧ್ಯ ಬೆಂಗಳೂರಿನಲ್ಲಿ ನೆಲೆಸಿದ್ದು, ಸಾಹಿತ್ಯದ ಬಹುತೇಕ ಎಲ್ಲ ಪ್ರಕರಗಳ್ಲಿ ಪರಿಶ್ರಮ ಹೊಂದಿದವರಾಗಿದ್ದರೂ ಮುಖ್ಯವಾಗಿ ಕಥೆಗಾರ್ತಿಯಾಗಿ ಹೆಸರಾದವರು)**

---

೭ನೇ ಪುಟದಿಂದ)

ಗಾಂಧೀಜಿಯವರ ಚಿತ್ರಣವನ್ನು ಬಹಳ ಮಾನವೀಯವಾಗಿ ನಮ್ಮ ಮುಂದಿಟ್ಟಿದ್ದಾರೆ; ಗಾಂಧೀಜಿಯವರ ಬಗ್ಗೆ ಇತರರು ಅಭಿವ್ಯಕ್ತಿಸಿದ ಟೀಕೆಗಳನ್ನು ವಿಮರ್ಶೆಗಳನ್ನು ಮುಕ್ತವಾಗಿ ತೆರೆದಿಟ್ಟಿದ್ದಾರೆ, ಅದರ ಜೊತೆಗೇನೇ ಅವರ ಮಹಾನ್ ವಿಚಾರಗಳನ್ನು, ನಿಲುವುಗಳನ್ನು ವೈಭವೀಕರಣ ಇಲ್ಲದೆ ವಿವರಿಸುತ್ತಾ ಅವರು ಒಬ್ಬ ಮಹಾತ್ಮ ಎಂಬುದನ್ನು ಸಹಜವಾಗಿಯೇ ಅರ್ಥವಾಗುವಂತೆ ನಿರೂಪಿಸಿದ್ದಾರೆ. ಅದಕ್ಕಾಗಿ ಈ ಪುಸ್ತಕ ಗಾಂಧೀಜಿಯವರ ಬಗ್ಗೆ ಆಳವಾದ ಗೌರವ ಮೂಡಿಸುವುದರ ಜೊತೆಗೆ ಅವರನ್ನು ವಿಮರ್ಶಾತ್ಮಕವಾಗಿ ನೋಡುವಂತೆಯೂ ಮಾಡುತ್ತದೆ.

ಒಂದು ಕಡೆಯಿಂದ ಗಾಂಧೀಜಿಯನ್ನು ಗುಂಡಿಟ್ಟು ಕೊಂದ ಚಿತ್ರ ನಮ್ಮ ಕಣ್ಣೆದುರಿಗೆ ಇದೆ; ಹಾಗೆ ಕೊಂದವರ ಸಂತತಿಯೂ ನಮ್ಮ ನಡುವೆ ಇದೆ. ಗಾಂಧೀಜಿಯನ್ನು ಕೊಂದವರನ್ನೇ ವೈಭವೀಕರಿಸುವ ಮಾತುಗಳೂ ಕೇಳಿ ಬರುತ್ತವೆ. ಆದರೆ ಗಾಂಧೀಜಿಗೆ ಗುಂಡಿಟ್ಟರೇ ಹೊರತು ಅವರನ್ನು ಕೊಲ್ಲಲಾಗಿಲ್ಲ ಎಂಬ ಸತ್ಯ ಕೂಡಾ ನಮ್ಮ ಎದುರಿಗೆ ಇದೆ. ಗಾಂಧೀಜಿ ಹುಟ್ಟಿ ನೂರೈವತ್ತು ವರುಷ ಕಳೆದರೂ, ಅವರು ನಮ್ಮ ನಡುವೆ ಜೀವಂತವಾಗಿದ್ದಾರೆ ಎಂಬುದು ಭರವಸೆಯ ಸಂಗತಿ. 'ಗಾಂಧಿ ಕಥನ' ನಾಲ್ಕನೆ ಮುದ್ರಣಕ್ಕೆ ಹೋಗಿರುವುದು ಕೂಡಾ ಗಾಂಧೀಜಿ ಬಗ್ಗೆ ತಿಳಿದುಕೊಳ್ಳುವ ಹಂಬಲ ಇನ್ನೂ ಬತ್ತಿಲ್ಲ ಅನ್ನುವುದನ್ನು ತೋರಿಸುತ್ತದೆ. ಗಾಂಧೀಜಿ ಬದುಕಿನ ಸಂದೇಶವನ್ನು ಎದೆಯೊಳಗೆ ಇಳಿಸಿಕೊಂಡರೆ ಈ ಹೊತ್ತಿನಲ್ಲೂ ಅವರು ಎತ್ತಿ ಹಿಡಿದ ಮಾರ್ಗಗಳೇ ಇಂದಿನ ಬಿಕ್ಕಟ್ಟಿನ ಸ್ಥಿತಿಯಲ್ಲೂ ಬೆಳಕು ನೀಡಬಲ್ಲದು ಅನ್ನುವುದೇ ಒಂದು ಮಹಾ ಸಂಗತಿ ಮತ್ತು ಸತ್ಯ.

'ನನ್ನ ಬದುಕೇ ನನ್ನ ಸಂದೇಶ' ಎಂದು ದಿಟ್ಟವಾಗಿ ಹೇಳಿಕೊಂಡ ಗಾಂಧೀಜಿಯವರಿಗೆ ನಮ್ಮ ನಿಜವಾದ ನಮನ ಸಲ್ಲುವುದು ಅವರ ಸಂದೇಶವನ್ನು ನಾವು ನಮ್ಮ ಬದುಕಿನಲ್ಲಿ ಇಳಿಸಿಕೊಂಡಾಗ ಮಾತ್ರ. ಆ ಶಕ್ತಿ ನಮ್ಮೆಲ್ಲರೊಳಗೆ ಕಿಂಚಿತ್ತಾದರೂ ಮೂಡಲಿ ಎಂದು ಹಾರೈಸುತ್ತೇನೆ.



**(ದ.ಕ. ಜಿಲ್ಲೆಯ ಕಳ್ಳಿಗೆಯವರಾದ ಲೇಖಕಿ ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಹಿರಿಯ ಸಾಮಾಜಿಕ ಕಾರ್ಯಕರ್ತೆಯಾಗಿದ್ದು, ರಂಗಕರ್ಮಿಯಾಗಿಯೂ ಹೆಸರು ಮಾಡಿದ್ದಾರೆ)**

ಕಥೆಗಾರ ಅಬ್ಬಾಸ್ ಮೇಲಿನಮನಿ ಹಾಗೂ ಲೇಖಕ ಮತ್ತು ಸಂಶೋಧಕ ಜಯದೇವಪ್ಪ ಜೈನಕೇರಿಯವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ.–ಸಂ

೨ನೇ ಪುಟದಿಂದ)

ಸ್ವಾತಂತ್ರ್ಯ ಸಿಕ್ಕ ಹೊಸತರಲ್ಲಿ ಮುಸ್ಲಿಮರಿಗೆ ಒದಗಿ ಬಂದ ಅನಾಥ ಭಾವದ ಕುರಿತಂತೆ ಸರಕಾರದ ವಿಶೇಷ ಕಾಳಜಿಗೆ ಅರ್ಥವಿತ್ತು. ಮುಂದೆ ಮತವಾಗಿ ಅದು ಓಲೈಕೆಯ ರೂಪ ಪಡೆಯುತ್ತ ಸಾಗಿದಾಗಲೇ ಸೆಕ್ಯುಲರಿಸಂ ಎಂತಹ ಅನರ್ಥಕಾರಿ ಎಂದು. ಬುದ್ಧಿಜೀವಿಗಳು ಮತ್ತು ಎಡಪಂಥೀಯರು ತಿಳಿಯಬೇಕಿತ್ತು. ವಿಪರ್ಯಾಸವೆಂದರೆ ಅವರು ಹಿಂದೂ ವಿರೋಧದ ಹತ್ಯಾರವಾಗಿ ಅದನ್ನು ಬಳಸತೊಡಗಿದರು. ಇದರ ಲಾಭ ಪಡೆದ 'ಹಿಂದುತ್ವ' ವೇಷದ 'ಆಧುನಿಕ ಹಿಂದು" ವಕ್ತಾರರು ಸೆಕ್ಯುಲರ್ ಎಂಬ ಆಡದೆ ಆಚರಿಸಿಕೊಂಡು ಬಂದ ಲಾಗಾಯ್ತಿನ ನಡವಳಿಕೆಯನ್ನು ಸಂಪೂರ್ಣ ನಾಶಮಾಡಿ ಇಂದು ಕಲ್ಪಾನೀತತ ಪ್ರಮಾಣದ ರಾಜಕೀಯ ಯಶಸ್ಸನ್ನು ಸಾಧಿಸಿದ್ದಾರೆ.

ಸೆಕ್ಯುಲರಿಸಂ ಬಗ್ಗೆ ೭೦ರ ದಶಕದಲ್ಲಿ ನಮಗಂಟಿಸಿದ ಪ್ರೇಮವನ್ನು ಬಿಟ್ಟುಕೊಡುವುದು ಇಂದಿಗೂ ಕಷ್ಟವಾದರೂ ಅದನ್ನು ಎಲ್ಲರೂ ಸೇರಿ ರೂಪಕೆಡಿಸಿದ ಮೇಲೆ ಅದನ್ನು ಉಳಿಸಿಕೊಳ್ಳುವುದಾದರೂ ಹೇಗೆ? ಒಂದು ಭರವಸೆಯೇನೂ ಇದೆ.ಸೆಕ್ಯುಲರಿಸಂನ ತಾಂತ್ರಿಕ ಅರ್ಥ ಅರಿಯಲೆಳಸದ, ಆದರೆ ಅದನ್ನು ಉಳಿಸಬೇಕೆನ್ನುವ ದೊಡ್ಡ ಸಂಖ್ಯೆಯ " ಆಡದೆ ಮಾಡುವ" ಮೂಕ ಜನ ಇನ್ನೂ ಇದ್ದಾರೆ. ಆತಂಕವೆಂದರೆ ಇವರನ್ನು ಇವರ ಪಾಡಿಗೆ ನಮ್ಮ ಎಡ– ಬಲದವರು ಬಿಡಬಲ್ಲರೇ ಎಂಬುದು!

ಈ ಸಂದರ್ಭಕ್ಕೆ ತೀರ ಅಗತ್ಯವಾಗಿದ್ದ ಲೇಖನವಿದು.ಸೆಕ್ಯುಲರಿಸಂ ಬಗೆಗಿನ ನಮ್ಮ ಭ್ರಮೆ ಹರಿಸಿದ ಬರೆಹವೂ ಹೌದು.

**–ವಿಜಯೇಂದ್ರ ಪಾಟೀಲ,** ಧಾರವಾಡ

'ಸೆಕ್ಯುಲರಿಸಂ ಎಂಬ 'ಅಧರ್ಮ' ಲೇಖನ ಚೆನ್ನಾಗಿದೆ. ಆದರೆ ಇದೇ ಹೊತ್ತಿನಲ್ಲಿ ಈ ಸವಾಲಿನ ಜೊತೆಗೇ ಸಂವಿಧಾನವನ್ನು ಅಪ್ರಸ್ತುತಗೊಳಿಸಿ ನಮ್ಮ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಿ ಸರ್ವಾಧಿಕಾರವನ್ನು ಸ್ಥಾಪಿಸುವ ಹುನ್ನಾರಗಳು ನಡೆಯುತ್ತಿದ್ದು, ಈ ಅಪಾಯವನ್ನು ಎದುರಿಸುವ ಬಹುದೊಡ್ಡ ಸವಾಲು ನಮ್ಮ ಮುಂದಿದೆ ಎಂಬುದನ್ನೂ ಮರೆಯುವಂತಿಲ್ಲ.

**–ಜಿ.ಪಿ. ಬಸವರಾಜು,** ಮೈಸೂರು

ಅಯೋಧ್ಯೆಯಲ್ಲಿ ಮಸೀದಿ ನಿರ್ಮಾಣದ ಪ್ರಾರಂಭೋತ್ಸವದಲ್ಲಿ ಪ್ರಧಾನಿ ಮೋದಿಯವರು ಪಾಲ್ಗೊಳ್ಳಬೇಕೆಂಬ, ಅಲ್ಲಾಹುವಿಗೆ ಪ್ರಾರ್ಥನೆ ಸಲ್ಲಿಸಬೇಕೆಂಬ ಸಲಹೆ ಅದ್ಭುತವಾಗಿದೆ. ಅದಕ್ಕಾಗಿ ಸಂಪಾದಕರಿಗೆ ಹೃದಯಪೂರ್ವಕ ಅಭಿನಂದನೆ ಸಲ್ಲಿಸುವೆ.

ಜೊತೆಗೆ ಒಂದು ಮಾತು. ಪ್ರಧಾನಿಯವರು ಪಾಲ್ಗೊಳ್ಳಬೇಕೆಂಬ ಮಾತನ್ನು ಸಲಹೆ ಎನ್ನದೆ ನಮ್ಮೆಲ್ಲರ ಕೋರಿಕೆ, ವಿಜ್ಞಾಪನೆ– ಎನ್ನೋಣ. ಅಲ್ಲಾಹುವಿಗೆ ಪ್ರಾರ್ಥನೆ ಸಲ್ಲಿಸಬೇಕೆಂದು ಹೆಚ್ಚು ಒತ್ತಾಯಿಸದಿರೋಣ. ಅದರ ನಿರ್ಣಯವನ್ನು ಮೋದಿಯವರಿಗೇ ಬಿಡಬೇಕು. ಅವರು ಅಂತಃಸ್ಫೂರ್ತಿಯಿಂದ ಪ್ರಾರ್ಥನೆ ಸಲ್ಲಿಸಿದರೆ ಅದು ಹೊಸ ಶಕೆಯೊಂದರ ಪ್ರಾರಂಭವೇ! ಒಂದೊಮ್ಮೆ ಅದಾಗದಿದ್ದರೂ ಅವರು ಉತ್ಸಾಹದಿಂದ ಪಾಲ್ಗೊಂಡು ರಾಮಮಂದಿರಕ್ಕೆ ಇಟ್ಟಿಗೆಯನ್ನು ಕೂಡಿಸಿದಂತೆ ಇಲ್ಲೂ ಒಂದು ಇಟ್ಟಿಗೆಯನ್ನು ಕೂಡಿಸಲಿ. ಅದು ಪ್ರಾರ್ಥನೆಗೆ ಸಮಾನವಾದ ಕೈಂಕರ್ಯವೇ. ಇಷ್ಟೆಲ್ಲಾ ಆಗಬೇಕಿದ್ದರೆ ಮಸೀದಿ ನಿರ್ಮಾಣದ ಹೊಣೆ ಹೊತ್ತ ಮಂದಿ ಪ್ರಧಾನಿಯವರನ್ನು ನೇರವಾಗಿ ಆಹ್ವಾನಿಸುವಂತೆ ಆಗಲಿ. ಸಂಪಾದಕರಿಗೆ ಆ ಮಂದಿಯ ಪರಿಚಯವಿದ್ದವರ ಪರಿಚಯವಾದರೂ ಇದ್ದರೆ ಅದನ್ನು ಸಂಪಾದಕರು ಕಿಂಚಿತ್ ಬಳಸಲಿ. ಈ ಕೋರಿಕೆ ಸಂಬಂಧಿಸಿದವರನ್ನು ಹೇಗಾದರೂ ತಲುಪಲಿ. ಜೀವನದ ಕಾರಂಜಿ ಚಿಮ್ಮುವುದನ್ನು ಯಾರೂ ತಡೆಯಲಾರರು! ತಡೆಯದಿರಲಿ.

**–ಲಕ್ಷ್ಮೀಶ ತೋಳ್ಪಾಡಿ,** ಪುತ್ತೂರು

**(ಇದು ಇವರ ಪತ್ರದ ಸಂಪಾದಿತ ರೂಪವಾಗಿದ್ದು, ಪತ್ರದ ಉಳಿದ ಭಾಗವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಇತರರೂ ಈ ಚರ್ಚೆಯನ್ನು ಮುಂದುವರೆಸಲು ಈ ಮೂಲಕ ಆಹ್ವಾನಿಸುತ್ತಿದ್ದೇವೆ.–ಸಂ.)**





## ಗಾಂಧಿ ಕಥನ

**ನಾಲ್ಕನೇ ಆವೃತ್ತಿ ಬಿಡುಗಡೆಯಾಗಿದೆ**

ಕೋವಿಡ್ ಕಾರಣದಿಂದಾಗಿ ಸ್ಥಗಿತಗೊಂಡಿದ್ದ ಡಿ.ಎಸ್. ನಾಗಭೂಷಣ ಅವರ ಗಾಂಧಿ ಕಥನದ ನಾಲ್ಕನೇ (ಪರಿಷ್ಕೃತ) ಆವೃತ್ತಿ ಇದೀಗ ಬಿಡುಗಡೆಯಾಗಿದ್ದು ಆಸಕ್ತರು ಪ್ರತಿಗಳಿಗಾಗಿ ಈ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದು :

ಬಿಡಿ ಪ್ರತಿಗಳಿಗಾಗಿ: 9481351079

ಹತ್ತಕ್ಕಿಂತ ಹೆಚ್ಚಿನ ಪ್ರತಿಗಳಿಗಾಗಿ: 7204660617/ 8618369594

**–ಎಂ. ಮೂನಿಸ್ವಾಮಿ ಅಂಡ್ ಸನ್ಸ್, ಬೆಂಗಳೂರು**

# ನವಿಲುಗರಿ

## ಸಿದ್ಧಲಿಂಗಯ್ಯನವರ ಎರಡು ಪದ್ಯಗಳು

### ೧. **ಮತ್ತೆ ಅವ್ವನ ನೆನಪು**



ಹೊತ್ತು ಹುಟ್ಟುವ ಮುನ್ನ ಮಲಗಿದ್ದ ಮಕ್ಕಳನು
ಸವಿನಿದ್ದೆ ಕೆಡದಂತೆ ಮುದ್ದುಮಾಡಿ
ದಟ್ಟ ಅಡವಿಗೆ ಹೋಗಿ ಸೌದೆ ಹೊರೆಯನು ತಂದು
ಮಾಗಡಿಯ ಸಂತೆಯಲಿ ಮಾರಿಬಂದು
ನಮ್ಮನ್ನು ಸಾಕಿದಳು ಅಕ್ಕರೆಯಲಿ

ಕಂಡವರ ಮನೆಯಲ್ಲಿ ಮುಸುರೆಯನು ತಿಕ್ಕಿದಳು
ಸೂತಕದ ಬಟ್ಟೆಗಳ ಒಗೆದು ಸುಸ್ತಾದರೂ
ಹೆತ್ತಮಕ್ಕಳ ಕಂಡು ನಗುತ್ತಿದ್ದಳು



ನನಗವಳು ತಂದಿದ್ದ ಮುದ್ದೆ ಹಳಸಿಹುದೆಂದು
ಊಟಮಾಡದೆ ನಾನು ಮನೆಯ ತೊರೆದು
ಕೋಪದಲಿ ಹೊರಟಾಗ ನಡುಬೀದಿಯಲಿ ನಿಲಿಸಿ
ಕಣ್ಣೀರ ಹಾಕುತ್ತ ಬಾಮಗನೆ ಮನೆಗೆಂದು
ದೈನ್ಯದಲಿ ಬೇಡಿದುದ ಮರೆಯಲೇನು

ಯಾವ ಉಲ್ಲಂಘನೆಯ ಯಾಕಾಗಿ ಮಾಡಿದಳೊ
ಅಪವಾದ ನಿಂದನೆಗೆ ಗುರಿಯಾದಳು
ಆರು ಮಕ್ಕಳ ತಾಯಿ ನನ್ನವ್ವ ದುಡಿದುಡಿದು
ಅಸ್ಥಿಪಂಜರವಾಗಿ ಕೊನೆಯಾದಳು

ಬದುಕಿದ್ದ ಕಾಲದಲಿ ಕಾಲಕಸವನು ಮಾಡಿ
ಸತ್ತಾಗ ಕಣ್ಣೀರ ಮಿಡಿದರೇನು
ಮತ್ತೆ ಬರುವಳೆ ತಾಯಿ ಕೂಗುವಳೆ ರೇಗುವಳೆ
ಧೂಳನ್ನು ತೂರುವಳೆ ಕೋಪದಲ್ಲಿ.

### ೨.ಅಪ್ಪ

ಮನೆಯೇ ಇಲ್ಲದ ಭಿಕಾರಿಯಂತೆ
ಮನಸೇ ಇಲ್ಲದ ಮೌನಿಯಂತೆ
ಹೆಂಡತಿ ಮಕ್ಕಳ ಮರೆತವನಂತೆ
ಗಿಡಮರಗಳ ಜೊತೆ ನೀ ಬೆಳೆದೆ



ಚಿತ್ರಗಳು: ಹಜ಼ರತ್ ೭೨



ಭಾರದ ನೊಗಕ್ಕೆ ಹೆಗಲನು ಕೊಟ್ಟು
ಗದ್ದೆಯ ಉತ್ತೆ ಎತ್ತಾಗಿ
ಹಗಲಿರುಳೆನ್ನದೆ ದುಡಿಯುತಲಿದ್ದೆ
ಧಣಿಗಳ ಹಟ್ಟಿಯ ತೊತ್ತಾಗಿ

ಒಡೆಯರ ತೋಟವ ಕಾಯುತಲಿದ್ದೆ
ಆಲೆಮನೆಯಲಿ ಅರೆಯುತಲಿದ್ದೆ
ಹೊಟ್ಟೆಯ ಪಾಡಿಗೆ ಬಟ್ಟೆಯ ಗಿರಣಿಯ
ಕಾರ್ಮಿಕನಾಗಿ ನೀ ದುಡಿದೆ

ಸಾಲ ವಸೂಲಿಯ ವಾಹನದಲ್ಲಿ
ಬಂದಿಳಿದಾಗ ರಾಕ್ಷಸರು
ಕೈ ಕೈ ಮುಗಿದೆ ಕಾಲನು ಹಿಡಿದೆ
ಕಣ್ಣೀರಿಟ್ಟೆ ದೈನ್ಯದಲಿ

ಬೈದರೆ ನಿನ್ನಲಿ ಬೈಗುಳವಿಲ್ಲ
ಒದ್ದವರನ್ನೆ ಬುದ್ಧೀ ಎಂದೆ
ವೈರಕೆ ನಿನ್ನಲಿ ವೈರವೆ ಇಲ್ಲ
ಬುದ್ಧನಂತೆ ನೀ ಬದುಕಿದ್ದೆ

ತೆಂಗಿನ ಮರವನು ಏರಿದೆ ನೀನು
ಅಡಿಕೆಯ ಮರವನು ಏರಿದೆ ನೀನು
ಉರಿಯುವ ಸೂರ್ಯನ ಬಿಸಿಲಿನ ಝಳಕೆ
ಸುಟ್ಟು ಕರಕಲಾದೆ

ಅಪ್ಪಾ ನೀನು ಕನಸಿಗೆ ಬರುವೆ
ಬೆದರಿದ ಗೋವಿನ ರೂಪದಲಿ
ಕಾಣುವೆ ನೀನು ಬಲೆಯಲಿ ನರಳುವ
ಪಾರಿವಾಳಗಳ ಗುಂಪಿನಲಿ.

*(ಇವರ 'ಊರು ಸಾಗರವಾಗಿ' ಸಂಕಲನದಿಂದ ಆಯ್ದವು)*

## ವೈದೇಹಿಯವರ ಒಂದು ಪದ್ಯ

### ಶಬ್ದ ಶಬರಿ



ಅಂದಂತೆ ಎಷ್ಟೋ ಸಲ...
ಶಬ್ದಗಳು ತರಕಾರಿಗಳ ಹಾಗೆ
ತಾಜಾಗಳ ರಾಶಿಯಲಿ ಮೋಸದಲ್ಲಡಗಿ
ಸಂತೆ ಚೀಲಕ್ಕೆ ದಾಟಿಕೊಳ್ಳುವ ಹಾಗೆ
ಆಡಿ ಬಾಡಿ ಮುದುಡಿ ಬಸವಳಿದ ಶಬ್ದಗಳು
ಹೊಸ ಜಾಡಿನಲ್ಲಿ ಎಂತೊ ಏನೋ ಹೊಕ್ಕು
ಆಯ್ಕಟ್ಟು ಜಾಗದಲಿ ಸದ್ದಿಲ್ಲದೇ ಕುಳಿತು,
ಕಳ್ಳಾಟಿಕೆಯಲ್ಲಿ ಕೈಕಟ್ಟಿ ಕಣ್ಕಟ್ಟಿ
ಈಗ ಕೊಯ್ದಂತೆ ಮುಗ್ಧ ಕಾಣಿಸುವವು



ಪದಮಜ್ಜೆಯೊಳಗೇನೇ ಮನೆಯ ಮಾಡಿ
ಗುಪ್ತವಾಸದಿ ನಲಿವ ಇಂಥ ನಿರ್ಲಜ್ಜಗಳ
ಮಣ್ಣಘಮ ವಾಸನೆಗೆ ಮುಸುಕಿಡುವ ಮಾತುಗಳ
ರಾಸಾಯನಿಕದ ರಸ ಮೌನ ನಾತಗಳ
ಶಬ್ದ ಕಾನನದಲ್ಲಿ ಆಡುತಾಡುತ್ತಾ
ಪತ್ತೆ ಹಚ್ಚ ಬೇಕು
ಮುಟ್ಟುತ್ತ ಮುರಿಯುತ್ತ, ಕಚ್ಚಿ ರುಚಿ ನೋಡುತ್ತ
ಕೆಟ್ಟ ಯಾವುದು ಬಿಟ್ಟ ಯಾವುದು ಮೂಸಿ, ಕಾಸಿ
ಬಡಿದು ಧ್ವನಿ ಆಲಿಸಿ
ಗೊತ್ತಾಗದಂತೆ ಹೊಕ್ಕ ಹುಳದಾರಿ ಶೋಧಿಸಿ
ಸೋಸಿ ಗಾಳಿಸಿ ನಿರ್ಮೋಹದಿಂ ಬಿಸುಟು
ಉತ್ತಮವ ಆಯ್ದು ಬುಟ್ಟಿಗೇರಿಸುವ
ಕಲೆ ತಿಳಿಯಬೇಕು
ಪದ್ಯರಾಮನ ಶಬರಿ ನಾನಾಗಬೇಕು

***(ಇವರ ದೀಪದೊಳಗೊಂದು ದೀಪ; ಎಂಬ ಹೊಸ ಕವನ ಸಂಕಲನದಿಂದ ಆಯ್ದ ಒಂದು ಪದ್ಯ)***

### ಅಮಾವಾಸ್ಯೆ–ಹುಣ್ಣಿಮೆ



ಮುಂದಿನ ಬಾಗಿಲಿನಿಂದ
ಹಗಲು ಹೊರಗೆ ಹೋದದ್ದೂ
ಒಂದು ಅಮಾವಾಸ್ಯೆ

ಹಿಂದಿನ ಬಾಗಿಲಿನಿಂದ
ಕತ್ತಲು ಒಳಗೆ ಬಂದದ್ದೂ
ಒಂದು ಅಮಾವಾಸ್ಯೆ

ಚುಕ್ಕಿಗಳು ಚಂದಿರನ
ಹಸೆ ಮಣೆ ಮೇಲೆ ಕೂರಿಸಿದ್ದೂ
ಒಂದು ಹುಣ್ಣಿಮೆ



ಹಕ್ಕಿಗಳು ಬೆಳದಿಂಗಳ
ಕುತ್ತಿಗೆಗೆ ತಾಳಿ ಕಟ್ಟಿಸಿದ್ದೂ
ಒಂದು ಹುಣ್ಣಿಮೆ

**–ರಾಜೇಂದ್ರ ಬಡಿಗೇರ್**

***(ಇವರ ಇತ್ತೀಚಿನ 'ಸ್ಟೇಟಸ್ ಕವಿತೆಗಳು' ಸಂಕಲನದಿಂದ ಆಯ್ದ ಪದ್ಯ)***

# ಭಾಷೆ-ಸಂಸ್ಕೃತಿ-ಶಿಕ್ಷಣ-ರಾಜಕಾರಣ ಇತ್ಯಾದಿ ಮೂರು ಚಿಟಿ ಟಿಪ್ಪಣಿಗಳು

## ಸುದ್ದಿಶೂರ ಪ್ರಸನ್ನ



ಪ್ರಸನ್ನ ಮತ್ತೆ ಸುದ್ದಿಯಲ್ಲಿದ್ದಾರೆ. ಚರಕ ದಿವಾಳಿಯಾಗಿದೆ ಎಂದು ಘೋಷಿಸಿದ್ದಾರೆ. ಚರಕದ ಸಂಬಂಧ ಬಿಟ್ಟರೆ ನಾಟಕದ ಪ್ರಸನ್ನ ಎಂದೇ ಪ್ರಸಿದ್ಧರಾದ ಈ ವ್ಯಕ್ತಿ ಏನು ಮಾಡಿದರೂ ಅದನ್ನು ನಾಟಕೀಯಗೊಳಿಸಿಯೇ ಮಾಡುವುದು ಮತ್ತು ಅದರ ಹಿಂದೆ ಒಂದು ಅನ್ಯ ಉದ್ದೇಶವಿದ್ದೇ ಇರುತ್ತದೆ ಎಂದು ಅವರನ್ನು ಬಹುಕಾಲದಿಂದ ಬಲ್ಲ ನಾನು ಅವರ ಈ ದಿವಾಳಿ ಘೋಷಣೆಯನ್ನು ಅದರ ಮುಖಬೆಲೆಯಲ್ಲಿ ನಂಬಲಾರೆ. ಒಂದಷ್ಟು ಕಾಲ ಚರಕದೊಂದಿಗೆ ಆಪ್ತ ಒಡನಾಟವಿಟ್ಟುಕೊಂಡಿದ್ದ ನಾನು ಮತ್ತು ನನ್ನ ಪತ್ನಿ ಈ ದಿವಾಳಿಯ ಸುದ್ದಿ ಕೇಳಿ ನಮಗೆ ಸುಪರಿಚಿತರಾದ ಈ ಸಂಸ್ಥೆಯಲ್ಲಿನ ದುಡಿಯುವ ಮಹಿಳೆಯರ ಬಗ್ಗೆ ಒಂದು ಕ್ಷಣ ಆತಂಕಿತರಾಗಿ ವಿಚಾರಿಸಿದಾಗ ಗೊತ್ತಾದದ್ದು, ಇದು ಪ್ರಸನ್ನರ ವೈಯಕ್ತಿಕ ಘೋಷಣೆಯೇ ಹೊರತು ಚರಕದ ಅಧಿಕೃತ ಘೋಷಣೆಯಲ್ಲ ಎಂಬುದು. ಏಕೆಂದರೆ ಗುಣಮಟ್ಟದ ಮತ್ತು ಜನಪ್ರಿಯ ಉತ್ಪನ್ನಗಳನ್ನು ತಯಾರಿಸುತ್ತಾ ೨೫ ವರ್ಷಗಳ ಕಾಲ ಬೆಳೆದಿರುವ ಚರಕದಂತಹ ವೃತ್ತಿಪರ ಸಂಸ್ಥೆ ನಾಲ್ಕಾರು ತಿಂಗಳ ವ್ಯಾಪಾರ ಕುಸಿತವನ್ನು ತಾಳಲಾಗದಷ್ಟು ದುರ್ಬಲವಾಗಿರಲಾರದು. ಆದರೆ ಅದು ನಿಜವಾಗಿಯೂ ದುರ್ಬಲವಾಗಿದ್ದರೆ ಅದಕ್ಕೆ ಪ್ರಸನ್ನ ಅದನ್ನು ಬಳಸಿಕೊಂಡು ತಾವು ವೈಯಕ್ತಿಕವಾಗಿ ಬೆಳೆಯಲು ನಡೆಸಿರುವ ಪ್ರಯತ್ನಗಳೇ ಕಾರಣ. ಮುಖ್ಯವಾಗಿ ಕಳೆದ ಆರೇಳು ವರ್ಷಗಳಲ್ಲಿ ಹಲವು ವೇಷಗಳನ್ನು ತೊಟ್ಟ ಅವರ ನೇಕಾರರ ಚಳುವಳಿ ಈಗ ಗ್ರಾಮ ಸೇವಕ ಸಂಘ ರೂಪ ತಾಳಿ ಪ್ರಸನ್ನ ಗ್ರಾಮ ಸೇವೆಗಾಗಿ ಬೆಂಗಳೂರು ಸೇರಿ ಚರಕ ದಿಕ್ಕೆಟ್ಟದ್ದು. ಇದು ಅನಿರೀಕ್ಷಿತವೇನಾಗಿರಲಿಲ್ಲ. ಏಕೆಂದರೆ, ಪ್ರಸನ್ನ ಎಂದೂ ಹಳ್ಳಿಯ ವ್ಯಕ್ತಿಯಾಗಲು ಸಾಧ್ಯವಿಲ್ಲದಷ್ಟು ಮಹತ್ವಾಕಾಂಕ್ಷೆಯ ವ್ಯಕ್ತಿ. ಸದಾ ಗಾಂಧಿಯ ಜಪ ಮಾಡುತ್ತಲೇ ಹೆಸರು ಮಾಡಿರುವ ಈ ಮನುಷ್ಯನಿಗೆ ಗಾಂಧಿ ನುಡಿಗಟ್ಟಿನ ಕೀಲಿ ಶಬ್ದ 'ಮಿತಿ'-ಅಂದರೆ ಒಮ್ಮೆಗೆ ಒಂದು ಹೆಜ್ಜೆ ಮಾತ್ರ ಎಂಬುದರ ಪರಿಚಯವೇ ಇದ್ದಂತಿಲ್ಲ.

ಹಾಗೆ ನೋಡಿದರೆ ಪ್ರಸನ್ನರಿಗೆ ಬೆಂಗಳೂರೂ ಚಿಕ್ಕ ಊರು. ಅವರು ದೆಹಲಿಗೆ ಹೇಳಿ ಮಾಡಿಸಿದ-ಅವರು 'ಮಾಡಲ್ಪಟ್ಟದ್ದೂ' ದೆಹಲಿಯಲ್ಲೇ ಅಲ್ಲವೇ?- ವ್ಯಕ್ತಿ ಎಂದು ಹೇಳಿದರೆ ಅವರ ಬಗ್ಗೆ ಎಲ್ಲವನ್ನೂ ಹೇಳಿದಂತೆ. ಹಾಗೇ ಚರಕದ ಸದ್ಯದ ಬಿಕ್ಕಟ್ಟಿನ ಬಗ್ಗೆಯೂ ಎಲ್ಲವನ್ನೂ ಹೇಳಿದಂತೆ. ಇಂಥವರು ಏನೇ ಮಾಡಿದರೂ ಅದು ಇನ್ನೊಂದಕ್ಕೆ ಸಾಧನವೇ ಹೊರತು ಅದಕ್ಕೆ ಸ್ವಂತ ಅಸ್ಮಿತೆ-ಅಸ್ತಿತ್ವ ಇರಲಾರದಷ್ಟೇ ಅಲ್ಲ, ಇರದಂತೆ ಮಾಡಲಾಗುವುದು ಕೂಡ. ಹಾಗಾಗಿಯೇ ಚರಕವನ್ನು ಎಂದಿನಿಂದಲೂ ಬೆಂಗಳೂರು ಕೇಂದ್ರಿತ ಪ್ರತಿಷ್ಠಿತರ ಸಂಸ್ಥೆಯಾದ 'ದೇಸಿ'ಯ ಗೂಟಕ್ಕೆ ಕಟ್ಟಿ ಹಾಕಿರುವುದು. ತಮ್ಮನ್ನು ಮೂಲತಃ ಮಾರ್ಕ್ಸ್‌ವಾದಿ ಎಂದು ಕರೆದುಕೊಳ್ಳುವ ಪ್ರಸನ್ನ ಚರಕದ ದುಡಿಯುವ ಮಹಿಳೆಯರಿಗೆ ತಮ್ಮ ಬೆವರಿನ ಬೆಲೆ ಕಟ್ಟಿಕೊಳ್ಳುವ ಸ್ವಾತಂತ್ರ್ಯವನ್ನು ನೀಡುವುದಿರಲಿ, ಅವರ ಉತ್ಪನ್ನಗಳ ಮೇಲೆ ತಮ್ಮ ಸಂಸ್ಥೆ ಚರಕದ ಹೆಸರನ್ನೂ ಹಾಕಿಕೊಳ್ಳಲು ಬಿಡದ 'ಪಾಲಿಟ್‌ಬ್ಯೂರೋ' ರಾಜಕಾರಣವನ್ನು ಅನುಸರಿಸುತ್ತಿರುವುದು ಸಹಜವೇ ಆಗಿದೆ.

ತಮ್ಮ ಮಹತ್ವಾಕಾಂಕ್ಷೆಯ ಸಾಕಾರಕ್ಕಾಗಿ ಒಂದಲ್ಲ ಒಂದು ಹೆಸರಲ್ಲಿ ಸರ್ಕಾರದ ಎಲ್ಲ ಸಾಧ್ಯ ಮೂಲಗಳಿಂದ ಹಣ ತರಬಲ್ಲ ಛಾತಿ ಹೊಂದಿರುವ ಪ್ರಸನ್ನರ ಚರಕದ ಈ ದಿವಾಳಿ ಘೋಷಣೆಯೂ ಇಂಥದೊಂದು ಪ್ರಯತ್ನವಾಗಿದ್ದರೆ ಆಶ್ಚರ್ಯವಿಲ್ಲ..

## ಶಿಕ್ಷಣ ಮಾಧ್ಯಮದ ಪ್ರಶ್ನೆ ಮತ್ತೆ ನ್ಯಾಯಾಲಯಕ್ಕೆ

ಮಾತೃ/ಪ್ರಾದೇಶಿಕ ಭಾಷಾ ಶಿಕ್ಷಣ ಮಾಧ್ಯಮದ ಪ್ರಶ್ನೆಯನ್ನು ಇಂಗ್ಲಿಷ್‌ಪರ ಪಟ್ಟಭದ್ರ ಹಿತಾಸಕ್ತಿಗಳು ಎಷ್ಟೇ ಆಳಕ್ಕೆ ತಳ್ಳಿ ಮಣ್ಣು ಮುಚ್ಚಿದರೂ ಅದು ಮತ್ತೆ ಮತ್ತೆ ಗೋರಿಯಿಂದ ಎದ್ದು ಬರುತ್ತಿದೆ. ಕಾರಣ ಈ ದೇಶದಲ್ಲಿ ನಿಜಾರ್ಥದ ಮಣ್ಣಿನ ಮಕ್ಕಳು ಇನ್ನೂ ಗಣನೀಯ ಸಂಖ್ಯೆಯಲ್ಲಿ ಜೀವಂತವಿದ್ದಾರೆ. ನಮ್ಮ ಕುಮಾರಸ್ವಾಮಿ ಮತ್ತು ಸುರೇಶ್‌ಕುಮಾರ್‌ರ ಆತ್ಮಘಾತುಕತನದ ಸಾರಾಸಗಟು ರೂಪದಂತಿರುವ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಜಗನ್ಮೋಹನ ರೆಡ್ಡಿ ತಮ್ಮ ರಾಜ್ಯದ ಎಲ್ಲ ಶಾಲೆಗಳನ್ನೂ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸಿದಾಗ ಡಾ. ಶ್ರೀನಿವಾಸ ಗುಂಟೆಪಲ್ಲಿ ಎಂಬ ಯುವ ವೈದ್ಯ ತಮ್ಮ ರಾಜ್ಯ ಉಚ್ಚ ನ್ಯಾಯಾಲಯದ ಮೆಟ್ಟಿಲೇರಿ ಸಂಬಂಧಿತ ಸರ್ಕಾರಿ ಆದೇಶ ರದ್ದಾಗುವಂತೆ ನೋಡಿಕೊಂಡದ್ದು ರಾಷ್ಟ್ರಾದ್ಯಂತ ಸುದ್ದಿಯಾಗಿತ್ತು.. ಘಟಾನುಘಟಿ ವಕೀಲರ ಮೂಲಕ ತನ್ನ ಎದುರು ನಿಂತ ಸರ್ಕಾರ, ಖಾಸಗಿ ಶಾಲೆಗಳ ಸಾಹುಕಾರರು, ಇಂಗ್ಲಿಷ್ ತಮ್ಮ ಮುಕ್ತಿಯ ಸಾಧನ ಎಂದು ನಂಬಿರುವ ದಲಿತ ಮತ್ತು ಇತರೆ ಹಿಂದುಳಿದ ವರ್ಗಗಳ ಸಂಘಟನೆಗಳ ಲಾಬಿಗಳಿಂದ ಎದೆಗುಂದದೆ ಇಂದ್ರನೀಲಬಾಬು ಎಂಬ ಬದ್ಧತೆಯುಳ್ಳ ಸಮರ್ಥ ವಕೀಲರೊಬ್ಬರ ಮಾರ್ಗದರ್ಶನದಲ್ಲಿ ನಡೆಸಿದ ಈ ತೆಲುಗು ಬಿಡ್ಡನ ಏಕಾಂಗಿ ಹೋರಾಟ-ಅದರ ಅಂತಿಮ ಪರಿಣಾಮ ಏನೇ ಇರಲಿ-ನಿಜವಾಗಿಯೂ ಐತಿಹಾಸಿಕವಾದದ್ದು, ಈ ತೀರ್ಪನ್ನು ಆಂಧ್ರ ಪ್ರದೇಶ ಸರ್ಕಾರ ಈಗ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು ನ್ಯಾಯಾಲಯ ಅದನ್ನು ವಿಚಾರಣೆಗೆ ಕೈಗೆತ್ತಿಕೊಂಡಿದೆ.



ತಾನು ಕಟ್ಟಾ ರಾಷ್ಟ್ರೀಯವಾದಿ ಎಂದು ಹೇಳಿಕೊಳ್ಳುವ ಇಂದಿನ ಸರ್ಕಾರದ ಹೊಸ ಶಿಕ್ಷಣ ನೀತಿಯೂ ಮಾತೃ./ಪ್ರಾದೇಶಿಕ ಭಾಷಾ ಮಾಧ್ಯಮ ಶಿಕ್ಷಣದ ಪ್ರಶ್ನೆಯನ್ನು ಸ್ಪಷ್ಟವಾಗಿ ಹಾಗೂ ದಿಟ್ಟವಾಗಿ ಮುಖಾಮುಖಿಯಾಗಲು ಹಿಂಜರಿದಿದೆ. ಇನ್ನು ಮಕ್ಕಳ ಶಿಕ್ಷಣ ಮಾಧ್ಯಮದ ಆಯ್ಕೆ ಪೋಷಕರ ಮೂಲಭೂತ ಹಕ್ಕೆಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ. ಈ ಹಿನ್ನೆಲೆಯಲ್ಲಿ ಈ ಸುದ್ದಿ ಪ್ರಾದೇಶಿಕ ಭಾಷಾ ಶಿಕ್ಷಣಮಾಧ್ಯಮದ ಪ್ರತಿಪಾದಕರಿಗೆ ಸ್ವಲ್ಪವಾದರೂ ಆಸೆ ಹುಟ್ಟಿಸಿದೆ. ಕಾರಣ, ಈ ತೀರ್ಪು ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ನೋಟಕ್ಕಾದರೂ ಮಹತ್ವದ್ದೆಂದು ಕಂಡು ಅದಕ್ಕೆ ತಡೆ ನೀಡಲು ನಿರಾಕರಿಸಿದೆ. ಆಂಧ್ರ ಉಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಅಡಕವಾಗಿರುವ ಅಂಶಗಳು ಅಷ್ಟು ಮಹತ್ವದ್ದಾಗಿವೆ. ಮುಖ್ಯ ನ್ಯಾಯಾಧೀಶ ಜೆ.ಕೆ. ಮಹೇಶ್ವರಿ ಅವರ ನೇತೃತ್ವದ ಪೀಠದಿಂದ ಬರೆಯಲ್ಪಟ್ಟಿರುವ ಈ ತೀರ್ಪು ಈ ದೇಶದ ಶಿಕ್ಷಣ ಮಾಧ್ಯಮ ನೀತಿಯ ಇತಿಹಾಸವನ್ನೇ ಜಾಲಾಡಿ ಹಲವು ದಿಕ್ಕು ಮತ್ತು ನೆಲೆಗಳಿಂದ ಅದನ್ನು ತೀಕ್ಷ್ಣ ಪರಿಶೀಲನೆಗೆ ಒಳಪಡಿಸಿ ತನ್ನ ನಿರ್ಣಯಕ್ಕೆ ಬಂದಿದೆ. ಮುಖ್ಯವಾಗಿ ಶಿಕ್ಷಣದ ಉದ್ದೇಶ ಮತ್ತು ಸ್ವರೂಪದ ಬಗ್ಗೆ ನಮ್ಮ ಪ್ರಾಚೀನರು ಮತ್ತು ಆನಂತರ ನಮ್ಮ ರಾಷ್ಟ್ರ ನಿರ್ಮಾತೃಗಳು ಮಂಡಿಸಿದ ವಿಚಾರಗಳನ್ನು ಚರ್ಚಿಸುವ ಈ ತೀರ್ಪು ಭಾರತದಲ್ಲಿ ಇಂಗ್ಲಿಷ್ ಶಿಕ್ಷಣವನ್ನು ಪರಿಚಯಿಸಿದ ವಸಾಹತುಶಾಹಿಯ ರಾಜಕೀಯ ಯೋಜನೆಯ ಒಳಹೊಕ್ಕು ನೋಡಿ ನಂತರ ನಮ್ಮ ಭಾಷಾವಾರು ಪ್ರಾಂತ್ಯಗಳ ರಚನೆಯ ನಿರ್ಧಾರದ ಹಿಂದಿನ ಸಾಂಸ್ಕೃತಿಕ ರಾಜಕೀಯ ವಿವೇಚನೆಯ ಮೇಲೆ ಬೆಳಕು ಚೆಲ್ಲುತ್ತಾ ನಮ್ಮ ಮಕ್ಕಳಿಗೆ ನಮ್ಮ ಪರಂಪರೆಯ ವಿವೇಕ ಮತ್ತು ಸಂಪರ್ಕ ಹಾಗೂ ಸಹಜ ಕಲಿಕೆಯ ಹಕ್ಕನ್ನೂ ಅವರಿಗೆ ನಿರಾಕರಿಸಲು ಆಂಧ್ರ ಸರ್ಕಾರದ ಆಜ್ಞೆ ಪ್ರಯತ್ನಿಸುತ್ತದೆ ಎಂದು ಹೇಳುತ್ತಲೇ ಈ ಆಜ್ಞೆ ಹೇಗೆ ನಮ್ಮ ಸಂವಿಧಾನದ ವಿವಿಧ ಪರಿಚ್ಛೇದ ಮತ್ತು ಉಪನಿಬಂಧನೆಗಳನ್ನು ಉಲ್ಲಂಘಿಸುತ್ತಿದೆ ಎಂದು ವಿವರಿಸುತ್ತಾ ನ್ಯಾಯಾಧೀಶರು ಅದನ್ನು ರದ್ದುಗೊಳಿಸುವ ತೀರ್ಪು ನೀಡಿದ್ದಾರೆ

ಹಾಗಾಗಿ ಈ ತೀರ್ಪನ್ನು ವಿಚಾರಣೆಗೆ ಒಳಪಡಿಸುವ ಮನಸ್ಸು ಮಾಡಿದರೆ ಕ್ರಮೇಣ ದೇಶಾದ್ಯಂತ ಶಿಕ್ಷಣ ಮಾಧ್ಯಮ ಇಂಗ್ಲಿಷ್‌ಮಯವಾಗುವಂತೆ 'ಉದಾರ'ವಾಗಿ ರೂಪಿತವಾಗಿರುವ ನಮ್ಮ ಶಿಕ್ಷಣ ಮಾಧ್ಯಮ ನೀತಿ ಸಂಪೂರ್ಣ ಮರುವಿಮರ್ಶೆಗೆ ಒಳಪಡುವ ಒತ್ತಡಗಳ ವಾತಾವರಣವನ್ನು ನಿರ್ಮಿಸಬಹುದಾಗಿದೆ. ಆಂಧ್ರ ಮತ್ತು ಹಲವು ರಾಜ್ಯ ಸರ್ಕಾರಗಳಿಗೆ ಈ ವಿಚಾರಣೆ ಆತ್ಮವಿಶ್ವಾಸವನ್ನು ಒದಗಿಸಬಹುದು. ಕನಿಷ್ಠ ನಮಗೆ ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಗಳನ್ನು ಕ್ರಮೇಣ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿತ್ತಿರುವ ಕರ್ನಾಟಕ ಸರ್ಕಾರದ ಏಕಪಕ್ಷೀಯ ನಿರ್ಧಾರಗಳನ್ನಾದರೂ ಪ್ರಶ್ನಿಸಲು ಅವಕಾಶ ಉಂಟಾಗುತ್ತದೆ.

ಬಳ್ಳಾರಿಯ ಗೆಳೆಯ ಚೆನ್ನಬಸವಣ್ಣನವರು ಹೇಳಿದಂತೆ ತನ್ನ ಆತ್ಮಾಹುತಿಯ ಮೂಲಕ ನಾವು ಕರ್ನಾಟಕವನ್ನು ಪಡೆಯಲು ಸಾಧ್ಯ ಮಾಡಿದ ಪೊಟ್ಟಿ ಶ್ರೀರಾಮುಲುವಿನ ತೆಲುಗು ಬಿಡ್ಡಗಳೇ ಕರ್ನಾಟಕದಲ್ಲಿ ಕನ್ನಡವನ್ನು ಉಳಿಸಲು ನಮಗೆ ನೆರವಾಗಬಹುದು!

## ಭೈರಪ್ಪನವರ ಹೊಸ ವೃತ್ತಿ!



ಈ ಮಧ್ಯೆ ನಮ್ಮ ಎಸ್.ಎಲ್ ಭೈರಪ್ಪನವರು ಮೊನ್ನೆ ಮೈಸೂರಿನ ಪುಢಾರಿ ಸಭೆಯೊಂದರಲ್ಲಿ ಮೋದಿ ದೇಶ ಕಂಡ ಅತ್ಯುತ್ತಮ ಪ್ರಧಾನಿ ಎಂದು ಹೊಗಳಿದ್ದಲ್ಲದೆ, ಅವರು ೨೦೨೪ರ ಮತ್ತು ೨೦೨೯ರ ಚುನಾವಣೆಗಳಲ್ಲೂ ಗೆದ್ದು ತಮ್ಮಷ್ಟೇ ಸಮರ್ಥರಾದ ವ್ಯಕ್ತಿಯನ್ನು ಪ್ರಧಾನಿ ಸ್ಥಾನಕ್ಕೆ ತಯಾರುಮಾಡಿ ಆತನಿಗೆ ಅಧಿಕಾರ ಒಪ್ಪಿಸಿ ವಾನಪ್ರಸ್ಥಾಶ್ರಮಕ್ಕೆ ತೆರಳಬೇಕೆಂದು ಸಲಹೆ ನೀಡಿದ್ದಾರೆ!

ಮೊನ್ನೆ ಮೊನ್ನೆಯವರಿಗೂ ಸಾಹಿತಿಗಳು ರಾಜಕೀಯ ಸಿದ್ಧಾಂತಗಳಿಂದ ದೂರವಿರಬೇಕೆಂದು ಉಪದೇಶಿಸುತ್ತಿದ್ದ ಈ ವೃದ್ಧ ಸಾಹಿತಿ ಈಗ ಹೀಗೆ ನೇರಾ ನೇರ ರಾಜಕೀಯ ವಂದಿಮಾಗಧತನಕ್ಕೆ ಇಳಿದಿರುವುದನ್ನು ನೋಡಿದರೆ ಇವರು ಸಾಹಿತ್ಯಾಶ್ರಮವನ್ನು ತೊರೆದಿರುವ ಸೂಚನೆ ನೀಡುತ್ತಾ ಕನ್ನಡ ಓದುಗರಿಗೆ ತಮ್ಮ ಮಹಾ ಭೈರಿಗೆಯಿಂದ ಬಿಡುಗಡೆ ನೀಡುತ್ತಾರೆಂದು ಆಶಿಸಬಹುದೆ?

**-ಡಿ.ಎಸ್. ನಾಗಭೂಷಣ**

## ಪುಸ್ತಕಾವಲೋಕನ

ಪು: **ಹಾದಿಗಲ್ಲು**(ಆತ್ಮವೃತ್ತಾಂತದ ಮೊದಲ ಚರಣ **ಲೇ: ಕೆ.ಎ. ದಯಾನಂದ ಪ್ರ: ಸಮನ್ವಿತ**, ಬೆಂಗಳೂರು(೯೮೪೪೧೯೨೯೫೨) ಪು :**೨೮೭ ಬೆ: ರೂ. ೨೫೦/-**

# ಜನಪರ ಅಧಿಕಾರಿಯೊಬ್ಬರ ಅವಸರದ ಆತ್ಮವೃತ್ತಾಂತ




**ಈ**ಗ ಕರ್ನಾಟಕ ಸರ್ಕಾರದಲ್ಲಿ ಐ.ಎ.ಎಸ್. ಅಧಿಕಾರಿಯಾಗಿರುವ ಕೆ.ಎ. ದಯಾನಂದ ಅವರ 'ಆತ್ಮವೃತ್ತಾಂತದ ಮೊದಲ ಚರಣ'ವಿದು. ಕೆ.ಆರ್ ನಗರದ ಆಸುಪಾಸಿನ ಹಳ್ಳಿಯೊಂದರ ಬಡ ಮತ್ತು ಹಿಂದುಳಿದ ವರ್ಗದ ಕುಟುಂಬದ ಬಾಲಕನೊಬ್ಬ ಸಿಕ್ಕ ಅವಕಾಶಗಳನ್ನು ಸತತ ಶ್ರಮ ಮತ್ತು ಛಲಗಳ ಮೂಲಕ ಸದುಪಯೋಗಪಡಿಸಿಕೊಂಡು ಹಿರಿಯ ಅಧಿಕಾರಿಯಾಗಿ ತಾನು ಬದುಕಿನಲ್ಲಿ ಪಟ್ಟ ಕಷ್ಟನಷ್ಟಗಳನ್ನು ಮರೆಯದೆ ಒಂದು ಬದ್ಧತೆಯಿಂದ ಜನಸೇವೆಯಲ್ಲಿ ತೊಡಗಿಕೊಂಡಿರುವ ಕಥೆಯನ್ನು ಹೇಳುವ ಕೃತಿಯಿದು. ತನ್ನಂಥದ್ದೇ ಹಿನ್ನೆಲೆಯ ಇತರರಿಗೆ ಇದು ಮಾರ್ಗದರ್ಶಿಯಾಗಬಹುದೆಂಬ ಆಶಯದೊಡನೆ ಇದನ್ನು ದಾಖಲಿಸಿರುವುದಾಗಿ ಲೇಖಕರು ಹೇಳಿಕೊಂಡಿದ್ದಾರೆ.

ಬಾಲ್ಯದ ಬಡತನದ ಹಳ್ಳಿ ಜೀವನದ ಆತಂಕಕಾರಿ ಕ್ಷಣಗಳ ಜೊತೆಗೆ ಕೌಟುಂಬಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನೋಟಗಳನ್ನು ಜೀವಂತವಾಗಿಯೇ ಕಟ್ಟಿಕೊಡುವ ಲೇಖಕರು ತಮ್ಮ ತಂದೆಯವರ ಅಧ್ಯಾತ್ಮಿಕ ದೃಷ್ಟಿ ಮತ್ತು ತಾಯಿಯ ಕುಟುಂಬ ಕಟ್ಟುವ ಹಠಗಳ ನಡುವೆ ತುಯ್ದಾಡುತ್ತಿದ್ದ ಬಾಲಕ ದಯಾನಂದನ ಬದುಕನ್ನು ಒಂದು ದಡಕ್ಕೆ ಒಯ್ಯಲು ನೆರವಾದವರು ಅವರ ಕುಟುಂಬದಲ್ಲೇ ಇದ್ದ ವಿದ್ಯಾವಂತ ಬಂಧುಗಳು. ಮುಖ್ಯವಾಗಿ ಅವರ ಸೋದರತ್ತೆ ಹುಚ್ಚಮ್ಮ. ಬೆಂಗಳೂರಿನಲ್ಲಿನ ಹುಜೂರ್ ಖಜಾನೆಯಲ್ಲಿ ನೌಕರಿಯಲ್ಲಿದ್ದ ಈ ಒಂಟಿ ಮಹಿಳೆ ತನ್ನ ಆಪ್ತ ಸಂಬಂದಿಕರ ಎಲ್ಲ ಮಕ್ಕಳ ಯೋಗಕ್ಷೇಮ ಮತ್ತು ಉನ್ನತಿಗಾಗಿಯೇ ತಮ್ಮ ಬದುಕನ್ನು ಮುಡಿಪಾಗಿಟ್ಟಿದ್ದ ಕುಟುಂಬ ವತ್ಸಲೆ.

ಈ ಕುಟುಂಬ ವತ್ಸಲೆಯ ಶ್ರದ್ಧೆಯಿಂದ ಉದ್ದೀಪನರಾದ ದಯಾನಂದ್ ಬೆಂಗಳೂರಿನಲ್ಲಿ ತಮ್ಮ ಇನ್ನೋರ್ವ ಹಿತೈಷಿ ಕೊಡಿಸಿದ ಡಿ ದರ್ಜೆಯ ನೌಕರಿಯೊಂದನ್ನು ಆಸರೆಯಾಗಿ ಆತುಕೊಂಡು ಬಿಎಡ್ ಸೇರಿದಂತೆ ಪದವಿ-ಸ್ನಾತಕೋತ್ತರ ಪದವಿಯವರೆಗೆ ಶಿಕ್ಷಣವನ್ನು ಪೂರೈಸಿದರು. ಈ ಮಧ್ಯೆ ಗೆಳೆಯರೊಬ್ಬರಿಂದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಪಾಸು ಮಾಡಲು ನೆರವಾಗುವುವೆಂದು ತಿಳಿದು ಸ್ಪರ್ಧಾ ಪರೀಕ್ಷೆಗಳ ಮಾರ್ಗದರ್ಶಿ ಪತ್ರಿಕೆಗಳನ್ನು ಓದುವುದರ ಜೊತೆಗೆ ತಮ್ಮ ಅಣ್ಣನೊಡನೆ ಸ್ವಯಂ ಅಧ್ಯಯನವನ್ನೂ ನಡೆಸಿ ಕರ್ನಾಟಕ ಆಡಳಿತ ಸೇವಾ (ಕೆಎಎಸ್) ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತಾರೆ. ಇದರ ನಡುವೆಯೇ ಕಾಲೇಜೊಂದರಲ್ಲಿ ಗುಮಾಸ್ತರಾಗಿ, ನಂತರ ಮಲೆನಾಡಿನ ಊರೊಂದರ ಪ್ರೌಢಶಾಲಾ ಶಿಕ್ಷಕರಾಗಿಯೂ ಕೆಲಸ ಮಾಡಿ ಅನುಭವ ಗಳಿಸುತ್ತಾರೆ.

ಕೆಎಎಸ್ ಅಧಿಕಾರಿಯಾದ ನಂತರ ದಯಾನಂದರ ಬದುಕಿನ ಬಂಡಿ ಹೊಸ ಎತ್ತರಗಳನ್ನು ಏರುತ್ತಲೇ ಹೋಗುವುದು ಸಹಜವೇ. ಆದರೆ ಈ ಪುಸ್ತಕದ ಈ ಭಾಗ ಅವರ ವೃತ್ತಿಜೀವನ ವಿವರಗಳಲ್ಲೇ ಸುತ್ತು ಹೊಡೆಯುತ್ತಾ ಸ್ವಲ್ಪ ನಿರಾಶೆಯನ್ನೇ ಉಂಟುಮಾಡುತ್ತದೆ. ಬದುಕಿನ ಈ ಘಟ್ಟದವರೆಗೆ ಹರಿದುಕೊಂಡು ಬಂದ ಕುಟುಂಬದ ಕಥೆ ಇಲ್ಲಿಗೇ ನಿಂತುಹೋದಂತಾಗಿ ಮುಂದೆ ಇವರು ಹೇಳುವ ತಮ್ಮ ಬದುಕಿನ ಯಶಸ್ಸಿನ ವೃತ್ತಾಂತದ ಆತ್ಮ ಬಿರುಕು ಬಿಟ್ಟಂತೆನಿಸುತ್ತದೆ. ಹಾಗಾಗಿಯೇ ಈ ಭಾಗ ದಯಾನಂದರು ತಮ್ಮ ವೃತ್ತಿಜೀವನದ ಎಷ್ಟೇ ಸಾಧನೆಗಳ ಕಥೆ ಹೇಳಿದರೂ ಅದು ಒಂದು ಮಾರ್ದವತೆಯನ್ನು ಕಳೆದುಕೊಂಡು ಸರ್ಕಾರಿ ಕಡತಗಳಲ್ಲಿನ ಹಾಳೆಗಳ ಸ್ವರೂಪ ಪಡೆದು ಭಾಷೆ ಬಡಕಲಾಗುತ್ತಾ ಹೋಗುತ್ತದೆ. ಬಹುಶಃ ಶಿಕ್ಷಕ ಅವಧಿಯ ಶಿಷ್ಯ ಶಂಕರ ಮತ್ತು ಕೃಷಿ ಸಾಧಕ ದುರ್ಗಪ್ಪನನ್ನು ಕುರಿತ ಎರಡು ಅಧ್ಯಾಯಗಳ ಹೊರತಾಗಿ.

ಅಂದ ಮಾತ್ರಕ್ಕೆ ದಯಾನಂದರ ವೃತ್ತಿಜೀವನ ಕುತೂಹಲಕಾರಿಯಾಗಿಲ್ಲ ಎಂದಲ್ಲ. ಆದರೆ ಇದು ಬರೀ ಸಾಧನೆಗಳ ಸರಮಾಲೆಯಂತೆ ನಿರೂಪಿಸಲ್ಪಟ್ಟಿದ್ದು, ಆ ಸಾಧನೆಗಳ ಹಿಂದಿನ-ಅವರದ್ದೂ ಸೇರಿದಂತೆ-ವ್ಯಕ್ತಿತ್ವಗಳ ಜೀವಂತಿಕೆಯ ಪಸೆ ಕಳೆದುಕೊಂಡತೆನಿಸುತ್ತದೆ. ಇವರು ಚಿಕ್ಕಮಗಳೂರು ಉಪವಿಭಾಗಾಧಿಕಾರಿಯಾಗಿದ್ದಾಗಲೇ ಅಲ್ಲಿ ನಕ್ಸಲ್ ಚಟುವಟಿಕೆಗಳು, ಕೊಲೆ, ಲೂಟಿ, ಎನ್‌ಕೌಂಟರ್ ಇತ್ಯಾದಿ ನಡೆದು, ಉಚ್ಚ್ರಾಯ ಸ್ಥಿತಿಯಲ್ಲಿದ್ದುದು. ಈ ಸಂದರ್ಭದಲ್ಲಿ ಇವರು ಶರಣಾದ ನಕ್ಸಲರ ಪುನರ್ವಸತಿಗಾಗಿ ತೆಗೆದುಕೊಂಡ ಕ್ರಮಗಳು ಮತ್ತು ಅದಕ್ಕಾಗಿ ಅವರು ಪಟ್ಟ ಶ್ರಮ ಮೆಚ್ಚುಗೆಗೆ ಅರ್ಹವಾಗಿದ್ದರೂ, ಆ ಸಂದರ್ಭದಲ್ಲಿ ಬಿಚ್ಚಿಕೊಳ್ಳುವ ಅವರ ವ್ಯಕ್ತಿತ್ವ ಅವರ ಅಧಿಕಾರ ಸ್ಥಾನದ ಆಚೆಗೆ ಕಾಣುವುದೇ ಇಲ್ಲ. ಅಲ್ಲಿನ ಕಾಡಿನ ಸೌಂದರ್ಯದ ವರ್ಣನೆಯ ಮತ್ತು ಅಲ್ಲಿ ಎದುರಾದ ಮುದುಕನೊಬ್ಬನ ಸಣ್ಣ ಭೇಟಿಯ ಸಾರ್ಥಕ ಕ್ಷಣಗಳ ಅನುಭವಗಳ ಹೊರತಾಗಿ. ಅಧಿಕಾರ ಸ್ಥಾನದಲ್ಲಿದ್ದಾಗ ಬರೆಯಲು ಸಾಧ್ಯವಾಗುವುದು ವರದಿಯನ್ನೇ ಹೊರತು ವೃತ್ತಾಂತವನ್ನಲ್ಲ ಎಂದು ಕಾಣುತ್ತದೆ. ಇವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದಾಗ 'ಅಕ್ಕ' ಸಮ್ಮೇಳನಕ್ಕಾಗಿ 'ಆಯ್ದ' ಸರ್ಕಾರಿ ಪರಿವಾರದೊಂದಿಗೆ ನಡೆಸಿದ ಅಮೆರಿಕಾದ ಪ್ರವಾಸ ಕುರಿತ ಬರಹದ ಬಗೆಗೂ ಇದೇ ಮಾತನ್ನು ಹೇಳಬಹುದು.

ಮಿಕ್ಕಂತೆ ಚಿಕ್ಕಮಗಳೂರಿನಲ್ಲಿದ್ದಾಗ ಚನ್ನಪ್ಪಗೌಡರಂತಹ ಹಿರಿಯ ಜಿಲ್ಲಾಧಿಕಾರಿಗಳ ಬಳಿ ತಾವು ಕಲಿತ ಆಡಳಿತದ ಅಪರೂಪದ ಪಾಠಗಳು, ಅವುಗಳ ಪ್ರಭಾವದಿಂದಾಗಿ ಜನಪ್ರತಿನಿಧಿಗಳ ಹಸ್ತಕ್ಷೇಪದ ಪ್ರಯತ್ನಗಳನ್ನು ಧಿಕ್ಕರಿಸಿ ಕೈಗೊಂಡ ಕೆಲ ದಿಟ್ಟ ಜನಪರ ನಿರ್ಧಾರಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮತ್ತು ರಾಜ್ಯ ಪತ್ರಾಗಾರದ ನಿರ್ದೇಶಕರಾಗಿ ಕನ್ನಡ ತಂತ್ರಜ್ಞಾನ ಪೋಷಣೆ ಮತ್ತು ಇ-ಆಡಳಿತಗಳ ಮೂಲಕ ಅಲ್ಲಿ ತಂದ ಬದಲಾವಣೆಗಳು, ವಿಶೇಷವಾಗಿ ಯಾರ ಗಮನವನ್ನೂ ಸೆಳೆಯದೆ ಅವಶೇಷದ ರೂಪ ತಾಳಿದ್ದ ಪತ್ರಾಗಾರಕ್ಕೆ ಸಂಬಂಧಪಟ್ಟಂತೆ ಎಂ.ಎಂ. ಕುಲಬರ್ಗಿಯವರಂತಹ ಹಿರಿಯ ಸಂಶೋಧಕರ ಗಮನ ಸೆಳೆಯುವಂತಹ ಹಲವು ಐತಿಹಾಸಿಕ ದಾಖಲೆಗಳ ಸಂರಕ್ಷಣಾ ಕಾರ್ಯಕ್ರಮಗಳನ್ನು ಕೈಗೊಂಡದ್ದು ದಯಾನಂದರ ಆಡಳಿತ ಶ್ರದ್ಧೆ ಮತ್ತು ನಾಡು-ನುಡಿಗಳ ಮೇಲಿನ ಪ್ರೀತಿಯ ಉದಾಹರಣೆಗಳಾಗಿ ಇಲ್ಲಿ ಗಮನ ಸೆಳೆಯುತ್ತವೆ. ಇಂಥಹುದೇ ಶ್ರದ್ಧೆ ಶಿವಮೊಗ್ಗದ ಜಿಲ್ಲಾಧಿಕಾರಿಗಳಾಗಿದ್ದಾಗ ಸೊರಬದ ಬಳಿಯ ದುರ್ಗಪ್ಪನೆಂಬ ಹೊಸ ಮಾದರಿಯ ಪ್ರಗತಿಪರ ರೈತನ ಮನೆಗೆ ನೀಡಿದ ಭೇಟಿ ಇಂಥದೇ ಇನ್ನೊಂದು ಉದಾಹರಣೆಯಾದರೆ. ಗುಣಮಟ್ಟ ಕೆಡಿಸುವ ಹಸ್ತಕ್ಷೇಪದ ಕಾರಣದ ಮೇಲೆ ಜನಪ್ರತಿನಿಧಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಬಹಳ ವರ್ಷಗಳಿಂದ ನಿಂತುಹೋಗಿದ್ದ ಸಹ್ಯಾದ್ರಿ ಉತ್ಸವವನ್ನು 'ಯಶಸ್ವಿ'ಯಾಗಿ ನಡೆಸಿದ್ದಾಗಿ ಹೆಮ್ಮೆಯಿಂದ ಹೇಳಿಕೊಳ್ಳುವುದು ಪ್ರಜಾಪ್ರಭುತ್ವವಾದಿಗಳಾರೂ ಒಪ್ಪಲಾಗದ ವಿಚಾರ. ಇಲ್ಲಿ ಗುಣಮಟ್ಟದ ಮಾತು ಚರ್ಚಾರ್ಹವೇ ಸರಿ.

ಆದರೆ ದಯಾನಂದ್ ಹೋದೆಡೆಯಲ್ಲೆಲ್ಲ ತಮ್ಮ ಜನಪರ ಕಾರ್ಯಕ್ರಮಗಳಲ್ಲಿ ಯಾವುದೇ ತರತಮವಿಲ್ಲದೆ ಇಡೀ ಅಧಿಕಾರಿವೃಂದವನ್ನು ತೊಡಗಿಸಿಕೊಳ್ಳುವ ಆವೃತ ಆಡಳಿತ ಶೈಲಿ ವಿಶೇಷವಾದದ್ದು ಮತ್ತು ಇದೇ ಅವರ ಆಡಳಿತದ ಯಶಸ್ಸಿನ ಗುಟ್ಟೂ ಇರಬಹುದು. ದಯಾನಂದರ ಸಾಮಾಜಿಕ ಹಿನ್ನೆಲೆ ಕಲಿಸಿದ ಪಾಠವಿದಿರಬಹುದು, ಇವರಿಗೆ ತಾವು ಕೆಲಸ ಮಾಡಿದ ಕಛೇರಿಗಳ ಎಲ್ಲ ಸ್ತರಗಳ ಸಿಬ್ಬಂದಿಯ ಹೆಸರುಗಳೂ ನೆನಪಿನಲ್ಲಿದ್ದಂತಿವೆ. ಒಳ್ಳೆಯ ಆಡಳಿತಗಾರನ ಲಕ್ಷಣವಿದು. ಆದರೆ ಚಿಕ್ಕಮಗಳೂರಿನಲ್ಲಿ ನಕ್ಸಲರ ಅನುಮಾನಕ್ಕೀಡಾಗಿ ಕ್ರೂರವಾಗಿ ಹತವಾದ ರೈತ ಕುಟುಂಬದ ಹುಡುಗನೊಬ್ಬ ಅನಾಥನಾದಾಗ ಆತನ ಸ್ಥಳೀಯ ಪೋಷಕರಾಗಿ ದಯಾನಂದರು ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದ ಆತನನ್ನು ಪ್ರತಿಷ್ಠಿತ ಇಂಗ್ಲಿಷ್ ಮಾಧ್ಯಮದ ಶಾಲೆಗೆ ಸೇರಿಸಿ ಆತನ ಹಾಸ್ಟೆಲ್‌ನ ಒಂದಿಷ್ಟು 'ಇತರ' ಖರ್ಚುಗಳಿಗಾಗಿ ಪೇಜಾವರಶ್ರೀಗಳ ಬಳಿ ನೆರವಿಗೆ ಧಾವಿಸುವಾಗ ಇದನ್ನೆಲ್ಲ ಮರೆತದ್ದು ಏಕೋ ಗೊತ್ತಾಗದು!

ಈ ಪುಸ್ತಕದಲ್ಲಿ ವ್ಯಕ್ತವಾಗುವ ದಯಾನಂದರ ಆಡಳಿತಗಾರನ ವ್ಯಕ್ತಿತ್ವದ ಎರಡು ಮುಖ್ಯ ದೌರ್ಬಲ್ಯಗಳೆಂದರೆ ಸಾಹಿತ್ಯ-ಸಂಸ್ಕೃತಿ ಲೋಕ ಕುರಿತ ಮಿತಿಮೀರದ ಆಸ್ಥೆ ಮತ್ತು ಆಕರ್ಷಣೆ. ಇದರಲ್ಲಿನ 'ಸಾಧಕರ ನೆರಳಿನಲ್ಲಿ' ಎಂಬ ಅತಿ ದೀರ್ಘ ಅಧ್ಯಾಯದಲ್ಲಿ ಸಾಹಿತಿಗಡಣದ ಸನ್ನಿಧಿ ಮತ್ತು ಅವರ ಶ್ಲಾಘನೆಗಳಿಂದುಂಟಾದ ಧನ್ಯತೆಯ ಕ್ಷಣಗಳ ದಾಖಲೆಗಳೆ ಸಾಕ್ಷಿ. ಈ ಮುಗ್ಧತೆಯೇ ಅವರಿಗೆ ತಮ್ಮ (ಕನ್ನಡ-ಸಂಸ್ಕೃತಿ)ಇಲಾಖೆ ಪ್ರಾಯೋಜಿಸುವ ಎಲ್ಲ 'ದುಬಾರಿ' ಕಾರ್ಯಕ್ರಮಗಳ ಉಸ್ತುವಾರಿ ಸದಾ ಅದೇ ಮುವ್ವರ ಕೈಗೇ ಏಕೆ ಹೋಗುತ್ತದೆ ಎಂದು ಯೋಚಿಸಲು ಅಸಾಧ್ಯ ಮಾಡಿದಂತಿದೆ. ದಯಾನಂದರ ಇನ್ನೊಂದು ದೌರ್ಬಲ್ಯವೆಂದರೆ ಸಂದರ್ಭ ಸಿಕ್ಕರೆ ಪ್ರವಚನ ಮಾಡತೊಡಗುವುದು. ಈ ಮಾಹಿತಿ ಪಾಂಡಿತ್ಯದ ಪ್ರದರ್ಶನದ ದೌರ್ಬಲ್ಯದ ಪರಿಚಯ ಬೇಕಾದರೆ ಈ ಪುಸ್ತಕದ 'ಒಂದು ಕನ್ನಡ ರಾಜ್ಯೋತ್ಸವ ಭಾಷಣ' ಎಂಬ ಅಧ್ಯಾಯವನ್ನು ಓದಬಹುದು.

**-ಡಿ.ಎಸ್. ನಾಗಭೂಷಣ**

ಪು: **ತುಸುವೆ ಕುಡಿವ ಗಂಡನ ಕೊಡು ತಾಯಿ...**(ಪ್ರಬಂಧಗಳು) ಲೇ: **ಗಣೇಶ ಅಮೀನಗಡ**
ಪ್ರ: ಕವಿತಾ ಪ್ರಕಾಶನ, ಮೈಸೂರು(೯೮೮೦೧೦೫೫೨೫) ಪು:**೧೬೭** ಬೆಲೆ:**ರೂ. ೧೬೦/-**

# ಕುತೂಹಲದ ಕಣ್ಣುಗಳು ಕಂಡ ಬದುಕಿನ ಲಲಿತ ಚಿತ್ರಗಳು

**ಈ** ಸಂಕಲನದಲ್ಲಿ ಇಪ್ಪತ್ತೆಂಟು ಪ್ರಬಂಧಗಳಿವೆ. ಇಲ್ಲಿನ ಪ್ರಬಂಧಗಳ ವಸ್ತುವೈವಿಧ್ಯತೆ, ಆ ವಸ್ತು ಸೃಜಿಸಿದ ಅನುಭವ ಜಗತ್ತಿನ ಪರಿಶೀಲನೆ ಹಾಗೂ ಲಲಿತ ಪ್ರಬಂಧಗಳ ಸಂರಚನೆಯ ಕುರಿತ ಚರ್ಚೆ ಎಂಬೆರೆಡು ನೆಲೆಗಳಲ್ಲಿ ಪರಿಶೀಲಿಸುವ ಟಿಪ್ಪಣಿಯಿದು.

ಈ ಸಂಕಲನದಲ್ಲಿ ನಮ್ಮ ಗಮನ ಸೆಳೆಯುವುದು ವಸ್ತುವಿನ ವೈವಿಧ್ಯತೆ. ರೈಲುಪಯಣ, ಮರ್ಕಟಸೇನೆ, ಅಗರಬತ್ತಿ, ಇಸ್ತ್ರಿಪೆಟ್ಟಿಗೆ, ಸಿನೆಮಾ, ವಿವಾಹ ಮೊದಲರಾತ್ರಿಯಿಂದ ಆರಂಭಿಸಿ ಶೌಚಾಲಯ, ಸಾವಿನವರೆಗು ವಿಸ್ತರಿಸಿದೆ. ಇಲ್ಲಿನ ವಸ್ತುವಿನ ಪಟ್ಟಿಯೆ ಪ್ರಬಂಧಗಳು ಒಳಗೊಳ್ಳುವ ಅನುಭವ ಜಗತ್ತಿನ ವೈವಿಧ್ಯತೆ, ವಿಶಾಲತೆಯನ್ನು




ನಿರೂಪಿಸುತ್ತದೆ. ವರ್ತಮಾನ ಹಾಗೂ ಗತದ ಬದುಕಿನ ಮುಖಾಮುಖಿಯ ಚಿತ್ರಣ ಅನೇಕ ಪ್ರಬಂಧಗಳಲ್ಲಿದೆ. ಗತಿಸಿದ ಬದುಕನ್ನು ರಮ್ಯವಾಗಿ ಕಾಣುವ ಮನೋಭಾವ ಅಲ್ಲಲ್ಲಿದೆ. ಇದು ಸಂದ ಬದುಕಿನ ಹಳಹಳಿಕೆಯಂತೆ ಕಂಡರು, ಕೆಲವು ಪ್ರಬಂಧಗಳಲ್ಲಿ ನವಜೀವನ ಕ್ರಮದಲ್ಲಾದ ಪಲ್ಲಟಗಳನ್ನು ಹಿಡಿದಿಡಲು ಗತದ ನೆನಪುಗಳನ್ನು ದುಡಿಸಿಕೊಳ್ಳುವ ಅರ್ಥಪೂರ್ಣತೆಯು ಇಲ್ಲಿದೆ.

ವರ್ತಮಾನದ ಜೀವನದಲ್ಲಿ ವ್ಯಕ್ತಿಯ ಧೋರಣೆ, ವ್ಯಕ್ತಿತ್ವದಲ್ಲಾದ ಪಲ್ಲಟಗಳ ಗುರುತಿಸುವಿಕೆಯಷ್ಟೆ ಅಲ್ಲ ಮಾನವೀಯ ಸಂಬಂಧಗಳಲ್ಲಾದ ಪಲ್ಲಟಗಳನ್ನು ಕುರಿತು ಚಿಂತಿಸುತ್ತದೆ. ಸಾಂಘಿಕ ಬದುಕಿನ ನೆಲೆ ಕಣ್ಮರೆಯಾಗಿ ವ್ಯವಹಾರಿಕ ಬದುಕು, ಯಾಂತ್ರಿಕತೆ ಮುನ್ನಲೆಗೆ ಬರುತ್ತಿರುವುದರ ಸೂಚನೆ ಈ ಪ್ರಬಂಧಗಳಲ್ಲಿದೆ. 'ಚಾಳಕ್ಕೆ ಚಾಳಿ ಥೂ' ಮತ್ತು 'ಶವಸಂಸ್ಕಾರ ಎಂಬ ಜಾತ್ರೆ' ಎಂಬೆರೆಡು ಪ್ರಬಂಧಗಳಲ್ಲಿ ಈವಿಚಾರ ದಟ್ಟವಾಗಿ ಅಭಿವ್ಯಕ್ತವಾಗಿದೆ. ಚಾಳಗಳಲ್ಲಿ ವಾಸಿಸುವ ಕುಟುಂಬಗಳ ನಡುವೆ ಅಸೂಯೆ, ಸ್ಪರ್ಧೆ, ಜಗಳ ಇರುವಂತೆಯೆ ಮೈತ್ರಿ, ಪರಸ್ಪರ ಹಂಚಿಕೊಂಡು ತಿನ್ನುವ ಮಾನವೀಯ ಸಂಬಂಧಗಳು ಇವೆ. ಇಂತಹ ಸಾಂಘಿಕ ಬದುಕಿನ ತಾಣಗಳು ಕಣ್ಮರೆಯಾಗಿ ಆ ತಾಣದಲ್ಲಿ ವಾಣಿಜ್ಯಸಂಕೀರ್ಣಗಳು ತಲೆಎತ್ತುತ್ತಿವೆ. ಸಾವು ಸೃಷ್ಟಿಸಬಲ್ಲ ಮರುಕ ಆಧುನಿಕ ಸಮಾಜದಲ್ಲಿ ಕಾಣೆಯಾಗುತ್ತಿರುವ ವಿಷಾದ ಎರಡನೆ ಪ್ರಬಂಧದಲ್ಲಿದೆ. ಅಪಾರ್ಟಮೆಂಟ್‌ಗಳ ಬದುಕಲ್ಲಿ ನೆರೆಯವರ ಸಾವಿನ ವಿಚಾರವು ತಿಳಿಯುವುದಿಲ್ಲ. ತಿಳಿದರು ಅದಕ್ಕೆ ಯಾಂತ್ರಿಕವಾಗಿ ಸ್ಪಂದಿಸುವ ಭಾವಶೂನ್ಯತೆಯಿದೆ.

ಕುಲಕಸುಬು ಸೇರಿ ವಿವಿಧ ವೃತ್ತಿಗಳನ್ನು ಅವಲಂಬಿಸಿದ ಜನರ ಬದುಕಿನಲ್ಲಿ ಸೃಷ್ಟಿಯಾದ ಬಿಕ್ಕಟ್ಟುಗಳ ಅನಾವರಣ ಇಲ್ಲಿನ ಪ್ರಬಂಧಗಳಲ್ಲಿದೆ. ಕೌದಿ ಹೊಲಿಯುವವರು, ಗಾದಿ ತಯಾರಿಸುವವರು, ಬಾಸಿಂಗ ತಯಾರಕರು, ವಾಚ್ ರಿಪೇರಿಯವರು, ಗಾಣದ ವೃತ್ತಿಯವರು, ಹಂದಿ ಸಾಕುವವರು, ನಗಾರಿ ಕಲಾವಿದರು, ಅಗರಬತ್ತಿ ತಯಾರಕರು, ಈಚಲು ಪೊರಕೆ, ಪ್ಲಾಸ್ಟಿಕ್ ಸಮಾನುಗಳನ್ನು ತಲೆಯ ಮೇಲೆ ಹೊತ್ತು ಮಾರುವವರು ಇವರೆಲ್ಲ ವರ್ತಮಾನದ ಬದುಕಿನಿಂದ ಬಾಧಿತರಾದವರು. ಇಲ್ಲಿ ಸೂಚಿಸಿದ ಎಷ್ಟೊ ವೃತ್ತಿಗಳು ವರ್ತಮಾನದಲ್ಲಿ ತಮ್ಮ ಅಸ್ತಿತ್ವಕ್ಕಾಗಿ ಸೆಣಸುತ್ತಿವೆ. ಗಡಿಯಾರ ರಿಪೇರಿಯನ್ನು ಅವಲಂಬಿಸಿ ಬದುಕನ್ನು ಕಟ್ಟಿಕೊಂಡ ವರ್ಗವು ಎದುರಿಸುತ್ತಿರುವ ಸಂಕಟ ವಿಚಿತ್ರವಾದದು. ಈ ವೃತ್ತಿಯನ್ನು ನಂಬಿದವರು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಹೆಣಗುತ್ತಿದ್ದಾರೆ. ಪಾರಂಪರಿಕ ವೃತ್ತಿಗಳಾದ ಗಾಣದವರು, ಬಾಸಿಂಗ ತಯಾರಕರು, ಕೌದಿ ಹೊಲಿಯುವವರು ಸೇರಿದಂತೆ ಮೇಲೆ ಸೂಚಿಸಿದ ಅನೇಕರು ಆಧುನಿಕತೆಯ ಪ್ರಹಾರದ ಸಂಕಟಗಳಿಗೆ ಒಳಗಾಗಿದ್ದಾರೆ. ಇಂತಹ ಕುಲಕಸುಬಿನವರ ಸಮಸ್ಯೆಗಳ ಕಡೆ ಇಲ್ಲಿನ ಪ್ರಬಂಧಗಳು ನಮ್ಮ ಗಮನ ಸೆಳೆಯುತ್ತವೆ.

ಇಲ್ಲಿನ ಪ್ರಬಂಧಗಳು ಆಧುನಿಕತೆಯಿಂದ ವೃತ್ತಿಗಾರರದ ಬದುಕಿನಲ್ಲಿ ಎದುರಾದ ಬಿಕ್ಕಟ್ಟುಗಳ ನಿರೂಪಣೆಗಷ್ಟೆ ಸೀಮಿತವಾಗಿಲ್ಲ. ಆಧುನಿಕತೆಯ ಸವಾಲುಗಳನ್ನು ಮೀರಿ ಹೊಸಬದುಕನ್ನು ಕಟ್ಟಿಕೊಂಡ ನಿದರ್ಶನಗಳು 'ನಗಾರಿ ನಾದ', 'ಆಹಾ ಮೈಸೂರು ಪಾಕ್' ಪ್ರಬಂಧಗಳಲ್ಲಿದೆ. ಮೈಸೂರಿನ ಪೌರಕಾರ್ಮಿಕರು ಸಾಂಪ್ರದಾಯಿಕ ನಗಾರಿ ಕಲೆಯನ್ನು ಆಧುನಿಕ ಸಂದರ್ಭಕ್ಕೆ ಒಗ್ಗಿಸಿ ಯಶಸ್ವಿಯಾಗಿದ್ದಾರೆ. ಸಿಹಿತಿಂಡಿ ಮಾರಾಟದವರು, ಅಗರಬತ್ತಿ ತಯಾರಕರು ಸಹ ಯಶಸ್ವಿಯಾಗಿದ್ದಾರೆ.

ಇಲ್ಲಿನ ಬರಹಗಳನ್ನು ಲೇಖಕರು ಲಲಿತ ಪ್ರಬಂಧಗಳು ಎಂಬ ಹೆಸರಿನಲ್ಲಿ ಸಂಕಲಿಸಿದ್ದಾರೆ. ನಿಯಮ ರಾಹಿತ್ಯತೆಯೇ ಪ್ರಬಂಧಗಳ ಮುಖ್ಯ ಲಕ್ಷಣವಾದರೂ, ಲಲಿತಪ್ರಬಂಧಗಳಿಗೆ ಕೆಲವು ನಿರ್ದಿಷ್ಟ ಲಕ್ಷಣಗಳಿವೆ. ಈ ದೃಷ್ಟಿಯಿಂದ ಇಲ್ಲಿನ ಪ್ರಬಂಧಗಳನ್ನು ಗಮನಿಸಿದಾಗ ಕೆಲವು ಲಲಿತಪ್ರಬಂಧಗಳ ಕಕ್ಷೆಯಿಂದ ಹೊರಗುಳಿಯುತ್ತವೆ. 'ಸುಗಂಧದ್ರವ್ಯ..', 'ನಿಂತ ಗಡಿಯಾರ..', 'ಕೌದಿ ಅಪ್ಪಿಕೊಂಡವರು' ಇತ್ಯಾದಿ ಬರಹಗಳು ಉತ್ತಮ ಲೇಖನಗಳಾಗಿ ಗಮನ ಸೆಳೆಯುತ್ತವೆ. ಆದರೆ ಲಲಿತಪ್ರಬಂಧಗಳ ಚೌಕಟ್ಟಿನಲ್ಲಿ ಗ್ರಹಿಸುವುದು ಕಷ್ಟ. ಇಲ್ಲಿನ ಕೆಲವು ಪ್ರಬಂಧಗಳಲ್ಲಿ ಒಂದೇ ಅನುಭವದ ವಿಭಿನ್ನ ಮಜಲುಗಳು ನಿರೂಪಿತವಾಗಿವೆ. ಆದರೆ ಈ ಅನುಭವಗಳು ಸಹಸಂಬಂಧದ ನಂಟನ್ನು ಬೆಳೆಸಿಕೊಳ್ಳದೆ ಬಿಡಿಬಿಡಿಯಾಗಿ ಪ್ರತ್ಯೇಕ ಅನುಭವಗಳಾಗಿ ನಿಲ್ಲುತ್ತವೆ. 'ಚಾಮುಂಡಿ ಭಾವಬಂಡಿ', ಮದುವೆಯ ಸುತ್ತಮುತ್ತ' ಈ ತರಹದ ಪ್ರಬಂಧಗಳು ತನ್ನ ಆಂತರ್ಯದಲ್ಲಿ ವಿಭಿನ್ನ ಅನುಭವಗಳನ್ನು ಒಳಗೊಂಡು ಸಹಸಂಬಂಧದ ನಂಟನ್ನು ಹೊಂದದೆ ಲಲಿತಪ್ರಬಂಧದ ಇಡಿಯಾದ ಸೊಗಸನ್ನು ಕಳೆದುಕೊಳ್ಳುತ್ತವೆ. ಇದು ಈ ಪ್ರಬಂಧಗಳ ಮಿತಿಯಾಗಿದೆ. 'ರಸಮಯ ರಾತ್ರಿ..' ಮಂಗಳ ಸಂಗ' ಇತ್ಯಾದಿ ಕೆಲವು ಉತ್ತಮ ಲಲಿತಪ್ರಬಂಧಗಳು ಇಲ್ಲಿವೆ. ಪ್ರಕಾರ ಬದ್ಧತೆಯ ಹಂಗನ್ನು ಬಿಟ್ಟು ಈ ಪ್ರಬಂಧಗಳನ್ನು ಓದಿದರೆ ಲೋಕವ್ಯಾಪಾರದ ವಿಭಿನ್ನ ನೆಲೆಗಳ ದರ್ಶನ ಮಾಡಿಸುತ್ತವೆ.

**–ಸುಧಾಕರ ದೇವಾಡಿಗ ಬಿ**

ಪು: ಜೇನುಮಲೆಯ ಹೆಣ್ಣು (ಕವನಗಳು) ಲೇ: **ಹೆಚ್.ಆರ್. ಸುಜಾತಾ** ಪ್ರ: **ನಗುವನ ಕ್ರಿಯೇಷನ್ಸ್**, ಬೆಂಗಳೂರು (೯೯೦೦೦೯೫೩೩೨) ಪು: **೧೦೮** ಬೆ: **ರೂ.೧೦೦/–**

## ವರ್ಣನೆಯಲ್ಲಿ ಹುದುಗಿದ ಕಾವ್ಯ




**'ಜೇನುಮಲೆಯ ಹೆಣ್ಣು'** ಕಾವ್ಯಗುಚ್ಛವು ಹೆಚ್.ಆರ್.ಸುಜಾತಾ ಅವರ ಪ್ರಾಯೋಗಿಕ ಕಾವ್ಯ. ತಮಿಳು *ಸಂಗಂ* ಕಾವ್ಯದಿಂದ ಪ್ರಭಾವಿತಗೊಂಡ ಜಾನಪದೀಯ ಶೈಲಿಯಲ್ಲಿರುವ ಪ್ರೇಮಕಥೆಗಳ ನಿರೂಪಣಾ ಕಾವ್ಯ. ತಮಿಳು ಕಾವ್ಯ ಮೀಮಾಂಸೆಯಲ್ಲಿ ಸೂಚಿಸುವ ಅಗಂ(ಅಹಂ) ಕಾವ್ಯವು ಪ್ರೇಮವು ಪ್ರಕೃತಿಯ ಸಾಂಗತ್ಯದಲ್ಲಿ ಉಜ್ವಲವಾಗುವ ರಮ್ಯ ಕಾವ್ಯದ ಮಾದರಿ. ಗಂಡು ಹೆಣ್ಣುಗಳ ಅನಾದಿ ಕಾಲದ ಆಕರ್ಷಣೆ, ಪ್ರೇಮ, ವಿರಹಗಳೆಂಬ ಭಾವಗಳು ಆದಿಮವಾದ ಭಾವಗಳು. ಈ ವಸ್ತುನಿಷ್ಠ ಕಾವ್ಯವಾಗಿಸುವ ನಿಟ್ಟಿನಲ್ಲಿ ಇಲ್ಲಿನ ಕಾವ್ಯಗುಚ್ಛವು ವಿನ್ಯಾಸಗೊಂಡಿದೆ. ಪ್ರಸ್ತುತ ಕಾವ್ಯಗುಚ್ಛದಲ್ಲಿ ಸಾಹಿತ್ಯಿಕ ಲಾವಣಿ ರೂಪದ ಕವಿತೆಗಳು ಒಂದೊಂದು ತೆನೆಯಲ್ಲಿಯೂ ಸಂಕಲಿತಗೊಂಡಿವೆ.

ಜೇನುಮಲೆಯ ಗಂಡು 'ಹೊಳೆಮಿತ್ರ' ಮತ್ತು ಜೇನುಮಲೆಯ ಹೆಣ್ಣಿನ ಪ್ರೇಮ ಮತ್ತು ಅವರ ಸುತ್ತ ಕವಿದುಕೊಂಡ ಪ್ರಕೃತಿಯೇ ಇಲ್ಲಿ ಮೂಲಕಥೆ. ಆ ಗಂಡುಹೆಣ್ಣುಗಳ ನಡುವೆ ಮಿಂಚುಳ್ಳಿ, ಪಿಕಳಾರಗಳಂತಹ ಪಕ್ಷಿಗಳು ದೂತ ಕೆಲಸವನ್ನು ಮಾಡುತ್ತವೆ. ಪಕ್ಷಿಸಂಕುಲದ ಸಂಸಾರದ ಮಾದರಿಯಲ್ಲಿಯೇ ಅಲ್ಲಿಂದ ಇಲ್ಲಿಗೆ ವಲಸೆ ಬರುವ ಗಂಡು ಹೆಣ್ಣು ತಮ್ಮ ಬದುಕು ಪ್ರೇಮದಲ್ಲಿ ಸಾಗಿಸುತ್ತಾರೆ. ಪ್ರೇಮಕ್ಕೆ ಸಂಚಾರಿ ಭಾವವಾದ ವಿರಹ ಮತ್ತು ಸಣ್ಣ ಸಣ್ಣ ಆತಂಕಗಳು ಈ ಕವಿತೆಗಳಲ್ಲಿ ಉಸಿರಾಡಿವೆ. ಆದ್ದರಿಂದಲೇ **'ಕಣ್ಣಲ್ಲೇ ದೀಪ ಹಚ್ಚಿ ಎನ್ನ/ಕಾದಳೊ ಏನೋ'/ 'ನನ್ನುದ್ದಕ್ಕೂ ಹೊದ್ದು ಮಲಗುವವಳ', 'ಮುಟ್ಟಬೇಕು ಮುಟ್ಟಿ / ಮುತ್ತ ಮತ್ತಿನ ವಿಷವುಟ್ಟಬೇಕು'** ಎನ್ನುವ ಗಾಢ ವ್ಯಾಮೋಹೀ ಸಾಲುಗಳು ಈ ಕಾವ್ಯಗಳದ್ದಕ್ಕೂ ಕಾಣಸಿಗುತ್ತವೆ. ಗಂಡುಹೆಣ್ಣುಗಳ ಪ್ರೇಮದ ರಮ್ಯತೆಯು ಅತಿರೇಕವಾಗಿ, ಅವರ ಬದುಕಿನ ಒಲುಮೆಯೊಂದೇ ಮುನ್ನೆಲೆಗೆ ಬರುತ್ತದೆ. ಉಪ್ಪಾರ ಹುಡುಗ–ಬೆಸ್ತರ ಹುಡುಗಿ, ರಾತ್ರೋರಾತ್ರಿ ಉಳಿಯಲು ಬಂದ ಅತಿಥಿ ಗಂಡಿನೊಡನೆ ಓಡಿಹೋಗುವ ಹುಡುಗಿ ತಂತಮ್ಮ ಪ್ರೀತಿಗಳಲ್ಲಿ ಅಸೀಮರಾಗಿದ್ದಾರೆ. ಆದರೆ ಕೊನೆಯ ತೆನೆ ಮಾತ್ರ ಪ್ರೇಮದಾಚೆ ಯುದ್ಧವನ್ನು ಕಾವ್ಯದ ಕೇಂದ್ರವಾಗಿಸಿಕೊಂಡಿದೆ. ಅಲ್ಲಿ ಯುದ್ಧದ ಬಗೆಗಿನ ಹೇವರಿಕೆಯ ಪದ್ಯಗಳಿವೆ. ಹೆಣ್ಣುಕುಲಕ್ಕೆ ಯುದ್ಧ ಬೇಕಿಲ್ಲ ಎನ್ನುವುದನ್ನು ಪ್ರತಿಪಾದಿಸುತ್ತವೆ. **ಯುದ್ಧ ಬೇಡವೆನ್ನುತ್ತಾಳೆ / ಒಲವ ಹಂಬಲದ ಹುಡುಗಿ / ಸನಿಹವೊಂದಿದ್ದರೆ ಸಾಮ್ರಾಜ್ಯದಿ ಕಸೇಕೆ?** ಎನ್ನುವ ಸಾಲುಗಳು ಅಲ್ಲಿ ಕಾಣುತ್ತವೆ.

ಈ ಕಾವ್ಯವು ಪ್ರೇಮದ ನವಿರಾದ ಭಾವಗಳನ್ನು ಸೊಗಸಾಗಿ ಹಿಡಿದಿಟ್ಟಿದೆಯಾದರೂ ವರ್ಣನೆಯೇ ಸಂವೇದನೆಯನ್ನಾಗಿ ಭಾವಿಸಿ ಬಿಟ್ಟಿದೆ, ಇಡೀ ಕಾವ್ಯವು ವರ್ಣಕ ಕಾವ್ಯದ ಮಾದರಿಯಲ್ಲಿದ್ದು ವರ್ಣನೆಗಳೇ ತುಂಬಿಕೊಂಡಿವೆ. ಎಲ್ಲ ವರ್ಣಕ ಕಾವ್ಯಗಳಂತೆ ಇಲ್ಲಿಯೂ ವರ್ಣನೆಗಳು ಅನುಪಮವೆನಿಸಿದರೂ ಕೇಂದ್ರವಿಲ್ಲದೆ ಅವು ಶಬ್ದಾಡಂಬರಗಳಾಗಿ ತೋರುತ್ತವೆ. ಇನಿದಾದ ಸಾಲುಗಳು ಮಾಧುರ್ಯ ಹಾಗು ಭಾವತೀವ್ರತೆಯ ರಮ್ಯತೆಯನ್ನು ಹೆಚ್ಚಿಸಿವೆ ನಿಜ, ಆದರೆ ಅವು ಅನೇಕ ಬಾರಿ ಶಿಷ್ಟಾಚಾರದ ಪ್ರೇಮಾಭಿವ್ಯಕ್ತಿಯನ್ನು ಮೀರಿ ಸಾಗುವುದಿಲ್ಲ. ವ್ಯಾಮೋಹವಿಲ್ಲದೆ ವೃತ್ತಿಪರವಾಗಿ ಬರೆಯುವ ಕಾವ್ಯದ ಸಾಲುಗಳ ಮರಗಟ್ಟುವಿಕೆ ಇಲ್ಲಿಯೂ ಇದೆ. ಕವಿತೆಯ ಮಾಂತ್ರಿಕ ಸ್ಪರ್ಶದ ಪ್ರಶ್ನೆ ಸುಜಾತಾ ಅವರ ಪ್ರಸ್ತುತ ಕಾವ್ಯದ ಪ್ರಶ್ನೆಯೇ ಅಲ್ಲ ಸಾಮಾನ್ಯವಾಗಿ ಸಾಂಪ್ರದಾಯಿಕವಾಗಿ ಇರುವ ಕಾವ್ಯ ಮಾದರಿಗಳನ್ನು ಬಳಸಿಕೊಂಡು ಕಟ್ಟುವ ಕಾವ್ಯಗಳು ಎದುರಿಸುವ ಸವಾಲೇ ಇದು. ಶಿಷ್ಟಾಚಾರಗಳ ಚೌಕಟ್ಟಿನಲ್ಲಿಯೇ ಸೃಜನಶೀಲತೆಯನ್ನು ನಿರೂಪಿಸುವ ಒತ್ತಡವನ್ನು ಎದುರಿಸಬೇಕಾಗುತ್ತದೆ. ಕ್ಲಾಸಿಕಲ್ ಕಾವ್ಯಗಳಲ್ಲಿ ಅಷ್ಟಾದಶ ವರ್ಣನೆಯ ನಿಯಮವು ಅವರನ್ನು ಕುಂಟುವಂತೆ ಮಾಡುವ ಹಾಗೆ ಶಿಷ್ಟಾಚಾರವನ್ನು ಅನುಸರಿಸಿ ಬರೆಯಲೆತ್ನಿಸಿರುವ ಈ ಕವಿತೆಗಳ ಗುಚ್ಛಗಳಲ್ಲಿಯೂ ಇಂತಹ ತೊಡಕುಗಳಿವೆ.

ಇಷ್ಟಾದರೂ ಕನ್ನಡ ಕಾವ್ಯದ ಅಸ್ತಿತ್ವದ ಪ್ರಶ್ನೆ ಎತ್ತುತ್ತಿರುವ ಸಂದರ್ಭದಲ್ಲಿ ಕನ್ನಡದ ಕವಯತ್ರಿಯರು ಕಾವ್ಯವನ್ನು ಗಂಭೀರವಾಗಿ ತೆಗೆದುಕೊಂಡು ಮಹಾಕಾವ್ಯ, ದೀರ್ಘ ಕಾವ್ಯ, ಪರ್‌ಫಾರ್ಮೆನ್ಸ್ ತರದ ಅನೇಕ ಪ್ರಯೋಗಗಳನ್ನು ಮಾಡುತ್ತಿರುವುದು ಆಶಾದಾಯಕವೆಂತಲೇ ಹೇಳಬಹುದು. ಆ ನಿಟ್ಟಿನಲ್ಲಿ ಸುಜಾತಾ ಅವರ ಪ್ರಯೋಗವು ಸ್ವಾಗತಾರ್ಹ.

**–ಆರ್. ತಾರಿಣಿ ಶುಭದಾಯಿನಿ**

**'ಹೊಸ ಮನುಷ್ಯ' ಓದುಗರಿಗೆಲ್ಲರಿಗೂ**
**'ದಸರಾ'ದ ಹಾರ್ದಿಕ ಶುಭಾಶಯಗಳು**



**ಚೆನ್ನವೀರ ಕಣವಿ**
ಮತ್ತು ಕುಟುಂಬ
ಧಾರವಾಡ

---

**'ಹೊಸ ಮನುಷ್ಯ' ಓದುಗರಿಗೆಲ್ಲರಿಗೂ**
**'ದಸರಾ'ದ ಹಾರ್ದಿಕ ಶುಭಾಶಯಗಳು**



**ಜಿ.ಕೆ. ಗೋವಿಂದರಾವ್**
ಮತ್ತು ಕುಟುಂಬ
**ಬೆಂಗಳೂರು**

**‘ಹೊಸ ಮನುಷ್ಯ’ ಓದುಗರಿಗೆಲ್ಲರಿಗೂ**
**‘ಗಾಂಧಿ ಜಯಂತಿ’ಯ ಹಾರ್ದಿಕ**
**ಶುಭಾಶಯಗಳು**




**ಶ್ರೀ ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರ**
**ಗೊಟ್ಟಿಗೆರೆ, ಬನ್ನೇರುಘಟ್ಟ ರಸ್ತೆ,**
**ಬೆಂಗಳೂರು–೫೬೦೦೮೩**

## ತಿಂಗಳ ಕೊನೆಯ ಸಾಲುಗಳು



ಅಂತರಂಗದ ದನಿಯೇ ಸತ್ಯ.. ಆದರೆ ಆಧುನಿಕತೆ ಅಂತರಂಗದಲ್ಲಿ ಗದ್ದಲವೆಬ್ಬಿಸಿ ಈ ದನಿಯಿಂದ ಹಲವು ಪ್ರತಿಧ್ವನಿಗಳನ್ನು ಸೃಷ್ಟಿಸಿರುವುದರಿಂದ ಯಾವ ದನಿ ಅಹಿಂಸೆಯೊಂದಿಗೆ ಇರುವುದೋ ಅದನ್ನೇ ಸತ್ಯವೆಂದು ಗುರುತಿಸಬಹುದಾಗಿದೆ.

-ಮಹಾತ್ಮ ಗಾಂಧಿ

**ಶುಭಾಶಯಗಳೊಂದಿಗೆ,**

**ಬಿ. ಚಂದ್ರಶೇಖರ್**
**ಸಂಯೋಜನಾಧಿಕಾರಿಗಳು**
**ರಾಷ್ಟ್ರೀಯ ಸೇವಾ ಯೋಜನೆ**
**ಮೈಸೂರು ವಿಶ್ವವಿದ್ಯಾನಿಲಯ**
**ಮೈಸೂರು**

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/20119-21**

ಇವರಿಗೆ \ To

If undelivered, please return to D.S. Nagabhushana, Editor, ‘Hosa Manushya’, ’HIG-5, ‘Nudi’, Kallahalli Extension, Vinoba Nagara, Shivamogga -577204( Karnataka)